ಮಂಗಳವಾರ, ಫೆಬ್ರುವರಿ 28, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಮುಂಬೈನಲ್ಲಿ ನಡೆದ ಝೀ ಸಿನಿ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಪಾಲ್ಗೊಂಡಿದ್ದರು

₹5 ಕೋಟಿ ಹೆಚ್ಚುವರಿ ಅನುದಾನಕ್ಕೆ ಸಿಎಂಗೆ ಪ್ರಸ್ತಾವ: ₹2.55 ಕೋಟಿ ಜಿಎಸ್‌ಟಿ!

ಹಾವೇರಿ ಸಾಹಿತ್ಯ ಸಮ್ಮೇಳನಕ್ಕೆ ₹25 ಕೋಟಿ ವೆಚ್ಚ!

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ಜನವರಿ 6,7 ಮತ್ತು 8ರಂದು ಇಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬರೋಬ್ಬರಿ ₹25 ಕೋಟಿ ವೆಚ್ಚವಾಗಿದೆ. ಇದುಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲೇ ದಾಖಲೆಯ ವೆಚ್ಚ ಎನಿಸಿದೆ.

ಸರ್ಕಾರ ಈ ಹಿಂದೆ, ಮೈಸೂರಿನಲ್ಲಿ ನಡೆದಿದ್ದ 83ನೇ ಸಾಹಿತ್ಯ ಸಮ್ಮೇಳನಕ್ಕೆ ₹8 ಕೋಟಿ, ಧಾರವಾಡದಲ್ಲಿ ನಡೆದಿದ್ದ 84ನೇ ಸಾಹಿತ್ಯ ಸಮ್ಮೇಳನಕ್ಕೆ ₹10 ಕೋಟಿ ಹಾಗೂ ಕಲಬುರಗಿಯಲ್ಲಿ ನಡೆದಿದ್ದ 85ನೇ ಸಾಹಿತ್ಯ ಸಮ್ಮೇಳನಕ್ಕೆ ₹14 ಕೋಟಿ ಅನುದಾನ ನೀಡಿತ್ತು.

'ಸಿಎಂ ತವರು ಜಿಲ್ಲೆ'ಯಲ್ಲಿ ನಡೆದ ನುಡಿಜಾತ್ರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ₹20 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಇದು ಕಳೆದ 85 ಸಮ್ಮೇಳನಗಳಿಗೆ ನೀಡಿದ್ದ ಅನುದಾನದಲ್ಲೇ ಗರಿಷ್ಠ ಮೊತ್ತವಾಗಿತ್ತು. ಆದರೆ, ಈ ಮೊತ್ತವನ್ನೂ ಮೀರಿ ₹5 ಕೋಟಿ ಹೆಚ್ಚುವರಿ ಹಣ ಖರ್ಚು ಮಾಡಲಾಗಿದೆ.

ವೇದಿಕೆ ನಿರ್ಮಾಣಕ್ಕೆ ₹ 5 ಕೋಟಿ, ವಸತಿ ವ್ಯವಸ್ಥೆಗೆ ₹ 2 ಕೋಟಿ, ಸಾರಿಗೆ ವ್ಯವಸ್ಥೆಗೆ ₹ 89 ಲಕ್ಷ, ವಿದ್ಯುತ್ ಅಲಂಕಾರಕ್ಕೆ ₹ 33 ಲಕ್ಷ, ಕನ್ನಡ ರಥ ಸಂಚಾರಕ್ಕೆ ₹ 25 ಲಕ್ಷ, ಸಾಂಸ್ಕೃತಿಕ ತಂಡಗಳಿಗೆ ₹ 62 ಲಕ್ಷ, ಮೆರವಣಿಗೆಗೆ ₹ 37 ಲಕ್ಷ.. ಹೀಗೆ ವಿವಿಧ ಸಮಿತಿಗಳು ಖರ್ಚಿನ ಪಟ್ಟಿಯನ್ನು ಸಲ್ಲಿಸಿವೆ.

ಆಹಾರಕ್ಕೆ ₹8 ಕೋಟಿ: ಕೆಲ ಸಮಿತಿಗಳು ನಿಗದಿಪಡಿಸಿದ್ದ ಮೊತ್ತಕ್ಕಿಂತ ಹೆಚ್ಚು ಖರ್ಚು ಮಾಡಿವೆ. ಆಹಾರ ಸಮಿತಿಗೆ ₹5 ಕೋಟಿ ನಿಗದಿಪಡಿಸಲಾಗಿತ್ತು. ಆದರೆ, ₹8 ಕೋಟಿ ಖರ್ಚಾಗಿದೆ ಎಂದು ಜಿಲ್ಲಾಡಳಿತಕ್ಕೆ ವಿವರ ಸಲ್ಲಿಸಲಾಗಿದೆ.

'ನಿರೀಕ್ಷೆಗಿಂತ ಹೆಚ್ಚು ಜನ ಸಮ್ಮೇಳನಕ್ಕೆ ಬಂದ ಕಾರಣ ₹3 ಕೋಟಿ ಹೆಚ್ಚುವರಿ ಹೊರೆಯಾಗಿದೆ' ಎನ್ನುತ್ತಾರೆ ಅಧಿಕಾರಿಗಳು.

ಅದೇ ರೀತಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ₹75 ಲಕ್ಷ ಹೆಚ್ಚುವರಿ ಅನುದಾನ ಕೋರಿದೆ. ಸಾಂಸ್ಕೃತಿಕ ತಂಡಗಳ ಆಯ್ಕೆ ಸಮಿತಿಗೆ ಹೆಚ್ಚುವರಿಯಾಗಿ ₹20 ಲಕ್ಷ , ನೀರು ಪೂರೈಕೆಗೆ ಹೆಚ್ಚುವರಿಯಾಗಿ ₹16 ಲಕ್ಷ... ಹೀಗೆ ವಿವಿಧ ಸಮಿತಿಗಳು ಹೆಚ್ಚುವರಿ ಖರ್ಚಿನ ಪಟ್ಟಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿವೆ.

₹2.55 ಕೋಟಿ ಜಿಎಸ್‌ಟಿ!: ವಿವಿಧ ಸಮಿತಿಗಳಿಗೆ ಹಂಚಿಕೆಯಾಗಿದ್ದ ಅನುದಾನದ ಮೇಲೆ ಶೇ 5ರಿಂದ ಶೇ 18ರವರೆಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಕಲಾಗಿದ್ದು, ಬರೋಬ್ಬರಿ ₹2.55 ಕೋಟಿ ಜಿಎಸ್‌ಟಿಗೆ ಖರ್ಚಾಗಿದೆ. ಎಂಸಿಎ ಸೇವಾ ಶುಲ್ಕ (ಶೇ 5ರಂತೆ) ಒಟ್ಟು ₹92 ಲಕ್ಷ ತಗುಲಿದೆ.

ಆದಾಯ ಕಡಿತ: ಸಮ್ಮೇಳನಕ್ಕೆ 20 ಸಾವಿರ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಿ, ₹1 ಕೋಟಿ ಪ್ರತಿನಿಧಿ ಶುಲ್ಕದ ಆದಾಯ ನಿರೀಕ್ಷಿಸಲಾಗಿತ್ತು. ಆನ್‌ಲೈನ್ ನೋಂದಣಿಯ ತಾಂತ್ರಿಕ ತೊಡಕು ಮತ್ತು ಕಸಾಪ ಸದಸ್ಯತ್ವ ಕಡ್ಡಾಯ ನಿಯಮಗಳಿಂದ ಕೇವಲ 10 ಸಾವಿರ ಪ್ರತಿನಿಧಿಗಳಷ್ಟೇ ಬಂದರು. ಇದರಿಂದ ₹50 ಲಕ್ಷ ಆದಾಯ ತಗ್ಗಿತು. ಸರ್ಕಾರಿ ನೌಕರರ ಒಂದು ದಿನದ ವೇತನದಿಂದ ಅಂದಾಜು ₹1.40 ಕೋಟಿ ಆದಾಯ ಬರಬೇಕಿತ್ತು. ಆದರೆ, ಬಂದದ್ದು ₹20 ಲಕ್ಷ ಮಾತ್ರ ಎನ್ನುತ್ತಾರೆ ಅಧಿಕಾರಿಗಳು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ

ಮಂಡ್ಯ: ಡಿಸೆಂಬರ್‌ನಲ್ಲಿಯೇ ಸಮ್ಮೇಳನ

ಮಂಡ್ಯ: '87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿಸೆಂಬರ್ 2ನೇ ವಾರಾಂತ್ಯ ಅಥವಾ ಕ್ರಿಸ್‌ಮಸ್ ರಜೆಯಲ್ಲಿ ಆಯೋಜಿಸಲಾಗುವುದು. ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರನ್ನು ಆಹ್ವಾನಿಸಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಡಾ.ಮಹೇಶ್ ಜೋಶಿ ಹೇಳಿದರು.

ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, 'ತಂತ್ರಜ್ಞಾನ ಬಳಸಿಕೊಂಡು ಸಮ್ಮೇಳನಕ್ಕೆ ಹೊಸ ರೂಪ ನೀಡಲಾಗುವುದು. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರೊಂದಿಗೆ ವಿದೇಶ ಪ್ರವಾಸ ಮಾಡಿ ಕನ್ನಡಿಗರನ್ನು ಆಹ್ವಾನಿಸಲಾಗುವುದು' ಎಂದರು.

'ಡಿಸೆಂಬರ್ ತಿಂಗಳಲ್ಲೇ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ದಿನಾಂಕವನ್ನು ಅಂತಿಮಗೊಳಿಸಲಾಗುವುದು' ಎಂದರು.

'ಹಾವೇರಿ ಸಮ್ಮೇಳನದಲ್ಲಿ ಕೈಗೊಂಡಿದ್ದ 4 ಪ್ರಮುಖ ನಿರ್ಣಯಗಳಲ್ಲಿ 2 ಅನುಷ್ಠಾನಗೊಂಡಿವೆ. ನ್ಯಾಯಾಲಯಗಳಲ್ಲಿ ಕನ್ನಡದಲ್ಲಿಯೇ ತೀರ್ಪು ಬರೆಯುವ ಸಂಬಂಧ ಮಸೂದೆಗೆ ಎರಡೂ ಸದನದಲ್ಲಿ ಅನುಮೋದನೆ ದೊರೆತಿದೆ' ಎಂದರು.

'ನಾಡು–ನುಡಿಗಾಗಿ ಹೋರಾಟ ನಡೆಸಿರುವವರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ವಾಪಸು ಪಡೆಯುವ ಚರ್ಚೆ ಆರಂಭವಾಗಿದೆ' ಎಂದು ತಿಳಿಸಿದರು.

ಗದ್ದೆ ಬಯಲಿನಲ್ಲಿ ಸಾಹಿತ್ಯ ಹಬ್ಬ

'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 125 ಎಕರೆ ಜಾಗ ಕೇಳಿದ್ದಾರೆ. ಆದರೆ, ನಾವು 500 ಎಕರೆ ಜಾಗ ಕೊಡುತ್ತೇವೆ. ಈಗಾಗಲೇ 2 ಕಡೆ ಜಾಗ ಗುರುತಿಸಲಾಗಿದೆ' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎಚ್.ಎಲ್. ನಾಗರಾಜು ತಿಳಿಸಿದರು. 'ಮಂಡ್ಯ ಕೆರೆಯಂಗಳದ ಗದ್ದೆ ಬಯಲಿನಲ್ಲಿ ವಿಶಾಲವಾದ ಜಾಗವಿದೆ. ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ, ಸ್ಯಾಂಜೊ ಆಸ್ಪತ್ರೆ ಹಿಂದಿನ ಜಮೀನನ್ನೂ ಗುರುತಿಸಲಾಗಿದೆ' ಎಂದರು. ಡಾ.ಮಹೇಶ್ ಜೋಶಿ ಎರಡೂ ಜಾಗಗಳನ್ನು ಪರಿಶೀಲಿಸಿದರು.

ಹಾವೇರಿಯಲ್ಲಿ ಮಾದರಿ ಸಾಹಿತ್ಯ ಸಮ್ಮೇಳನ ಮಾಡಿದ್ದೇವೆ. ₹5 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆಗೆ ಸಿಎಂಗೆ ಪ್ರಸ್ತಾವ ಸಲ್ಲಿಸಲಾಗುವುದು
ಶಿವರಾಮ ಹೆಬ್ಬಾರ್
ಜಿಲ್ಲಾ ಉಸ್ತುವಾರಿ ಸಚಿವ

₹20 ಕೋಟಿಯಲ್ಲೇ ಸಮ್ಮೇಳನ ನಡೆಸಲು ಯೋಜನೆ ರೂಪಿಸಲಾಗಿತ್ತು. ನಿರೀಕ್ಷೆಗೂ ಮೀರಿ ಜನ ಬಂದ ಕಾರಣ ಆಹಾರಕ್ಕೆ ಹೆಚ್ಚುವರಿ ₹3 ಕೋಟಿ ಖರ್ಚು ತಗುಲಿದೆ
ರಘುನಂದನಮೂರ್ತಿ
ಜಿಲ್ಲಾಧಿಕಾರಿ

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪಂಚಮಸಾಲಿ ಸಮುದಾಯದವರು ಅರೆಬೆತ್ತಲಾಗಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಮೀಸಲಾತಿಗಾಗಿ ಅರೆಬೆತ್ತಲೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿರುವ ಸಮುದಾಯದವರು, ಅರೆಬೆತ್ತಲೆಯಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಜ. 14ರಿಂದ ಪ್ರತಿಭಟನೆ ಆರಂಭವಾಗಿದೆ.

'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ' ಎಂದು ಪಟ್ಟು ಹಿಡಿದಿರುವ ಸಮುದಾಯದವರು, ರಸ್ತೆಯಲ್ಲಿ ಅರೆಬೆತ್ತಲಾಗಿ ಪ್ರತಿಭಟಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಸಮುದಾಯದ ಮಕ್ಕಳ ಶಿಕ್ಷಣ ಹಾಗೂ ಯುವಜನರ ಉದ್ಯೋಗಕ್ಕಾಗಿ ಮೀಸಲಾತಿ ಹೋರಾಟ ನಡೆಯುತ್ತಿದೆ. ಬೇಡಿಕೆ ಈಡೇರಿಸುವ ಬಗ್ಗೆ ಆರು ಬಾರಿ ಭರವಸೆ ನೀಡಿದ್ದ ಮುಖ್ಯಮಂತ್ರಿ, ಮಾತು ತಪ್ಪಿದ್ದಾರೆ. ಮಾಡು ಇಲ್ಲವೇ ಮೀಸಲಾತಿ ಪಡೆದು ಮಡಿ ಘೋಷವಾಕ್ಯದೊಂದಿಗೆ ಈ ಬಾರಿ ಹೋರಾಟ ಆರಂಭಿಸಲಾಗಿದೆ' ಎಂದು ಪ್ರತಿಭಟನಕಾರರು ಹೇಳಿದರು.

ಎಚ್‌ಎಸ್‌ವಿ ಸೇರಿ ನಾಲ್ವರಿಗೆ ಪ್ರಶಸ್ತಿ

ಆನೇಕಲ್‌ನಲ್ಲಿ ಮಾ. 11ರಿಂದ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಾರ್ಚ್ 11 ಮತ್ತು 12ರಂದು 18ನೇ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನವನ್ನು ಬೆಂಗಳೂರು ನಗರ ಜಿಲ್ಲೆಯ ಆನೇಕಲ್‌ನ (ಅತ್ತಿಬೆಲೆ ರಸ್ತೆ) ಸರ್ಕಾರಿ ಹೊಸ ಮಾಧ್ಯಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

'ಸಮ್ಮೇಳನದ ಗೀತೋತ್ಸವದಲ್ಲಿ ಬೆಳಿಗ್ಗೆ 10ರಿಂದ ರಾತ್ರಿ 10ರ ತನಕ ಎರಡು ದಿನವೂ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಮ್ಯಾಂಡೋಲಿನ್ ವಾದಕ ಎನ್.ಎಸ್.ಪ್ರಸಾದ್ ಅವರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ' ಎಂದು ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

'2003ರಲ್ಲಿ ಪರಿಷತ್ತು ಸ್ಥಾಪನೆಯಾಗಿದ್ದು, ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಒಟ್ಟು 17 ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಲಾಗಿತ್ತು. ಆನೇಕಲ್‌ನಲ್ಲಿ ನಡೆಯುವ ಈ ಬಾರಿಯ ಸಮ್ಮೇಳನದಲ್ಲಿ ಸುಗಮ ಸಂಗೀತ ಕಲಾವಿದರು ಹಾಗೂ ಕವಿಗಳು ಭಾಗವಹಿಸಲಿದ್ದಾರೆ. ಕವಿ ದೊಡ್ಡರಂಗೇಗೌಡ ಸಮ್ಮೇಳನ ಉದ್ಘಾಟಿಸಲಿದ್ದಾರೆ' ಎಂದರು.

ನಾಲ್ವರಿಗೆ ಪ್ರಶಸ್ತಿ: '2021ನೇ ಸಾಲಿನ 'ಕಾವ್ಯಶ್ರೀ ಪ್ರಶಸ್ತಿ'ಯನ್ನು ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ, 'ಭಾವಶ್ರೀ ಪ್ರಶಸ್ತಿ'ಯನ್ನು ಪುತ್ತೂರು ನರಸಿಂಹ ನಾಯಕ್, 2022ನೇ ಸಾಲಿನ 'ಕಾವ್ಯಶ್ರೀ ಪ್ರಶಸ್ತಿ'ಯನ್ನು ಕವಿ ಡಾ.ಕಾ.ವೆಂ. ಶ್ರೀನಿವಾಸಮೂರ್ತಿ, 'ಭಾವಶ್ರೀ ಪ್ರಶಸ್ತಿ'ಯನ್ನು ಗಾಯಕಿ ಡಾ.ರೋಹಿಣಿ ಮೋಹನ್ ಅವರಿಗೆ ಮಾರ್ಚ್ 12ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ಪತ್ರ, ಫಲಕ ಹಾಗೂ ₹ 10 ಸಾವಿರ ನಗದು ಒಳಗೊಂಡಿದೆ. ಸಮಾರೋಪ ಸಮಾರಂಭದಲ್ಲಿ ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕವಿ ಬಿ.ಆರ್. ಲಕ್ಷ್ಮಣರಾವ್, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಗರ ಶ್ರೀನಿವಾಸ ಉಡುಪ, ಕಾರ್ಯಾಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ಹಾಜರಿದ್ದರು.


ಎಚ್‌ಎಸ್‌ವಿ

ನರಸಿಂಹ ನಾಯಕ್


ಶ್ರೀನಿವಾಸಮೂರ್ತಿ

ರೋಹಿಣಿ

ಗಾಯಕಿ ಕೆ.ಎಸ್. ಚಿತ್ರಾ, ಡಾ.ಸಿ.ಆರ್. ಚಂದ್ರಶೇಖರ್‌ಗೆ ರಾಷ್ಟ್ರೀಯ ಪುರಸ್ಕಾರ

ಬ್ರಹ್ಮಾವರ (ಉಡುಪಿ): ಕೋಟದ ಮನಸ್ಮಿತ ಫೌಂಡೇಶನ್ ಹಾಗೂ ಮಣೂರಿನ ಗೀತಾನಂದ ಫೌಂಡೇಶನ್ ಹಾಗೂ ಯುವ ಮೆರಿಡಿಯನ್ ಸಹಭಾಗಿತ್ವದಲ್ಲಿ ನೀಡಲಾಗುವ ಡಾ.ಎಸ್.ಜಾನಕಿ ರಾಷ್ಟ್ರೀಯ ಪ್ರಶಸ್ತಿ –2023ಗೆ ಪ್ರಸಿದ್ಧ ಗಾಯಕಿ ಕೆ.ಎಸ್.ಚಿತ್ರಾ, ಮನಸ್ಮಿತ ರಾಷ್ಟ್ರೀಯ ಪುರಸ್ಕಾರಕ್ಕೆ ಮನೋವೈದ್ಯ, ಸಾಹಿತಿ ಡಾ.ಸಿ.ಆರ್. ಚಂದ್ರಶೇಖರ್ ಅವರನ್ನು ಆಯ್ಕೆ ಮಾಡಲಾಗಿದೆ.

ಎಸ್.ಜಾನಕಿ ರಾಷ್ಟ್ರೀಯ ಪುರಸ್ಕಾರ ₹1ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ, ಮನಸ್ಮಿತ ರಾಷ್ಟ್ರೀಯ ಪುರಸ್ಕಾರ ₹25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಮಾ.24ಕ್ಕೆ ರಂದು ಕೋಟೇಶ್ವರದ ಯುವ ಮೆರಿಡಿಯನ್ ಒಪೆರಾ ಪಾರ್ಕ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮನಸ್ಮಿತ ಫೌಂಡೇಶನ್ ನಿರ್ದೇಶಕ ಡಾ. ಪ್ರಕಾಶ್ ತೋಳಾರ್ ತಿಳಿಸಿದ್ದಾರೆ.


ಡಾ.ಸಿ.ಆರ್ ಚಂದ್ರಶೇಖರ್

ಕೆ.ಎಸ್. ಚಿತ್ರಾ

'ಪ್ರಜಾವಾಣಿ' ವಾಕಥಾನ್: ಮೇರೆ ಮೀರಿದ ಉತ್ಸಾಹ

ಗೌರಿಬಿದನೂರು (ಚಿಕ್ಕಬಳ್ಳಾಪುರ): 'ಪ್ರಜಾವಾಣಿ' ಅಮೃತ ಮಹೋತ್ಸವದ ಅಂಗವಾಗಿ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಉತ್ತಮ ಸ್ಪಂದನೆ ದೊರೆಯಿತು.

ಪ್ರಜಾಪ್ರಭುತ್ವದ ದೊಡ್ಡ ಹಬ್ಬವಾದ ಚುನಾವಣೆ ಮತ್ತು ಮತದಾನದ ಮಹತ್ವಗಳನ್ನು ಮನೆ, ಮನಗಳಿಗೆ ಮುಟ್ಟಿಸುವಲ್ಲಿ ವಾಕಥಾನ್ ಯಶಸ್ವಿಯಾಯಿತು.

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ಸ್ವೀಪ್ ಸಮಿತಿ ಹಾಗೂ ನಗರಸಭೆಯ ಸಹಯೋಗದಲ್ಲಿ ನಡೆದ ವಾಕಥಾನ್‌ಗೆ ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಚಾಲನೆ ನೀಡಿದರು.

ಮುಂಜಾನೆ ನಗರದ ಡಾ. ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಆರಂಭವಾದ ವಾಕಥಾನ್‌ನಲ್ಲಿ ಮಕ್ಕಳು, ಮಹಿಳೆಯರು, ವೃದ್ಧರು ಬಿಸಿಲನ್ನೂ ಲೆಕ್ಕಿಸದೆ ಉತ್ಸಾಹದಿಂದ ಹೆಜ್ಜೆ ಹಾಕಿದರು.

ನೂರಾರು ಪ್ರಜಾವಾಣಿ ಓದುಗರು, ಅಧಿಕಾರಿಗಳು, ವಿವಿಧ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು, ವರ್ತಕರು, ಸಾಹಿತಿಗಳು, ವಿವಿಧ ಸಂಘ, ಸಂಸ್ಥೆ ಮತ್ತು ಸಂಘಟನೆಗಳ ಸದಸ್ಯರು ಮತ್ತು ಸಾರ್ವಜನಿಕರು ವಾಕಥಾನ್ ಮೆರುಗು ಹೆಚ್ಚಿಸಿದರು. ಜಿಲ್ಲಾಧಿಕಾರಿ ಜತೆಯಾಗಿ ಅಧಿಕಾರಿಗಳ ತಂಡ ಕೂಡ ನಡಿಗೆಯಲ್ಲಿ ಪಾಲ್ಗೊಂಡರು. ವಾಕಥಾನ್ ಮುಗಿಯುವವರೆಗೂ ಮಾರ್ಗಮಧ್ಯೆ ಸಾರ್ವಜನಿಕರು ಸೇರಿಕೊಳ್ಳುತ್ತಲೇ ಇದ್ದರು.

'ಪ್ರಜಾಪ್ರಭುತ್ವದ ಸೌಂದರ್ಯವೇ ಚುನಾವಣೆ', 'ಚುನಾವಣೆ ಪ್ರಜಾತಂತ್ರದ ಹಬ್ಬ', 'ಪ್ರತಿಯೊಬ್ಬರ ಮತವೂ ದೊಡ್ಡ ಪ್ರಜಾಶಕ್ತಿ' ಹೀಗೆ ಚುನಾವಣೆಯ ಬಗ್ಗೆ ಜಾಗೃತಿ ಮೂಡಿಸುವ ಫಲಕಗಳನ್ನು ಹಿಡಿದು ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು. ದಾರಿಯುದ್ದಕ್ಕೂ ಮತದಾನಕ್ಕೆ ಸಂಬಂಧಿಸಿದ ಜಾಗೃತಿ ಗೀತೆ, ಘೋಷಣೆ ಮೊಳಗಿದವು.

ನಗರದ ಪ್ರಮುಖ ರಸ್ತೆಗಳ ಮೂಲಕ ತೆರಳಿದ ವಾಕಥಾನ್‌ಗೆ ಎಂ.ಜಿ ವೃತ್ತದಲ್ಲಿ ತೆರೆ ಬಿದ್ದಿತು. ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ನಾಗರಾಜ್ ಅವರು, 'ಪ್ರಜಾವಾಣಿ' ಕನ್ನಡ ಸಾಹಿತ್ಯ ಕ್ಷೇತ್ರದ ಅಮೃತವಾಹಿನಿ ಎಂದು ಬಣ್ಣಿಸಿದರು.

ನಾಡಿಗೆ 'ಪ್ರಜಾವಾಣಿ' ಕೊಡುಗೆಗಳ ಬಗ್ಗೆ ತಹಶೀಲ್ದಾರ್ ಮಹೇಶ್ ಎಸ್. ಪತ್ರಿ, ತಾಲ್ಲೂಕು ಪಂಚಾಯಿತಿ ಇ.ಒ ಆರ್.ಹರೀಶ್, ನಗರಸಭೆ ಪೌರಾಯುಕ್ತೆ ಡಿ.ಎಂ.ಗೀತಾ ಮುಂತಾದವರು ಮನದುಂಬಿ ಶ್ಲಾಘಿಸಿದರು.

ಗೌರಿಬಿದನೂರಿನಲ್ಲಿ ಸೋಮವಾರ ನಡೆದ 'ಪ್ರಜಾವಾಣಿ' ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು, ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಉತ್ಸಾಹದಿಂದ ಹೆಜ್ಜೆ ಹಾಕಿದರು.

ಗುರುರಾಜ ಕೆಂಧೂಳಿ ನಿಧನ

ರಬಕವಿ ಬನಹಟ್ಟಿ (ಬಾಗಲಕೋಟೆ): ಜಾನಪದ ಹಾಡುಗಾರ ಗುರುರಾಜ ಕೆಂಧೂಳಿ (72) ರಬಕವಿಯಲ್ಲಿ ಸೋಮವಾರ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಬಡ ಕುಟುಂಬದಲ್ಲಿ ಜನಿಸಿದ್ದ ಗುರುರಾಜ ಬಾಲ್ಯದಿಂದಲೇ ಜಾನಪದ ಹಾಡುಗಾರಿಕೆ ಮೈಗೂಡಿಸಿಕೊಂಡಿದ್ದರು. 300ಕ್ಕೂ ಹೆಚ್ಚು ಧ್ವನಿಸುರುಳಿಗಳಿಗೆ ಧ್ವನಿಯಾಗಿದ್ದರು. 150ಕ್ಕೂ ಹೆಚ್ಚು ಜಾನಪದ ಹಾಗೂ ಭಕ್ತಿ ಗೀತೆಗಳನ್ನು ರಚಿಸಿ, ಧ್ವನಿ ಸುರುಳಿಗೆ ಅಳವಡಿಸಿ ಹಾಡಿದ್ದಾರೆ.

ಇವರು ಹಾಡಿದ 'ಶ್ರೀಶೈಲ ಮಲ್ಲಿಕಾರ್ಜುನ ಭಕ್ತಿ ಗೀತೆ'ಗಳು ಬಹಳಷ್ಟು ಪ್ರಸಿದ್ಧಿ ಪಡೆದಿದ್ದವು. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 2003-04ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತ್ತು. ಅಂತ್ಯಕ್ರಿಯೆ ರಬಕವಿಯಲ್ಲಿ ನಡೆಯಿತು.

ಸಂಕ್ಷಿಪ್ತ ಸುದ್ದಿ

ನೀಟ್–ಪಿಜಿ ಮುಂದೂಡಲು 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮಾರ್ಚ್ 5ಕ್ಕೆ ನಿಗದಿಯಾಗಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್–ಪಿಜಿ) ಮುಂದೂಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ನೀಟ್–ಪಿಜಿ ಪ್ರವೇಶ ಪರೀಕ್ಷೆ ದಿನಾಂಕವನ್ನು ಮುಂದೂಡುವಂತೆ ಕೋರಿ ಇಬ್ಬರು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಪರೀಕ್ಷೆಗೆ ತಯಾರಿ ಮಾಡಿಕೊಳ್ಳಲು ಸಾಕಷ್ಟು ಸಮಯ ದೊರಕಿಲ್ಲ. ವೃತ್ತಿ ತರಬೇತಿ (ಇಂಟರ್ನ್‌ಶಿಪ್) ದಿನಾಂಕವನ್ನು ಆಗಸ್ಟ್ 11ರವರೆಗೆ ನಿಗದಿ ಮಾಡಿರುವುದರಿಂದ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಆಗಸ್ಟ್ 11ರ ನಂತರ ನಡೆಸಬೇಕು ಎಂದು ಅವರು ಕೋರಿದ್ದರು. ಪ್ರತಿ ರಾಜ್ಯಗಳು ಪ್ರತ್ಯೇಕ ಇಂಟರ್ನ್‌ಶಿಪ್ ಅವಧಿಯನ್ನು ಜಾರಿ ಮಾಡಿರುವುದರಿಂದ ಈ ಸಮಸ್ಯೆಗಳು ಉದ್ಭವಿಸಿವೆ ಎಂದು ಅರ್ಜಿಯಲ್ಲಿ ನಮೂದಿಸಿದ್ದರು.

ಪ್ರಶ್ನೆಪತ್ರಿಕೆ ಸೋರಿಕೆ ವದಂತಿ: ಸಿಬಿಎಸ್‌ಇ ಎಚ್ಚರಿಕೆ

ನವದೆಹಲಿ: ಬೋರ್ಡ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುತ್ತಿವೆ ಎಂಬ ವದಂತಿಗಳ ಬಗ್ಗೆ ಜಾಗೃತರಾಗಿರಿ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಸೋಮವಾರ ಎಚ್ಚರಿಕೆ ನೀಡಿದೆ.

ಇಂತಹ ವದಂತಿ ಹರಡಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದೂ ಹೇಳಿದೆ.

'2023ರ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದೆ ಎಂದು ಯೂಟ್ಯೂಬ್, ಫೇಸ್‌ಬುಕ್, ಟ್ವಿಟರ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳ ಮೂಲಕ ಕೆಲವರು ವದಂತಿಗಳನ್ನು ಹರಡುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇಂತಹ ಕೃತ್ಯಗಳಲ್ಲಿ ತೊಡಗಿರುವ ವ್ಯಕ್ತಿಗಳು ಅಥವಾ ಗುಂಪುಗಳು ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ ಗೊಂದಲ ಉಂಟು ಮಾಡಿ, ಹಣಕ್ಕೆ ಬೇಡಿಕೆಯಿಟ್ಟು ಮೋಸ ಮಾಡುವ ಸಾಧ್ಯತೆ ಇದೆ' ಎಂದೂ ಹೇಳಿದ್ದಾರೆ.

ಪರೀಕ್ಷೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಹರಡಿಸುವವರನ್ನು ಪತ್ತೆ ಹಚ್ಚಿ ಸೂಕ್ತ ಕ್ರಮಕೈಗೊಳ್ಳುವಂತೆ ದೆಹಲಿ ಪೊಲೀಸರಿಗೆ ಸೂಚಿಸಲಾಗಿದೆ ಎಂದೂ ವಿವರಿಸಿದ್ದಾರೆ.

'ಸುಳ್ಳು ಸುದ್ದಿ ಹರಡುವುದರಲ್ಲಿ ವಿದ್ಯಾರ್ಥಿಗಳು ಭಾಗಿಯಾಗಿದ್ದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದೂ ಮಂಡಳಿ ಎಚ್ಚರಿಕೆ ನೀಡಿದೆ.

10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಯು ನಡೆಯುತ್ತಿದ್ದು, ಏಪ್ರಿಲ್ 5ರಂದು ಕೊನೆಗೊಳ್ಳಲಿದೆ.

ಖೇರಾಗೆ ಮಧ್ಯಂತರ ಜಾಮೀನು ವಿಸ್ತರಣೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಅವಹೇಳನ ಮಾಡಿದ್ದಾರೆ ಎಂಬ ಆರೋಪದಲ್ಲಿ ಬಂಧಿತರಾಗಿದ್ದ ಕಾಂಗ್ರೆಸ್ ನಾಯಕ ಪವನ್ ಖೇರಾ ಅವರಿಗೆ ನೀಡಿರುವ ಮಧ್ಯಂತರ ಜಾಮೀನನ್ನು ಮಾರ್ಚ್ 3ರವರೆಗೆ ವಿಸ್ತರಿಸಿರುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಖೇರಾ ಅವರನ್ನು ಅಸ್ಸಾಂ ಪೊಲೀಸರು ಕಳೆದ ವಾರ ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದರು. ಬಂಧನ ಕುರಿತು ಅಸ್ಸಾಂ ಪೊಲೀಸರ ಹೇಳಿಕೆಯನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠಕ್ಕೆ ಸಲ್ಲಿಸಿದರು. ಬಳಿಕ ಖೇರಾ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮಾ. 3ಕ್ಕೆ ನಿಗದಿ ಪಡಿಸಿತು. ಅಲ್ಲಿಯವರೆಗೆ ಮಧ್ಯಂತರ ಜಾಮೀನು ಜಾರಿಯಲ್ಲಿರಲಿದೆ ಎಂದು ಸ್ಪಷ್ಟಪಡಿಸಿತು.

ಲೋಕಾಯುಕ್ತ ಬಲೆಗೆ ಕಾರ್ಯನಿರ್ವಾಹಕ ಎಂಜಿನಿಯರ್

ಕೊಪ್ಪಳ: ಗುತ್ತಿಗೆದಾರನಿಗೆ ಬಿಲ್ ಮಂಜೂರು ಮಾಡಲು ಲಂಚ ಪಡೆಯುತ್ತಿದ್ದ ಆರೋಪದಡಿ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸೈಯದ್ ಫಾಜಲ್, ಸೋಮವಾರ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಸೈಯದ್ ಫಾಜಲ್

ಕುಕನೂರು ತಾಲ್ಲೂಕಿನ ಗುತ್ತಿಗೆದಾರ ಮುತ್ತಪ್ಪ ಬಾರಿನಾರ ₹5 ಲಕ್ಷ ವೆಚ್ಚದಲ್ಲಿ ತಮ್ಮೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಾಂಪೌಂಡ್ ನಿರ್ಮಾಣ ಮತ್ತು ₹4.5 ಲಕ್ಷ ವೆಚ್ಚದ ಮಂಗಳೂರು–ಬೇವೂರು ರಸ್ತೆ ಸುಧಾರಣೆಗೆ ತುಂಡು ಗುತ್ತಿಗೆ ಕಾಮಗಾರಿ ನಿರ್ವಹಿಸಿದ್ದರು. ಇದರ ಬಿಲ್ ಮಂಜೂರಾತಿಗೆ ಫಾಜಲ್ ₹25 ಸಾವಿರ ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಮಾತುಕತೆ ಬಳಿಕ ₹15 ಸಾವಿರ ಕೊಡುವುದಾಗಿ ಹೇಳಿದ ಮುತ್ತಪ್ಪ ಫೆಬ್ರುವರಿ 24ರಂದು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಕೊಪ್ಪಳ ಲೋಕಾಯುಕ್ತ ಉಪ ಅಧೀಕ್ಷಕ ಸಲೀಂಪಾಷಾ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಸುದ್ದಿ 2 ನಿಮಿಷ

ತೀರ್ಪುಗಳ ಅನುವಾದಕ್ಕೆ ಕೃತಕ ಬುದ್ಧಿಮತ್ತೆ: ಸಮಿತಿ ರಚನೆ

ಬೆಂಗಳೂರು: ಹೈಕೋರ್ಟ್ ತೀರ್ಪುಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಲು ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಬಳಕೆ ಮಾಡುವುದಕ್ಕಾಗಿ ಯೋಜನೆಯನ್ನು ರೂಪಿಸಲಾಗುತ್ತಿದ್ದು, ಇದಕ್ಕಾಗಿ ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಮತ್ತು ಸಿ.ಎಂ.ಜೋಶಿ ನೇತೃತ್ವದಲ್ಲಿ ಸಲಹಾ ಸಮಿತಿ ರಚಿಸಲಾಗಿದೆ.

'ಮಷಿನ್ ಲರ್ನಿಂಗ್ ಬಳಸಿ (ಯಾಂತ್ರಿಕ ಕಲಿಕೆ) ಕನ್ನಡದ ಪದಗಳನ್ನು ಸೇರ್ಪಡೆ ಮಾಡುವ ಕೆಲಸ ನಡೆಯುತ್ತಿದ್ದು, ಇದು ಆರಂಭಿಕ ಹಂತದಲ್ಲಿದೆ ಎನ್ನಲಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ಹೇಗೆ ಮುನ್ನಡೆಯಬೇಕು ಎಂಬುದರ ಬಗ್ಗೆ ಚಿಂತನೆ ನಡೆಯುತ್ತಿದೆ' ಎಂದು ಹೈಕೋರ್ಟ್ ಮೂಲಗಳು ತಿಳಿಸಿವೆ. ಇಂಗ್ಲಿಷ್‌ನಲ್ಲಿ ನೀಡಿದ ತೀರ್ಪುಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಸಾಮಾನ್ಯರಿಗೂ ಲಭ್ಯವಾಗುವಂತೆ ಮಾಡುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.



'ಈಡಿಗ'ರ ಕುಲಶಾಸ್ತ್ರೀಯ ಅಧ್ಯಯನಕ್ಕೆ ಆದೇಶ

ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ ಪಟ್ಟಿಯಲ್ಲಿರುವ ಈಡಿಗ, ಬಿಲ್ಲವ, ನಾಮಧಾರಿ ಸೇರಿದಂತೆ ಈಡಿಗ ಸಮುದಾಯದ 26 ಒಳ ಪಂಗಡಗಳ ಕುರಿತ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಗೆ ಅನುಮತಿ ನೀಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಈಡಿಗ ಮತ್ತು ಅದರ ಉಪ ಪಂಗಡಗಳ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಆದೇಶ ಹೊರಡಿಸುವಂತೆ ಹಾಗೂ ಈ ಉದ್ದೇಶಕ್ಕಾಗಿ ₹ 25 ಲಕ್ಷ ಅನುದಾನ ಮಂಜೂರು ಮಾಡುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಇದೇ 23ರಂದು ನಿರ್ದೇಶನ ನೀಡಿದ್ದರು.

ಸಚಿವರ ನಿರ್ದೇಶನದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ. 2023– 24 ನೇ ಸಾಲಿನಲ್ಲಿ ಉದ್ದೇಶಕ್ಕಾಗಿ ಅನುದಾನ ಒದಗಿಸಲಾಗಿದೆ.

ಎನ್‌ಸಿಡಬ್ಲ್ಯು ಸದಸ್ಯರಾಗಿ ಖುಷ್ಬು ನೇಮಕ

ನವದೆಹಲಿ (ಪಿಟಿಐ): ಚಿತ್ರನಟಿ, ಬಿಜೆಪಿ ನಾಯಕಿ ಖುಷ್ಬು ಸುಂದರ್ ಅವರನ್ನು ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿರುವ ಖುಷ್ಬು ಸುಂದರ್ ಅವರು, ನೇಮಕದ ಆದೇಶವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್‌ನಿಂದ ಮತ್ತೊಂದು ಯಾತ್ರೆ: ಕಾರ್ಯಕರ್ತರಲ್ಲಿ ಗರಿಗೆದರಿದ ಉತ್ಸಾಹ

ನವ ರಾಯಪುರ (ಪಿಟಿಐ): 'ಭಾರತ್ ಜೋಡೊ' ಯಾತ್ರೆಯ ಯಶಸ್ಸಿನ ಬಳಿಕ ಅಂಥದ್ದೇ ಮತ್ತೊಂದು ಯಾತ್ರೆ ಹಮ್ಮಿಕೊಳ್ಳುವುದಾಗಿ ಕಾಂಗ್ರೆಸ್ ಪ್ರಸ್ತಾಪಿಸಿದ ಬೆನ್ನಲ್ಲೇ, ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಯಾತ್ರೆಗೆ ಸಿದ್ಧರಾಗಿ, ಪಕ್ಷದ ಅಧಿಕೃತ ಕರೆಗಾಗಿ ಕಾಯುತ್ತಿದ್ದಾರೆ.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 'ಭಾರತ ಜೋಡೊ' ಯಾತ್ರೆ ನಡೆದ ನಂತರ ಅಂಥದ್ದೇ ಮತ್ತೊಂದು ಯಾತ್ರೆ ನಡೆಸುವ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಯಾಗುತ್ತಿತ್ತು. ಈ ಮಧ್ಯೆ ರಾಯಪುರದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಪಕ್ಷದ ನಾಯಕ ರಾಹುಲ್ ಅವರು ಇದೇ ಇಂಗಿತ ವ್ಯಕ್ತಪಡಿಸಿದ ಬೆನ್ನಲ್ಲೇ ಕಾರ್ಯಕರ್ತರಲ್ಲಿ ಉತ್ಸಾಹ ಗರಿಗೆದರಿದೆ.

ಭಕ್ತಸಾಗರ ಚಿಕ್ಕೋಡಿ ತಾಲ್ಲೂಕಿನ ಸುಕ್ಷೇತ್ರ ಕೇರೂರ ಗ್ರಾಮದಲ್ಲಿ ನಡೆದ ಮಲಕಾರಿಸಿದ್ದೇಶ್ವರ-ಅರಣ್ಯಸಿದ್ದೇಶ್ವರ ಜಾತ್ರೆಯ ಕೊನೆಯ ದಿನವಾದ ಸೋಮವಾರ ನಡೆದ 'ನಿವ್ವಾಳಕಿ' ಆಚರಣೆಯಲ್ಲಿ ಭಕ್ತರು ಭಂಡಾರ ಹಾರಿಸಿ ಭಕ್ತಿ ಸೇವೆ ಸಲ್ಲಿಸಿದರು –ಚಿತ್ರ: ಸುಧಾಕರ ತಳವಾರ

'ಬ್ಯಾಗ್ ಖರೀದಿ: ನಿಯಮ ಉಲ್ಲಂಘಿಸಿದ್ದ ರೋಹಿಣಿ ಸಿಂಧೂರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ಜಿಲ್ಲಾಧಿಕಾರಿಯಾಗಿದ್ದ ವೇಳೆ ರೋಹಿಣಿ ಸಿಂಧೂರಿ, ಆ ಜಿಲ್ಲಾ ವ್ಯಾಪ್ತಿಯ ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳಿಗೆ 14,71,458 ಬಟ್ಟೆ ಬ್ಯಾಗ್‌ಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ₹ 52ರಂತೆ ಖರೀದಿಸಲು ಅನುಮೋದನೆ ನೀಡುವ ವೇಳೆ ನಿಯಮ ಉಲ್ಲಂಘಿಸಿದ್ದರು' ಎಂದು ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಾಥಮಿಕ ವಿಚಾರಣಾ ವರದಿಯಲ್ಲಿ ವಸತಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ಜೆ. ರವಿಶಂಕರ್ ಉಲ್ಲೇಖಿಸಿರುವುದು ಬಹಿರಂಗವಾಗಿದೆ.

ರೋಹಿಣಿ ಸಿಂಧೂರಿ ವಿರುದ್ಧ ಈಚೆಗೆ ಆರೋಪ ಮಾಡಿದ್ದ ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಅವರು, 'ಅಗ್ಗದ ಬ್ಯಾಗ್‌ಗಳನ್ನೂ ಅತಿ ಹೆಚ್ಚು ಬೆಲೆಗೆ ಸಿಂಧೂರಿ ಖರೀದಿಸಿದ್ದ ಪ್ರಕರಣ ಹಾಗೂ ರವಿಶಂಕರ್ ಅವರು ಸಲ್ಲಿಸಿದ್ದ ಪ್ರಾಥಮಿಕ ವಿಚಾರಣಾ ವರದಿಯನ್ನು ಉಲ್ಲೇಖಿಸಿದ್ದರು.

ಬಟ್ಟೆ ಬ್ಯಾಗ್ ಖರೀದಿಯಲ್ಲಿ ರೋಹಿಣಿ ಸಿಂಧೂರಿ ಅಕ್ರಮ ನಡೆಸಿದ್ದಾರೆ ಎಂದು ಆರೋಪಿಸಿ ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ಮತ್ತು ಶೈಲೇಂದ್ರ ವಿ. ಭೀಮರಾವ್ ಎಂಬವರು ನೀಡಿದ್ದ ದೂರಿನ ಮೇಲೆ ವಿಚಾರಣೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ರವಿಶಂಕರ್ ಅವರನ್ನು ನೇಮಿಸಿತ್ತು.

'ಆರ್ಥಿಕ ಅಧಿಕಾರ ಉಲ್ಲಂಘನೆ'

ರವಿಶಂಕರ್ ಅವರ ವಿಚಾರಣಾ ವರದಿ ಮೇಲೆ ಡಿಪಿಎಆರ್‌ಗೆ ಅಭಿಪ್ರಾಯ ನೀಡಿರುವ ನಗರಾಭಿವೃದ್ಧಿ ಇಲಾಖೆ, 'ಪಾರದರ್ಶಕ ಕಾಯ್ದೆ ಹಾಗೂ ನಿಯಮಾವಳಿಗಳ ನಿಯಮ 4 (ಎಚ್) ಅನ್ವಯ ನಗರ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಯಾವುದೇ ಸರ್ಕಾರಿ ಸಂಸ್ಥೆಗಳು ಟೆಂಡರ್ ಮೂಲಕ ಸಾಮಗ್ರಿಗಳನ್ನು ಖರೀದಿಸಬೇಕು. ಅಲ್ಲದೆ, ನಿಗಮದಿಂದ ಕೇವಲ ಬಟ್ಟೆಗಳನ್ನು ಮಾತ್ರ ಖರೀದಿಸಬಹುದಾಗಿದೆ. ಬಟ್ಟೆಗಳ ಬ್ಯಾಗ್ ಖರೀದಿಸಿರುವುದು ನಿಯಮ ಉಲ್ಲಂಘನೆ. ಜಿಲ್ಲಾಧಿಕಾರಿಗೆ ಆರ್ಥಿಕ ಪ್ರತ್ಯಾಯೋಜನೆಯ ಅಧಿಕಾರ ₹ 5 ಕೋಟಿ ಮಾತ್ರ ಇದೆ. ಆದರೆ, ಬಟ್ಟೆ ಬ್ಯಾಗ್ ಖರೀದಿ ಮೊತ್ತ ₹ 5 ಕೋಟಿಯನ್ನು ಮೀರಿದ್ದು, ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯು ಉಲ್ಲಂಘನೆಯಾಗಿದೆ' ಎಂದು ತಿಳಿಸಿದೆ.

'ಕೇಂದ್ರ ಸರ್ಕಾರದ ಯೋಜನೆಯಾದ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಕೆಗೆ ನಿಗದಿಪಡಿಸಿದ ಅನುದಾನದಲ್ಲಿ ಬ್ಯಾಗ್‌ಗಳನ್ನು ಖರೀದಿಸಿ, ವಿತರಿಸಲು ಅವಕಾಶ ಇಲ್ಲ. ಅಲ್ಲದೆ, ಐಇಸಿ ಚಟುವಟಿಕೆಗೆ ಸಂಬಂಧಪಟ್ಟಂತೆ ಅನುದಾನ ವೆಚ್ಚ ಮಾಡುವಾಗ ಕ್ರಿಯಾಯೋಜನೆ ತಯಾರಿಸಿ ರಾಜ್ಯ ಉನ್ನತಾಧಿಕಾರ(ಎಸ್‌ಎಚ್‌ಪಿಸಿ) ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕು. ಈ ಪ್ರಕರಣದಲ್ಲಿ ಈ ಪ್ರಕ್ರಿಯೆಯನ್ನೂ ಪಾಲಿಸಿಲ್ಲ' ಎಂದೂ ತಿಳಿಸಿದೆ.

ರವಿಶಂಕರ್ ವರದಿಯಲ್ಲಿ ಏನಿದೆ?: 'ಬಟ್ಟೆ ಬ್ಯಾಗ್‌ಗಳನ್ನು ಪಾರದರ್ಶಕ ಕಾಯ್ದೆ ಹಾಗೂ ನಿಯಮಾವಳಿಗಳ ನಿಯಮ 4 (ಎಚ್) ಅನ್ವಯ ವಿನಾಯಿತಿ ಹೊಂದಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮೂಲಕ ₹ 52ಕ್ಕೆ ನಿಗದಿಪಡಿಸಿ ಖರೀದಿಸುವ ಮೊದಲು ಮುಕ್ತ ಮಾರುಕಟ್ಟೆಯಲ್ಲಿ ಇದೇ ಬಟ್ಟೆ ಬ್ಯಾಗ್‌ಗಳು ₹ 10ರಿಂದ 13ಕ್ಕೆ ಸಿಗಬಹುದಾದ ಸಾಧ್ಯತೆ ಪರಿಶೀಲಿಸಬೇಕಿತ್ತು. ಆ ಮೂಲಕ, ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗುವ ಸಾಧ್ಯತೆಯನ್ನು ಗಮನಿಸಬೇಕಿತ್ತು' ಎಂದು ವರದಿಯಲ್ಲಿದೆ.

'ಪಾಲಿಕೆಯ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಯ ಮೇರೆಗೆ ಖರೀದಿಗೆ ಜಿಲ್ಲಾಧಿಕಾರಿಯಾಗಿದ್ದ ಸಿಂಧೂರಿ ಅನುಮೋದನೆ ನೀಡಿದ್ದರು. ಆದರೆ, ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಸಿಂಧೂರಿಯವರು ಪಾಲಿಕೆಯ ಸಭೆ ಅಥವಾ ಇತರ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳಿಂದ ಘಟನೋತ್ತರ ಅನುಮೋದನೆ ಪಡೆದಿರುವ ಮಾಹಿತಿ ಇಲ್ಲ' ಎಂದೂ ವರದಿಯಲ್ಲಿದೆ.

ಮಂಗಳವಾರ, ಫೆಬ್ರುವರಿ 28, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 59 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸಾರ್ವಜನಿಕ ಸ್ಥಳಗಳ ಸ್ವಚ್ಛತೆಗೂ, ನಮ್ಮ ಆರೋಗ್ಯಕ್ಕೂ ನೇರ ಸಂಬಂಧವಿದೆ.

ಆಳ-ಅಗಲ
ದೇಶದಾದ್ಯಂತ ಬಿಸಿಗಾಳಿ ಹಾವಳಿ

ಪಾರ್ಕ್‌ನಲ್ಲಿ ಔಷಧಗಳ ಕೊರತೆ 11
ಸಿಪಿಕೆ ಸೇರಿ ಮೂವರಿಗೆ ಪಂಪ ಪ್ರಶಸ್ತಿ 2

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,288	17,393	₹57,380 (ಬೆಂಗಳೂರು)	₹65,300 (ಬೆಂಗಳೂರು)	82.79

ನಮ್ಮ ಎಕ್ಸೆಲ್ ಅಕಾಡೆಮಿಕ್ಸ್®
ಬೆಂಗಳೂರು
IIT-Main & Advanced | NEET | BITS | AIIMS | JIPMER | CET | COMED-K
★ ★ ★ Postal Coaching For PUC + CET / NEET / IIT-JEE / AIIMS / JIPMER Contact 9036357499 ★ ★ ★
ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್, ನಂ.326, ಪೀಪಲ್ ಟ್ರೀ ಹಾಸ್ಟಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ, ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು
★★ ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ ★★
NEET K-CET IIT-JEE
REGISTRATIONS OPEN
CRASH COURSE
II PUC/12th, +2 Passed or Studying Students
FOR 12th CBSE 17.03.2023 FRIDAY
FOR 2nd PUC 24.03.2023 FRIDAY
POSTAL COACHING
1st PUC & 2nd PUC , 11th & 12th , +1 & +2 Studying Students
7676-91-7777, 95136 57041, 9535656277
CELEBRATING 14 SUCCESSFUL YEARS
EXCEL ACADAMICS
THE BEST INSTITUTE IN INDIA
SUCCESSFULLY CONDUCTING "DAILY TEST" FOR NEET / IIT-JEE / CET ASPIRANTS

ವೇತನ ಪರಿಷ್ಕರಣೆ, ಎನ್‌ಪಿಎಸ್ ರದ್ದತಿಗೆ ಆಗ್ರಹಿಸಿ ನಾಳೆಯಿಂದ ಮುಷ್ಕರ

ಸರ್ಕಾರಿ ಸೇವೆ ಬಂದ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡದ ರಾಜ್ಯ ಸರ್ಕಾರದ ಧೋರಣೆ ಖಂಡಿಸಿ, ಹೊಸ ಪಿಂಚಣಿ ನೀತಿ (ಎನ್‌ಪಿಎಸ್) ರದ್ದತಿಗೆ ಆಗ್ರಹಿಸಿ 5.11 ಲಕ್ಷ ನೌಕರರು ಮಾರ್ಚ್ 1ರಿಂದ ಕರ್ತವ್ಯಕ್ಕೆ ಗೈರುಹಾಜರಾಗುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಧುಮುಕಲಿದ್ದಾರೆ. ಶಾಲಾ-ಕಾಲೇಜು, ತ್ಯಾಜ್ಯ ವಿಲೇವಾರಿ, ಕಂದಾಯ ಮತ್ತು ಆರೋಗ್ಯ ಸೇವೆಗಳು ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

ಗ್ರಾಮ ಪಂಚಾಯಿತಿ ಸಿಬ್ಬಂದಿ, ನಗರ ಸ್ಥಳೀಯ ಸಂಸ್ಥೆಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಯಂ ಪೌರ ಕಾರ್ಮಿಕರು, ಉಪ ನೋಂದಣಾಧಿಕಾರಿ ಕಚೇರಿ ಸಿಬ್ಬಂದಿಯೂ ಮುಷ್ಕರಕ್ಕೆ ಬೆಂಬಲ ನೀಡಿದ್ದಾರೆ. ಗ್ರಾಮ ಲೆಕ್ಕಿಗರಿಂದ ಹೆಚ್ಚುವರಿ ಜಿಲ್ಲಾಧಿಕಾರಿವರೆಗಿನ ಅಧಿಕಾರಿ, ಸಿಬ್ಬಂದಿ ಕೆಲಸಕ್ಕೆ ಗೈರುಹಾಜರಾಗುತ್ತಿದ್ದು, ಬಹುತೇಕ ಎಲ್ಲ ಸೇವೆಗಳಲ್ಲೂ ವ್ಯತ್ಯಯವಾಗಲಿದೆ.

ಕರ್ನಾಟಕ ಸಚಿವಾಲಯ ನೌಕರರ ಸಂಘ, ಅರಣ್ಯ ಇಲಾಖೆಯ ನೌಕರರು, ವಿವಿಧ ನಿಗಮ ಮಂಡಳಿಗಳ ನೌಕರರೂ ಮುಷ್ಕರದಲ್ಲಿ ಭಾಗವಹಿಸುತ್ತಿದ್ದಾರೆ. ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿನ ವಾಹನಗಳ ನೋಂದಣಿ, ಪರವಾನಗಿ ವಿತರಣೆ ಕಾರ್ಯಗಳೂ ಸ್ಥಗಿತಗೊಳ್ಳಲಿವೆ.

ತುರ್ತು ಚಿಕಿತ್ಸೆ, ಸಾರಿಗೆ ಸೇವೆಗಳು ಲಭ್ಯ: ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ, ಒಳರೋಗಿಗಳ ಆರೈಕೆಯ ಸೇವೆಗಳು ಎಂದಿನಂತೆ ದೊರಕಲಿವೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಧರಣಿಯನ್ನು ಮಾ.1ರಿಂದಲೇ ನಡೆಸಲಿದ್ದಾರೆ. ಆದರೆ, ಬಸ್‌ಗಳು ಎಂದಿನಂತೆ ಸಂಚರಿಸಲಿವೆ. ವಿಶ್ವವಿದ್ಯಾಲಯಗಳಲ್ಲಿ ನಿತ್ಯದಂತೆ ಪಾಠಗಳು ನಡೆಯಲಿವೆ.

5ನೇ ಪುಟ ನೋಡಿ

ನಾಳೆಯಿಂದ ಧರಣಿ: ಸಾರಿಗೆ ನೌಕರರ ನಿರ್ಧಾರ 5

- **ಕಸ ಸಂಗ್ರಹಣೆಯಲ್ಲೂ ವ್ಯತ್ಯಯ:** ಗ್ರಾಮ ಪಂಚಾಯಿತಿ ಸಿಬ್ಬಂದಿ, ನಗರ ಸ್ಥಳೀಯ ಸಂಸ್ಥೆಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯಂ ಪೌರ ಕಾರ್ಮಿಕರೂ ಮುಷ್ಕರಕ್ಕೆ ಬೆಂಬಲ ನೀಡಿರುವುದರಿಂದ ರಾಜ್ಯದ ನಗರ, ಗ್ರಾಮಗಳಲ್ಲಿ ಕಸ ಸಂಗ್ರಹಣೆ, ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.
- **ಶಾಲಾ, ಕಾಲೇಜುಗಳು ಬಂದ್:** ಶಿಕ್ಷಕರು, ಉಪನ್ಯಾಸಕರು, ಪ್ರಾಧ್ಯಾಪಕರು ಕೆಲಸಕ್ಕೆ ಗೈರುಹಾಜರಾಗುತ್ತಿದ್ದಾರೆ. ಹಾಗಾಗಿ, ಪ್ರಾಥಮಿಕ ಶಾಲೆಗಳಿಂದ ಪದವಿ ಕಾಲೇಜುಗಳವರೆಗೂ ತರಗತಿಗಳು ನಡೆಯುವುದಿಲ್ಲ. ಮಾರ್ಚ್ 1ರ ಬಳಿಕ ನಡೆಯಬೇಕಿದ್ದ ಶಾಲಾ, ಕಾಲೇಜು ಹಂತದ ಎಲ್ಲ ಪರೀಕ್ಷೆಗಳನ್ನೂ ಮುಂದೂಡುವ ಸಂಭವ ಇದೆ.
- **ಹೊರ ರೋಗಿಗಳ ಸೇವೆ ಅಲಭ್ಯ:** ಒಳರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ಘಟಕಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲೂ ಹೊರ ರೋಗಿಗಳ ವಿಭಾಗ (ಒಪಿಡಿ) ಸಂಪೂರ್ಣ ಬಂದ್ ಆಗಲಿವೆ. ಐಸಿಯು ಮತ್ತಿತರ ತುರ್ತುಚಿಕಿತ್ಸಾ ಘಟಕಗಳ ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಕಾರ್ಯ ನಿರ್ವಹಿಸುವರು.
- **ಆಸ್ತಿ ನೋಂದಣಿಯೂ ಸ್ಥಗಿತ:** ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿ ನೋಂದಣಿ ಇರುವುದಿಲ್ಲ. ಇದರಿಂದ ಸರ್ಕಾರಕ್ಕೆ ಸಾಕಷ್ಟು ವರಮಾನ ಖೋತಾ ಆಗುವ ಸಾಧ್ಯತೆ ಇದೆ.
- **ತಹಶೀಲ್ದಾರ್ ಕಚೇರಿಗಳೂ ಬಣಬಣ:** ತಹಶೀಲ್ದಾರ್, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾಪಂಚಾಯಿತಿಯ ಸೇವೆಗಳು ಜನರಿಗೆ ದೊರಕುವುದಿಲ್ಲ. ಜಾತಿ, ಆದಾಯ ಪ್ರಮಾಣ ಪತ್ರಗಳ ಸೇವೆ ಸೇರಿದಂತೆ ಕಂದಾಯ ಇಲಾಖೆಯ ಬಹುತೇಕ ಸೇವೆಗಳು ಸ್ಥಗಿತವಾಗಲಿವೆ.

ನೌಕರರ ಎಲ್ಲ ವೃಂದಗಳ ಸಂಘಟನೆಗಳೂ ರಾಜ್ಯ ಸಂಘದ ನೇತೃತ್ವದಲ್ಲಿ ಒಗ್ಗಟ್ಟಾಗಿ ಮುಷ್ಕರದಲ್ಲಿ ಭಾಗವಹಿಸುತ್ತಿವೆ. ನಿಗಮ, ಮಂಡಳಿಗಳು, ನಿವೃತ್ತರೂ ಬೆಂಬಲ ಸೂಚಿಸಿದ್ದಾರೆ. ಬೇಡಿಕೆ ಈಡೇರುವವರೆಗೆ ಮುಷ್ಕರದಿಂದ ಹಿಂದೆ ಸರಿಯುವುದಿಲ್ಲ

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ರಾಜ್ಯಸರ್ಕಾರಿ ನೌಕರರ ಸಂಘ

ಡಬಲ್ ಎಂಜಿನ್ ಸರ್ಕಾರದ ಜಪ

ಶಿವಮೊಗ್ಗ, ಬೆಳಗಾವಿಯಲ್ಲಿ ಮೋದಿ ಬಿರುಸಿನ ಸಂಚಾರ • ಬಿಎಸ್‌ವೈ ಗುಣಗಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಶಿವಮೊಗ್ಗ: ಮಧ್ಯ ಕರ್ನಾಟಕದ ಶಿವಮೊಗ್ಗ ಮತ್ತು ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಸೋಮವಾರ ಬಿರುಸಿನ ಸಂಚಾರ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಚುನಾವಣಾ ಹಣಾಹಣಿಗೆ ಸಜ್ಜಾಗುತ್ತಿರುವ ರಾಜ್ಯ ಬಿಜೆಪಿ ನಾಯಕರು, ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು.

ಬೆಳಿಗ್ಗೆ ಶಿವಮೊಗ್ಗದಲ್ಲಿ ನೂತನ ವಿಮಾನ ನಿಲ್ದಾಣದ ಲೋಕಾರ್ಪಣೆ ಮಾಡಿದ ಪ್ರಧಾನಿ, ಕಾರ್ಯಕ್ರಮದುದ್ದಕ್ಕೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗುಣಗಾನ ಮಾಡಿದರು. ಈ ಮೂಲಕ ಲಿಂಗಾಯತ ಸಮುದಾಯದ ಪ್ರಬಲ ಮುಖಂಡನನ್ನು ಪಕ್ಷ ಕಡೆಗಣಿಸಿಲ್ಲ ಎಂಬ ಸಂದೇಶವನ್ನು ರವಾನಿಸಿದರು.

'ಡಬಲ್ ಎಂಜಿನ್ ಸರ್ಕಾರದ ಕಾರಣ ಅಭಿವೃದ್ಧಿಯ ವೇಗ ಹೆಚ್ಚಿದೆ. ಅಭಿವೃದ್ಧಿಯ ಪರ್ವ ಇನ್ನಷ್ಟು ವೇಗ ಪಡೆಯಲು ಡಬಲ್ ಎಂಜಿನ್ ಸರ್ಕಾರ ಮುಂದುವರಿಯುವುದು ಅಗತ್ಯವಿದೆ' ಎಂದು ಪ್ರತಿಪಾದಿಸಿದರು. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿ ಎಂದು ಕೋರಿದರು.

ವಿಧಾನಮಂಡಲ ಅಧಿವೇಶನದಲ್ಲಿ ಯಡಿಯೂರಪ್ಪ ಅವರ ಭಾಷಣವನ್ನು ಉಲ್ಲೇಖಿಸಿದ ಅವರು, 'ರೈತರ ಕಲ್ಯಾಣಕ್ಕೆ ಬದುಕು ಮೀಸಲಿರಿಸಿದ್ದ ಅವರ ಈ ಮಾತುಗಳು ಎಲ್ಲರಿಗೂ ಪ್ರೇರಣೆ. ಜನ್ಮದಿನ ಆಚರಿಸಿಕೊಳ್ಳುತ್ತಿರುವ ಅವರಿಗೆ ಮೊಬೈಲ್ ಟಾರ್ಚ್ ಬೆಳಗಿಸಿ ಗೌರವ ಸಲ್ಲಿಸೋಣ' ಎಂದು ಕಾರ್ಯಕರ್ತರಿಗೆ ಪ್ರೋತ್ಸಾಹಿಸಿದರು. ಭಾರಿ ಸಂಖ್ಯೆಯಲ್ಲಿದ್ದ ಜನರೂ ಸ್ಪಂದಿಸಿದರು.

ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದ ಯಡಿಯೂರಪ್ಪ ಅವರಿಗೆ ಕಾರ್ಯಕರ್ತರ ಪರವಾಗಿ ಮೋದಿ ಅವರು ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು.

10 ಕಿ.ಮೀ ರೋಡ್ ಶೋ: ಮಧ್ಯಾಹ್ನ ಬೆಳಗಾವಿಯಲ್ಲಿ ಪ್ರಧಾನಿ ಸುಮಾರು 10 ಕಿ.ಮೀ ರೋಡ್ ಶೋ ನಡೆಸಿದರು. ರಸ್ತೆಯ ಎರಡೂ ಬದಿಗಳಲ್ಲಿ ಸೇರಿದ್ದ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ ಕಾರ್ಯಕರ್ತರು ಇದಕ್ಕೆ ಸಾಕ್ಷಿಯಾದರು.

ಮಧ್ಯಾಹ್ನ 2.45ಕ್ಕೆ ಬೆಳಗಾವಿಯ ಕೆಎಸ್‌ಆರ್‌ಪಿ ಮೈದಾನಕ್ಕೆ ಬಂದ ಪ್ರಧಾನಿ, ಜನಸ್ತೋಮವನ್ನು ಕಂಡು ಹರ್ಷಗೊಂಡರು. ರಾಣಿ ಚನ್ನಮ್ಮ ವೃತ್ತದಿಂದ ಆರಂಭಿಸಬೇಕಿದ್ದ ರೋಡ್ ಶೋ ಅನ್ನು ಕೆಎಸ್‌ಆರ್‌ಪಿ ಮೈದಾನದಿಂದಲೇ ಆರಂಭಿಸಿದರು.

5ನೇ ಪುಟ ನೋಡಿ

ಬೆಳಗಾವಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ರೋಡ್ ಶೋ ನಡೆಸಿ ಜನರತ್ತ ಕೈಬೀಸಿದರು –ಪಿಐಬಿ ಚಿತ್ರ

ಹೆಚ್ಚಿನ ಪಿಂಚಣಿ: ಗಡುವು ವಿಸ್ತರಿಸಿದ ಇಪಿಎಫ್‌ಒ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ತನ್ನ ಸದಸ್ಯರಿಗೆ ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಮೇ 3ರವರೆಗೆ ಗಡುವು ವಿಸ್ತರಿಸಿದೆ.

ಉದ್ಯೋಗಿಗಳ ಪಿಂಚಣಿ ಯೋಜನೆಗೆ (ಇಪಿಎಸ್) ತಮ್ಮ ವಾಸ್ತವ ವೇತನದ ಶೇಕಡ 8.33ರವರೆಗಿನ ಮೊತ್ತವನ್ನು ಇಪಿಎಸ್‌ಗೆ ನೀಡಲು ಸುಪ್ರೀಂ ಕೋರ್ಟ್ 2022ರ ನವೆಂಬರ್ 4ರಂದು ಅವಕಾಶ ಕಲ್ಪಿಸಿತು. ಅದುವರೆಗೆ, ಪಿಂಚಣಿಗೆ ಅರ್ಹವಾದ ವೇತನದ (ಅಂದರೆ, ₹ 15 ಸಾವಿರದ) ಶೇ 8.33ರಷ್ಟು ಮೊತ್ತವನ್ನು ಮಾತ್ರ ಇಪಿಎಸ್‌ಗೆ ಪಾವತಿಸಲು ಅವಕಾಶ ಇತ್ತು.

10ನೇ ಪುಟ ನೋಡಿ

'ಅದಾನಿ ಪ್ರಕರಣ: ಮರೆಸುವ ತಂತ್ರ' 7

ಮತಗಟ್ಟೆ ಸಮೀಕ್ಷೆ: ಮೇಘಾಲಯದಲ್ಲಿ ಅತಂತ್ರ ವಿಧಾನಸಭೆ ಸಾಧ್ಯತೆ

ತ್ರಿಪುರಾ, ನಾಗಾಲ್ಯಾಂಡ್‌ನಲ್ಲಿ ಬಿಜೆಪಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿಪುರಾ, ನಾಗಾಲ್ಯಾಂಡ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಮಿತ್ರಪಕ್ಷಗಳು ಗೆಲುವು ಸಾಧಿಸಲಿವೆ ಎಂದು ಮತಗಟ್ಟೆ ಸಮೀಕ್ಷೆಗಳು ಅಭಿಪ್ರಾಯಪಟ್ಟಿವೆ.

ತ್ರಿಪುರಾದಲ್ಲಿ ಅತಂತ್ರ ವಿಧಾನಸಭೆ ಏರ್ಪಡಲಿದೆ ಎಂದು ಟೈಮ್ಸ್ ನೌ-ಮಾಟ್ರಿಜ್ ಸಮೀಕ್ಷೆ ಅಭಿಪ್ರಾಯ ಪಟ್ಟಿದ್ದರೆ, ಉಳಿದ ಮೂರೂ ಸಮೀಕ್ಷೆಗಳು ಬಿಜೆಪಿ ಹಾಗೂ ಮಿತ್ರಪಕ್ಷಕ್ಕೆ ಬಹುಮತ ನೀಡಿವೆ. ಹೊಸದಾಗಿ ರಚನೆಯಾಗಿರುವ ಟಿಪ್ರಮೋಥ 9-17 ಸ್ಥಾನಗಳಲ್ಲಿ ಗೆಲ್ಲುವ ಸಾಧ್ಯತೆಯಿದೆ.

ನಾಗಾಲ್ಯಾಂಡ್‌ನಲ್ಲಿ ಬಿಜೆಪಿ-ಎನ್‌ಡಿಪಿಪಿ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆಯುವತ್ತ ಹೆಜ್ಜೆ ಇಟ್ಟಿದೆ.

ಮೇಘಾಲಯದಲ್ಲಿ ಎನ್‌ಪಿಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದ್ದು, ಅತಂತ್ರ ವಿಧಾನಸಭೆ ಉಂಟಾಗಲಿದೆ ಎಂದು ತಿಳಿಸಿವೆ. ಮೇಘಾಲಯದಲ್ಲಿ ಕಾಂಗ್ರೆಸ್ 3ರಿಂದ 12 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯಿದೆ ಎಂದು ಕೆಲವು ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಚುನಾವಣೆಯ ಫಲಿತಾಂಶ ಮಾರ್ಚ್ 2ರಂದು ಪ್ರಕಟವಾಗಲಿದೆ.

ಇನ್ನೊಂದು ಸುದ್ದಿ 7

ತ್ರಿಪುರಾ ವಿಧಾನಸಭೆ 60 (ಸರಳ ಬಹುಮತ 31)

ಸಮೀಕ್ಷೆ	ಬಿಜೆಪಿ+	ಟಿಪ್ರಮೋಥ	ಎಡಪಕ್ಷ	ಇತರೆ
ಇಂಡಿಯಾ ಟುಡೇ–ಆಕ್ಸಿಸ್ ಮೈ ಇಂಡಿಯಾ	36-45	9-16	6-11	0
ಜನ್‌ಕಿ ಬಾತ್	29-40	14-10	9-16	1
ಟೈಮ್ಸ್‌ನೌ–ಇಟಿಜಿ ರಿಸರ್ಚ್	21-27	12-17	18-24	0
ಜೀ ನ್ಯೂಸ್–ಮಾಟ್ರಿಜ್	29-36	11-16	13-21	0-3

ಮೇಘಾಲಯ ವಿಧಾನಸಭೆ 60 (ಸರಳ ಬಹುಮತ 31)

ಸಮೀಕ್ಷೆ	ಬಿಜೆಪಿ+	ಕಾಂಗ್ರೆಸ್	ಎನ್‌ಪಿಪಿ	ಇತರೆ
ಇಂಡಿಯಾಟುಡೇ–ಆಕ್ಸಿಸ್ ಮೈ ಇಂಡಿಯಾ	4-8	6-12	18-24	4-8
ಜನ್‌ಕಿ ಬಾತ್	3-7	6-11	11-16	3-8
ಟೈಮ್ಸ್‌ನೌ–ಇಟಿಜಿ ರಿಸರ್ಚ್	3-6	2-5	18-26	8-14
ಜೀ ನ್ಯೂಸ್–ಮಾಟ್ರಿಜ್	6-11	3-6	21-26	10-19

ನಾಗಾಲ್ಯಾಂಡ್ ವಿಧಾನಸಭೆ 60 (ಸರಳ ಬಹುಮತ 31)

ಸಮೀಕ್ಷೆ	ಬಿಜೆಪಿ+ ಎನ್‌ಡಿಪಿಪಿ	ಕಾಂಗ್ರೆಸ್	ಎನ್‌ಪಿಎಫ್	ಇತರೆ
ಇಂಡಿಯಾಟುಡೇ–ಆಕ್ಸಿಸ್ ಮೈ ಇಂಡಿಯಾ	38-48	1-2	3-8	5-15
ಜನ್‌ಕಿ ಬಾತ್	35-45	0	6-10	9-15
ಟೈಮ್ಸ್‌ನೌ–ಇಟಿಜಿ ರಿಸರ್ಚ್	39-49	0	4-8	6-17
ಜೀ ನ್ಯೂಸ್–ಮಾಟ್ರಿಜ್	35-43	1-3	2-5	6-11

ಮನೀಷ್ ಸಿಸೋಡಿಯಾ ಐದು ದಿನ ಸಿಬಿಐ ವಶಕ್ಕೆ



ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಬಂಧಿತರಾಗಿರುವ ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ವಿಶೇಷ ನ್ಯಾಯಾಲಯವು ಸೋಮವಾರ ಐದು ದಿನಗಳವರೆಗೆ ಸಿಬಿಐ ವಶಕ್ಕೆ ನೀಡಿದೆ.

ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್‌ಪಾಲ್ ಅವರು ಸಿಬಿಐ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದರು.

'ನೀತಿಯಲ್ಲಿ ಮಾಡಲಾದ ಬದಲಾವಣೆಗೆ ಲೆಫ್ಟಿನೆಂಟ್ ಗವರ್ನರ್ ಅವರು ಒಪ್ಪಿಗೆ ನೀಡಿದ್ದರು. ನನ್ನ ಕಕ್ಷಿದಾರನ ವಿರುದ್ಧ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ' ಎಂದು ಸಿಸೋಡಿಯಾ ಪರ ವಕೀಲರು ವಾದಿಸಿ ದರು. 'ಪ್ರಕರಣ ಸಂಬಂಧ ಸಿಸೋಡಿಯಾ ಅವರನ್ನು ತನಿಖೆಗೆ ಒಳಪಡಿಸುವ ಅಗತ್ಯ ಇದೆ' ಎಂದು ಸಿಬಿಐ ವಾದಿಸಿತು.

'ಕರಾಳ ದಿನ' ಆಚರಣೆ: ಸಿಸೋಡಿಯಾ ಅವರನ್ನು ಬಂಧಿಸಿರುವುದನ್ನು ಖಂಡಿಸಿ ಆಮ್ ಆದ್ಮಿ ಪಕ್ಷವು (ಎಎಪಿ) ಚಂಡೀಗಢ, ಮಧ್ಯಪ್ರದೇಶ, ಗೋವಾ, ಜಮ್ಮು ಮತ್ತು ಕಾಶ್ಮೀರ, ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಸೇರಿ ವಿವಿಧೆಡೆ ಪ್ರತಿಭಟನೆ ನಡೆಸಿತು. ಜೊತೆಗೆ, ಸೋಮವಾರ 'ಕರಾಳ ದಿನ'ವನ್ನಾಗಿ ಆಚರಿಸಿತು.

ಬಿಜೆಪಿ ಮುಖ್ಯ ಕಚೇರಿ ಮುಂದೆ ಪ್ರತಿಭಟನೆ: ದೆಹಲಿಯಲ್ಲಿರುವ ಬಿಜೆಪಿ ಮುಖ್ಯ ಕಚೇರಿ ಮುಂಭಾಗದಲ್ಲೂ ಎಎಪಿ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ನಡೆಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಅಗ್ನಿಪಥ': ದೆಹಲಿ ಹೈಕೋರ್ಟ್ ಅಸ್ತು

ನವದೆಹಲಿ (ಪಿಟಿಐ): ರಕ್ಷಣಾ ಪಡೆಗಳಲ್ಲಿ ಅಲ್ಪಾವಧಿಗೆ ಯೋಧರನ್ನು ನೇಮಕ ಮಾಡಿಕೊಳ್ಳುವ 'ಅಗ್ನಿಪಥ' ಯೋಜನೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾ ಮಾಡಿದೆ.

ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ರಾಷ್ಟ್ರದ ಹಿತಾಸಕ್ತಿ ಮತ್ತು ಸಶಸ್ತ್ರ ಪಡೆಗಳನ್ನು ಬಲಪಡಿಸುವ ಉದ್ದೇಶವಿದೆ. ಇದರಲ್ಲಿ ಮಧ್ಯ ಪ್ರವೇಶಿಸಲು ಯಾವುದೇ ಸಕಾರಣಗಳಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ, ನ್ಯಾಯಮೂರ್ತಿ ಸುಬ್ರಮಣಿಯನ್ ಪ್ರಸಾದ್ ಅವರಿದ್ದ ಪೀಠ ಹೇಳಿದೆ.

'ಅಗ್ನಿಪಥ' ಪ್ರಶ್ನಿಸಿದ್ದ ಅರ್ಜಿಗಳಲ್ಲದೆ, ಸಶಸ್ತ್ರ ಪಡೆಗಳಿಗೆ ನೇಮಕಾತಿಗೆ ಈ ಹಿಂದೆ ಹೊರಡಿಸಲಾದ ಪ್ರಕಟಣೆಗಳನ್ನು ಆಧರಿಸಿದ ನೇಮಕಾತಿ ಪ್ರಕ್ರಿಯೆ ಕುರಿತು ಸಲ್ಲಿಸಿದ್ದ ಅರ್ಜಿಗಳನ್ನೂ ಪೀಠ ವಜಾಗೊಳಿಸಿದೆ. ಅಂತಹ ಅಭ್ಯರ್ಥಿಗಳಿಗೆ ನೇಮಕಾತಿ ಹೊಂದುವ ಹಕ್ಕಿಲ್ಲವೆಂದು ಸ್ಪಷ್ಟಪಡಿಸಿದೆ.

'ಯಾವ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ' ಎಂದು ಸ್ಪಷ್ಟಪಡಿಸುವಂತೆ ಅರ್ಜಿದಾರರನ್ನು ಪ್ರಶ್ನಿಸಿದ ಪೀಠವು, ಈ ಯೋಜನೆಯಡಿ ಸೇನೆಗೆ ಸೇರುವುದು ಸ್ವಯಂಪ್ರೇರಿತವಾದುದು. ಯಾವುದೇ ಸಮಸ್ಯೆ ಇರುವವರು, ಈ ಯೋಜನೆಯಡಿ ಸಶಸ್ತ್ರ ಪಡೆಗಳಿಗೆ ಸೇರಬಾರದು ಎಂದು ಹೇಳಿದೆ.

ಕಳೆದ ವರ್ಷ ಡಿಸೆಂಬರ್ 15ರಂದು ನ್ಯಾಯಾಲಯ ತನ್ನ ತೀರ್ಪು ಕಾಯ್ದಿರಿಸಿತ್ತು.ಹಿಂದಿನ ಕೆಲವು ನೇಮಕಾತಿ ಪ್ರಕಟಣೆಗಳ ಅಡಿಯಲ್ಲಿ ಸಶಸ್ತ್ರ ಪಡೆಗಳ ನೇಮಕಾತಿ ಪ್ರಕ್ರಿಯೆಗಳನ್ನು ರದ್ದುಗೊಳಿಸುವಂತೆ ಕೋರಿದ್ದ ಅರ್ಜಿಗಳ ಸಂಬಂಧ ಅರ್ಜಿದಾರರ ಪರ ಹಾಜರಾಗಿದ್ದ ವಕೀಲ ಪ್ರಶಾಂತ್ ಭೂಷಣ್, 2021ರ ಜೂನ್‌ನಲ್ಲಿ ಸರ್ಕಾರವು ಎಲ್ಲ ನೇಮಕಾತಿಗಳನ್ನು ಸ್ಥಗಿತಗೊಳಿಸಲಿಲ್ಲ. ಕೆಲವು ನೇಮಕಾತಿ ಪ್ರಕ್ರಿಯೆಗಳು 2021ರ ಆಗಸ್ಟ್ ಮತ್ತು 2022ರ ಆರಂಭದಲ್ಲಿಯೂ ನಡೆದವು ಎಂದು ವಾದಿಸಿದ್ದರು.

ಸಶಸ್ತ್ರ ಪಡೆಗಳನ್ನು ತಾರುಣ್ಯಗೊಳಿಸಲು ಅಲ್ಪಾವಧಿ ನೇಮಕಾತಿಗಾಗಿ 2022ರ ಜೂನ್ 14ರಿಂದ ಅಗ್ನಿಪಥ ಯೋಜನೆ ಜಾರಿಗೆ ತರಲಾಗಿದೆ.

ಹದಿನೇಳುವರೆ ವರ್ಷದಿಂದ 21 ವರ್ಷ ವಯಸ್ಸಿನ ಒಳಗಿನವರಿಗೆ ಅರ್ಜಿ ಸಲ್ಲಿಸಲು ಅರ್ಹತೆ ನಿಗದಿಪಡಿಸಲಾಗಿತ್ತು. ಇವರ ಸೇವಾವಧಿ ನಾಲ್ಕು ವರ್ಷಗಳು. ಈ ಯೋಜನೆಯಡಿ ನೇಮಕವಾದವರಲ್ಲಿ ಶೇಕಡ 25ರಷ್ಟು ಅಗ್ನಿವೀರರಿಗೆ ಮಾತ್ರ ಪೂರ್ಣಾವಧಿ ಸೇವೆಗೆ ಅವಕಾಶವಿದೆ. ಈ ಯೋಜನೆಯ ವಿರುದ್ಧ ಹಲವು ರಾಜ್ಯಗಳಲ್ಲಿ ಪ್ರತಿಭಟನೆಗಳು ಭುಗಿಲೆದ್ದಿದ್ದವು. ನಂತರ, ಕೇಂದ್ರ ಸರ್ಕಾರವು ನೇಮಕಾತಿಯ ಗರಿಷ್ಠ ವಯೋಮಿತಿಯನ್ನು 23 ವರ್ಷಕ್ಕೆ ಹೆಚ್ಚಿಸಿತ್ತು.

ಎಕ್ಸ್‌ಪ್ರೆಸ್ ವೇ: ಟೋಲ್ ಸಂಗ್ರಹ ಮಾರ್ಚ್ 14ಕ್ಕೆ ಮುಂದೂಡಿಕೆ

ರಾಮನಗರ: ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಹೆದ್ದಾರಿಯಲ್ಲಿ ಟೋಲ್ ಸಂಗ್ರಹವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಮಾರ್ಚ್ 14ಕ್ಕೆ ಮುಂದೂಡಿದೆ.

ಇದೇ ಮಂಗಳವಾರದಿಂದ (ಫೆ.28) ಕಣಮಿಣಕೆ ಹಾಗೂ ಶೇಷಗಿರಿಹಳ್ಳಿ ಟೋಲ್‌ಗಳಲ್ಲಿ ವಾಹನ ಸವಾರರಿಂದ ಟೋಲ್ ಸಂಗ್ರಹಕ್ಕೆ ಹೆದ್ದಾರಿ ಪ್ರಾಧಿಕಾರ ಆದೇಶ ಹೊರಡಿಸಿತ್ತು. ಆದರೆ, ಉದ್ಘಾಟನೆಗೂ ಮುನ್ನವೇ ಟೋಲ್ ಆರಂಭಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿದೆ. ಮಾ. 11ರಂದು ದಶಪಥ ಹೆದ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಟೋಲ್ ಶುಲ್ಕ ದುಬಾರಿ ಎಂಬ ದೂರುಗಳ ಹಿನ್ನೆಲೆಯಲ್ಲಿ ಪ್ರಾಧಿಕಾರವು ದರ ಪರಿಷ್ಕರಣೆ ಮಾಡುವ ಸಾಧ್ಯತೆ ಇದೆ. ಪ್ರತಿಭಟನೆ ಎಚ್ಚರಿಕೆ ಹಿನ್ನೆಲೆಯಲ್ಲಿ ಎರಡು ಟೋಲ್ ಕೇಂದ್ರಗಳಿಗೆ ಪೊಲೀಸರು ಭದ್ರತೆ ಒದಗಿಸಿದ್ದಾರೆ.

'ಟೋಲ್ ದರ ಪರಿಷ್ಕರಣೆ': 'ಮೈಸೂರು-ಬೆಂಗಳೂರು ದಶಪಥ ಹೆದ್ದಾರಿಯ ಟೋಲ್ ದರವನ್ನು ಪರಿಷ್ಕರಿಸಲಾಗುವುದು' ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ.

'ನೈಸ್ ರಸ್ತೆಯಲ್ಲಿ ಟೋಲ್ ಎಷ್ಟಿದೆ ಎನ್ನುವುದನ್ನು ನೋಡಿ, ಹೊಸ ಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು' ಎಂದು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು. ಶುಲ್ಕ ಪ್ರಮಾಣ ಹೆಚ್ಚಾಗಿದ್ದಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿತ್ತು.

ನಿವೃತ್ತ ಸೈನಿಕರ ಪಿಂಚಣಿ ಪಾವತಿ ಗಡುವು ವಿಸ್ತರಣೆ: ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ಪ್ರಜಾವಾಣಿ ವಾರ್ತೆ



ನವದೆಹಲಿ: ಒಂದು ಶ್ರೇಣಿ-ಒಂದು ಪಿಂಚಣಿ ಯೋಜನೆ (ಒಆರ್‌ಒಪಿ) ಅಡಿಯಲ್ಲಿ ಅರ್ಹ ಪಿಂಚಣಿದಾರರಿಗೆ ಬಾಕಿ ಮೊತ್ತ ಪಾವತಿಸಲು ನಿಗದಿಪಡಿಸಿದ್ದ ಗಡುವನ್ನು ಏಕಪಕ್ಷೀಯವಾಗಿ ವಿಸ್ತರಣೆ ಮಾಡಿರುವ ಕೇಂದ್ರ ರಕ್ಷಣಾ ಸಚಿವಾಲಯದ ವಿರುದ್ಧ ಸುಪ್ರೀಂ ಕೋರ್ಟ್ ಸೋಮವಾರ ಚಾಟಿ ಬೀಸಿದೆ.

ನಾಲ್ಕು ಕಂತುಗಳ ಬದಲು ಒಂದೇ ಕಂತಿನಲ್ಲಿ ಬಾಕಿ ಮೊತ್ತ ಪಾವತಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಇಂಡಿಯನ್ ಎಕ್ಸ್-ಸರ್ವಿಸ್‌ಮನ್ ಮೂವ್‌ಮೆಂಟ್ (ಐಇಎಸ್‌ಎಂ) ಸಂಘಟನೆ ಅರ್ಜಿ ಸಲ್ಲಿಸಿತ್ತು.

ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, 'ರಕ್ಷಣಾ ಸಚಿವಾಲಯದ ತೀರ್ಮಾನವು ಸುಪ್ರೀಂ ಕೋರ್ಟ್‌ನ ತೀರ್ಪಿಗೆ ವಿರುದ್ಧವಾಗಿದೆ' ಎಂದು ಹೇಳಿದೆ.

'ಈ ವರ್ಷದ ಮಾರ್ಚ್ ಮಧ್ಯದೊಳಗೆ ಬಾಕಿ ಮೊತ್ತ ಪಾವತಿಸುವಂತೆ ನ್ಯಾಯಾಲಯ ನಿರ್ದೇಶಿಸಿತ್ತು. ಹೀಗಿದ್ದರೂ ರಕ್ಷಣಾ ಸಚಿವಾಲಯವು ಗಡುವು ವಿಸ್ತರಣೆ ಸಂಬಂಧ ಏಕಪಕ್ಷೀಯ ನಿರ್ಧಾರ ಕೈಗೊಂಡಿದ್ದು ಏಕೆ? ಈ ಕುರಿತು ವೈಯಕ್ತಿಕ ಅಫಿಡವಿಟ್ ಸಲ್ಲಿಸಿ' ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ರಕ್ಷಣಾ ಸಚಿವಾಲಯದ ಕಾರ್ಯದರ್ಶಿಗೆ ತಾಕೀತು ಮಾಡಿದೆ.

7ನೇ ಪುಟ ನೋಡಿ

G20 ಭಾರತ 2023 INDIA
ಸ್ವಾತಂತ್ರ್ಯದ ಅಮೃತಮಹೋತ್ಸವ
ನವ ಭಾರತಕ್ಕಾಗಿ ನವ ಕರ್ನಾಟಕ
ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ
ಹೆಚ್ಚಿನ ಸಾರಿಗೆ ಸೌಲಭ್ಯ
'ಮುಖ್ಯಮಂತ್ರಿ ವಿದ್ಯಾಶಕ್ತಿ' ಯೋಜನೆಯಡಿ ಸರ್ಕಾರಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ
'ಮಕ್ಕಳ ಬಸ್ಸು' ಯೋಜನೆಯಡಿ 21 ಲಕ್ಷ ಶಾಲಾ–ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾರಿಗೆ ನಿಗಮಗಳಿಂದ ರೂ.100 ಕೋಟಿ ವೆಚ್ಚದಲ್ಲಿ 2,000 ಹೊಸ ಕಾರ್ಯಾಚರಣೆಗಳಿಗೆ ಕ್ರಮ
ಬಜೆಟ್ 2023-24
ಶ್ರೀ ನರೇಂದ್ರ ಮೋದಿ ಸನ್ಮಾನ್ಯ ಪ್ರಧಾನಮಂತ್ರಿಗಳು
ಶ್ರೀ ಬಸವರಾಜ ಎಸ್. ಬೊಮ್ಮಾಯಿ ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ವಾರ್ತೆ

‘ನೇಕಾರರಿಗೆ 10 ಎಚ್‌ಪಿ ಉಚಿತ ವಿದ್ಯುತ್’

ಬಾಗಲಕೋಟೆ: ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ನೇಕಾರರಿಗೆ 10 ಎಚ್‌ಪಿ ವರೆಗೆ ಉಚಿತ ವಿದ್ಯುತ್ ನೀಡಲಾಗುವುದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಘೋಷಿಸಿದರು.

ಜಿಲ್ಲೆಯ ತೆರದಾಳದಲ್ಲಿ ಸೋಮವಾರ 'ಪ್ರಜಾಧ್ವನಿ' ಯಾತ್ರೆಯ ಬಹಿರಂಗ ಸಭೆಯಲ್ಲಿ ಅವರು ವಿಷಯ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು–3ರವರ ಕಛೇರಿ,
ಘನತ್ಯಾಜ್ಯ ನಿರ್ವಹಣೆ–1, ದಾಸಪ್ಪ ಆಸ್ಪತ್ರೆ ಕಟ್ಟಡ ಹಿಂಭಾಗ,
ಬೆಂಗಳೂರು–560002

ನಂ.: ಕಾಪಾಅ–3/ಘತ್ಯಾನಿ/ಟೆಂಡರ್/08/2022–23 ದಿನಾಂಕ: 27.02.2023

ಅಲ್ಪಾವಧಿ – ದ್ವಿ ಲಕೋಟೆ ಟೆಂಡರ್

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ–3, ಇವರು ಘನತ್ಯಾಜ್ಯ ನಿರ್ವಹಣಾ ಇಲಾಖೆಯಲ್ಲಿ ಈಗಾಗಲೇ ನಿಯೋಜಿಸಲಾದ ಆಧಾರ್ ಸಕ್ರಿಯಗೊಳಿಸಿದ ಬಯೋಮೆಟ್ರಿಕ್ ಹಾಜರಾತಿ ಸಾಧನಗಳ ವಾರ್ಷಿಕ ನಿರ್ವಹಣೆ ಒಪ್ಪಂದ (ಎಎಂಸಿ) ಮತ್ತು ಅದನ್ನು ಒಂದು ವರ್ಷದ ನಿರ್ವಹಣೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಘಟಕಗಳ ಸಂಖ್ಯೆ	ಇಎಂಡಿ (ರೂ. ಲಕ್ಷಗಳಲ್ಲಿ)
1	ಬಿಬಿಎಂಪಿ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಘನತ್ಯಾಜ್ಯ ನಿರ್ವಹಣಾ ಇಲಾಖೆಯಲ್ಲಿ ಈಗಾಗಲೇ ನಿಯೋಜಿಸಲಾದ ಆಧಾರ್ ಸಕ್ರಿಯಗೊಳಿಸಿದ ಬಯೋಮೆಟ್ರಿಕ್ ಹಾಜರಾತಿ ಸಾಧನಗಳ ವಾರ್ಷಿಕ ನಿರ್ವಹಣೆ ಒಪ್ಪಂದ (ಎಎಂಸಿ) ಮತ್ತು ಒಂದು ವರ್ಷದವರೆಗೆ ಅದರ ನಿರ್ವಹಣೆ.	600	0.56

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **08.03.2023ರ ಸಂಜೆ 4:00 ಗಂಟೆಯವರೆಗೆ.** (3) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **03.03.2023ರ ಸಂಜೆ 4:00 ಗಂಟೆಯವರೆಗೆ.** (4) ಪೂರ್ವಭಾವಿ ಸಭೆಯು ಜಂಟಿ ಆಯುಕ್ತರು (ಹೆಚ್&ಘತ್ಯಾನಿ), ಬಿಬಿಎಂಪಿ ಕೇಂದ್ರ ಕಛೇರಿ ಆವರಣ, 2ನೇ ಮಹಡಿ, ಅನೆಕ್ಸ್ ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು ಇಲ್ಲಿ ದಿನಾಂಕ **04.03.2023ರ ಮಧ್ಯಾಹ್ನ 3:00 ಗಂಟೆಗೆ** ನಡೆಯಲಿದೆ. (5) ತಾಂತ್ರಿಕ ಬಿಡ್‌ಗಳನ್ನು **10.03.2023ರ ಸಂಜೆ 4:00 ಗಂಟೆಯ** ನಂತರ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (6) ಅರ್ಹ ತಾಂತ್ರಿಕ ಬಿಡ್ಡರುಗಳಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–3,
ಘನತ್ಯಾಜ್ಯ ನಿರ್ವಹಣೆ, ಬಿಬಿಎಂಪಿ

ರಸ್ತೆಗೆ ನೀರು ಚಿಮುಕಿಸಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು

ರಸ್ತೆ ಅವ್ಯವಸ್ಥೆ: ನೀರು ಚಿಮುಕಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರದ ನಾಗೇಂದ್ರ ಬ್ಲಾಕ್‌ನಲ್ಲಿ ರಸ್ತೆ ಅಗೆದು ಬಿಟ್ಟಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ರಾಮನಾಮ ಜಪಿಸುವ ಮೂಲಕ ಭಾನುವಾರ ವಿಭಿನ್ನ ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ವಕ್ತಾರ ಶಂಕರ್ ಗುಹಾ ದ್ವಾರಕನಾಥ್ ನೇತೃತ್ವದಲ್ಲಿ ರಸ್ತೆಗೆ ನೀರು ಚಿಮುಕಿಸಿ ‘ಶ್ರೀ ರಾಮ್, ಜೈ ರಾಮ್’ ಎಂದು ಪಠಿಸುತ್ತಾ ರಸ್ತೆಯಲ್ಲಿ ಸಾಗಿದರು.

ನಾಗೇಂದ್ರ ಬ್ಲಾಕ್‌ನ ಎರಡನೇ ಮುಖ್ಯ ರಸ್ತೆಯಲ್ಲಿ ದುರಸ್ತಿ ಕಾಮಗಾರಿ ನಡೆಸಲು ಅಗೆದು ಎರಡು ತಿಂಗಳಾಗಿವೆ. ಇಡೀ ರಸ್ತೆಯಲ್ಲಿ ಕಲ್ಲು, ಮಣ್ಣು ಸುರಿದಿದ್ದು, ದೂಳಿನ ನಡುವೆ ಜೀವನ ಸಾಗಿಸುವಂತಾಗಿದೆ. ವಾಹನ ಸವಾರರು, ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಸ್ಥಳಕ್ಕೆ ಬಂದ ಬಿಜೆಪಿ ಕಾರ್ಯಕರ್ತರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಬಿಜೆಪಿ ಕಾರ್ಯಕರ್ತರ ಕಾಲಿಗೆ ನಮಸ್ಕರಿಸಿ ರಸ್ತೆ ಸರಿಪಡಿಸಿ ಎಂದು ಕೇಳಿದರು.

ಬಸವನಗುಡಿ ತುಂಬೆಲ್ಲಾ ಇದೇ ರೀತಿಯ ಸಮಸ್ಯೆಗಳಿದ್ದು, ಶಾಸಕರಾಗಲಿ ಅಥವಾ ಬಿಬಿಎಂಪಿ ಅಧಿಕಾರಿಗಳಾಗಲಿ ಗಮನ ಹರಿಸುತ್ತಿಲ್ಲ ಎಂದು ಶಂಕರ್ ಗುಹಾ ದ್ವಾರಕಾನಾಥ್ ಆರೋಪಿಸಿದರು.

ಕಾಂಗ್ರೆಸ್ ಮುಖಂಡರಾದ ಸುಚೇಂದ್ರ, ಕೃಷ್ಣ, ರಾಘವೇಂದ್ರ, ರವಿಕುಮಾರ್, ರಾಜು, ಬಸವರಾಜು, ಗಿರಿನಗರ ವಾರ್ಡ್ ಅಧ್ಯಕ್ಷ ಶಿವಕುಮಾರ್ ಇದ್ದರು.

ಸಿಪಿಕೆ ಸೇರಿ ಮೂವರಿಗೆ ಪಂಪ ಪ್ರಶಸ್ತಿ



ಸಿ.ಪಿ. ಕೃಷ್ಣಕುಮಾರ್



ಬಾಬು ಕೃಷ್ಣಮೂರ್ತಿ

ಎಸ್‌ಆರ್ ರಾಮಸ್ವಾಮಿ

ಬೆಂಗಳೂರು: ಸಾಹಿತಿಗಳಾದ ಸಿ.ಪಿ. ಕೃಷ್ಣಕುಮಾರ್, ಡಾ.ಬಾಬು ಕೃಷ್ಣಮೂರ್ತಿ ಮತ್ತು ಡಾ.ಎಸ್. ಆರ್.ರಾಮಸ್ವಾಮಿ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡುವ ‘ಪಂಪ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

2020-21, 2021-22 ಮತ್ತು 2022-23ನೇ ಸಾಲಿನ ‘ಪಂಪ’ ಪ್ರಶಸ್ತಿ ಪುರಸ್ಕೃತರ ಆಯ್ಕೆಗಾಗಿ ಡಾ.ಜಿ. ಬಿ. ಹರೀಶ್ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು. ಸಮಿತಿಯ ಶಿಫಾರಸಿನಂತೆ 2020-21ನೇ ಸಾಲಿಗೆ ಸಿ.ಪಿ.ಕೃಷ್ಣಕುಮಾರ್, 2021-22ನೇ ಸಾಲಿಗೆ ಬಾಬು ಕೃಷ್ಣಮೂರ್ತಿ ಮತ್ತು 2022-23ನೇ ಸಾಲಿನ ಪ್ರಶಸ್ತಿಗೆ ಎಸ್.ಆರ್.ರಾಮಸ್ವಾಮಿ ಅವರನ್ನು ಆಯ್ಕೆಮಾಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಪ್ರಶಸ್ತಿಯು ₹ 5 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿರುತ್ತದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್ ಭಾಗಿ

ಎಂ.ಎಸ್. ರಾಮಯ್ಯ ಜನ್ಮ ಶತಮಾನೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಜಯರಾಮ್

ಸೀತಾರಾಂ

ಬೆಂಗಳೂರು: ಗೋಕುಲ ಶಿಕ್ಷಣ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ದಿವಂಗತ ಡಾ. ಎಂ.ಎಸ್. ರಾಮಯ್ಯ ಅವರ ಜನ್ಮ ಶತಮಾನೋತ್ಸವ ಮಾರ್ಚ್ 1ರಂದು ನಡೆಯಲಿದೆ.

ನ್ಯೂ ಬಿಇಎಲ್ ರಸ್ತೆಯ ಎಂ.ಎಸ್. ರಾಮಯ್ಯ ನಗರದ ಕಾಲೇಜಿನ ಜ್ಞಾನಗಂಗೋತ್ರಿ ಕ್ಯಾಂಪಸ್‌ನಲ್ಲಿ ಬೆಳಿಗ್ಗೆ 11.30ಕ್ಕೆ ನಡೆಯುವ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಳ್ಳಲಿದ್ದಾರೆ.

‘ಗುಣಮಟ್ಟದ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ನೀಡುವ ಉದ್ದೇಶದಿಂದ ಶೈಕ್ಷಣಿಕ ಸಂಸ್ಥೆಗಳನ್ನು ಎಂ.ಎಸ್. ರಾಮಯ್ಯ ಅವರು ಆರಂಭಿಸಿದ್ದರು. ರಾಜ್ಯದಲ್ಲಿ ಖಾಸಗಿ ಕಾಲೇಜುಗಳೇ ಇಲ್ಲದ ಸಂದರ್ಭದಲ್ಲಿ ಸರ್ಕಾರದ ನೆರವು ಪಡೆಯದೇ ಸ್ವಂತ ಜಮೀನಿನಲ್ಲಿ ಖಾಸಗಿ ಕಾಲೇಜುಗಳನ್ನು ಆರಂಭಿಸಿ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಎಂ.ಎಸ್.ರಾಮಯ್ಯ ಯಶಸ್ವಿಯಾದರು’ ಎಂದು ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಆರ್. ಜಯರಾಮ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

‘ದೂರದೃಷ್ಟಿಯ ನಾಯಕತ್ವ ಹೊಂದಿದ್ದ ಎಂ.ಎಸ್. ರಾಮಯ್ಯ ತಂತ್ರಜ್ಞಾನದ ಮಹತ್ವ ಅರಿತಿದ್ದರು. ಹೀಗಾಗಿಯೇ, ಅವರು 1962ರಲ್ಲಿಯೇ ಎಂಜಿನಿಯರಿಂಗ್ ಕಾಲೇಜು ಆರಂಭಿಸಿದ್ದರು. ವೈದ್ಯಕೀಯ, ಎಂಜಿನಿಯರಿಂಗ್, ನರ್ಸಿಂಗ್, ಕಾನೂನು ಸೇರಿದಂತೆ ಹಲವು ಶೈಕ್ಷಣಿಕ ಸಂಸ್ಥೆಗಳು ಇಂದು ಪ್ರತಿಷ್ಠಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಶಿಕ್ಷಣ ಸಂಸ್ಥೆಗಳ ಮೂಲಕ 22 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ’ ಎಂದರು.

‘ಬದಲಾಗುತ್ತಿರುವ ತಂತ್ರಜ್ಞಾನಗಳನ್ನು ಶಿಕ್ಷಣದಲ್ಲೂ ಅಳವಡಿಸಿಕೊಳ್ಳಲಾಗುತ್ತಿದೆ. ಸಂಸ್ಥೆಯ ಕಾಲೇಜುಗಳಿಗೆ ನ್ಯಾಕ್, ಎನ್‌ಬಿಎ, ಎಂಸಿಐ ಸೇರಿದಂತೆ ಎಲ್ಲ ಮಾನ್ಯತಾ ಮಂಡಳಿಗಳಿಂದ ಮಾನ್ಯತೆ ಸಿಕ್ಕಿದೆ. ಇದು ಗುಣಮಟ್ಟವನ್ನು ಪ್ರತಿನಿಧಿಸುತ್ತದೆ’ ಎಂದರು.

‘ಜನ್ಮ ಶತಮಾನೋತ್ಸವದ ಪ್ರಯುಕ್ತ ಕಳೆದ ವರ್ಷದಿಂದಲೇ ಅಂತರ ರಾಷ್ಟ್ರೀಯ ವಸ್ತುಪ್ರದರ್ಶನ, ಹ್ಯಾಕಥಾನ್ ಹಾಗೂ ರಾಮಯ್ಯ ಉಪಗ್ರಹ ಉಡಾವಣೆ ಸೇರಿದಂತೆ ಹಲವಾರು ಉಪನ್ಯಾಸ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಲಾಗಿದೆ. ಉಪಗ್ರಹ ಉಡಾವಣೆ ಯೋಜನೆಯಲ್ಲಿ 100 ವಿದ್ಯಾರ್ಥಿಗಳು ಭಾಗಿಯಾಗಿದ್ದಾರೆ. ಇದು ಪ್ರಮುಖ ಕಾರ್ಯಕ್ರಮವಾಗಿದೆ’ ಎಂದು ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್.ಸೀತಾರಾಂ ತಿಳಿಸಿದರು.

ಕುಲಪತಿ ಪ್ರೊ. ಕೆ.ಕೆ. ರೈನಾ ಮಾತನಾಡಿ, ‘ಕೋವಿಡ್ ಸಮಯದಲ್ಲಿ ಎಂ.ಎಸ್. ರಾಮಯ್ಯ ಆಸ್ಪತ್ರೆ ವತಿಯಿಂದ 10,973 ಸೋಂಕಿತರಿಗೆ ಚಿಕಿತ್ಸೆ ನೀಡಲಾಗಿದೆ. ಎರಡನೇ ಅಲೆಯಲ್ಲಿ 880 ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಒಂದು ಲಕ್ಷಕ್ಕೂ ಅಧಿಕ ಜನರಿಗೆ ಲಸಿಕೆ ನೀಡಲಾಗಿದೆ’ ಎಂದು ಮಾಹಿತಿ ನೀಡಿದರು.

ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ: ಗುರಿ ಮೀರಿ ಸಾಧನೆ

ಪ್ರಜಾವಾಣಿ ವಾರ್ತೆ

ಡಾ. ಕೆ. ಸುಧಾಕರ್

ಬೆಂಗಳೂರು: ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಕೇಂದ್ರ ಸರ್ಕಾರ ನೀಡಿದ್ದ ಗುರಿಯನ್ನು ಮೀರಿ ಶೇ 126 ರಷ್ಟು ಸಾಧನೆಯನ್ನು ರಾಜ್ಯ ಸರ್ಕಾರ ಮಾಡಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಪ್ರಸಕ್ತ ವರ್ಷ 3.39 ಲಕ್ಷ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಳನ್ನು ಕೈಗೊಳ್ಳುವಂತೆ ಗುರಿ ನೀಡಿತ್ತು. ಈಗಾಗಲೇ 4.28 ಲಕ್ಷ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ. ರಾಜ್ಯದಲ್ಲಿ ಅಂಧತ್ವ ನಿವಾರಣೆ ಅಭಿಯಾನಕ್ಕೆ ಉತ್ತಮ ಸ್ಪಂದನ ದೊರೆತಿದೆ ಎಂದು ಸಚಿವರು ವಿವರಿಸಿದ್ದಾರೆ.

ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲಿ ಅನೇಕರು ಡಯಾಬಿಟಿಕ್ ರೆಟಿನೋಪತಿ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಇದಕ್ಕಾಗಿ ಅತ್ಯಾಧುನಿಕ ‘ಗ್ರೀನ್ ಲೇಸರ್’ ಚಿಕಿತ್ಸೆ ಪರಿಚಯಿಸಲಾಗಿದೆ. ವಿಜಯಪುರ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ನೇತ್ರ ತಜ್ಞರು ವಿಶೇಷ ಪರಿಣತಿ ಪಡೆದು ಇಂತಹ ವಿನೂತನ ಚಿಕಿತ್ಸೆಯನ್ನು ಪ್ರಾಯೋಗಿಕವಾಗಿ ಮಾಡುತ್ತಿದ್ದಾರೆ. ಇದರಿಂದ ಉತ್ತಮ ಫಲಿತಾಂಶ ದೊರೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಮಧುಮೇಹದಿಂದ ರೆಟಿನೋಪತಿ ಸಮಸ್ಯೆಗೆ ಒಳಗಾದರೆ ದೃಷ್ಟಿಗೆ ಹಾನಿಯಾಗುವ ಸಂಭವ ಇರುತ್ತದೆ. ಇದನ್ನು ಪತ್ತೆ ಮಾಡಿ ಅಗತ್ಯ ಕಂಡುಬಂದಲ್ಲಿ ಗ್ರೀನ್ ಲೇಸರ್ ಚಿಕಿತ್ಸೆ ನೀಡಿ ಸಮಸ್ಯೆ ಪರಿಹರಿಸಬಹುದಾಗಿದೆ. ಡಯಾಬಿಟಿಕ್ ರೆಟಿನೋಪತಿಗೆ ಒಳಗಾದವರಿಗೆ ಎಷ್ಟು ಬೆಳಕಿದ್ದರೂ ಕಾಣುವುದಿಲ್ಲ. ವಿಜಯಪುರ ಜಿಲ್ಲೆಯಲ್ಲಿ ಒಂದು ತಿಂಗಳಿಂದ 40ಕ್ಕೂ ಹೆಚ್ಚು ರೋಗಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಈ ಚಿಕಿತ್ಸೆಯನ್ನು ಇತರೆ ಆಸ್ಪತ್ರೆಗಳಿಗೂ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಜತೆಗೆ, ‘ಬಳ್ಳಾರಿ ಅಂಧತ್ವ ಮುಕ್ತ ಜಿಲ್ಲೆ’ ಅಭಿಯಾನಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಬಳ್ಳಾರಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ವಿಶೇಷ ಸಂಚಾರಿ ಚಿಕಿತ್ಸಾ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

‘ಮತಭಿಕ್ಷೆಗೆ ಪ್ರವಾಸ’

ಬೆಂಗಳೂರು: ‘ರಾಜ್ಯ ಬಿಜೆಪಿ ನಾಯಕರು ಗುಲಾಮರು. ಅವರು ರಾಷ್ಟ್ರೀಯ ನಾಯಕರ ಮುಖ ತೋರಿಸಿ ಮತ ಕೇಳುತ್ತಾರೆ. ರಾಜ್ಯ ವಿಪತ್ತಿನಲ್ಲಿದ್ದಾಗ ಬಾರದ ಮೋದಿ, ಶಾ, ಮತಭಿಕ್ಷೆ ಯಾಚಿಸಲಷ್ಟೇ ಬರುತ್ತಿದ್ದಾರೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಕಿಡಿಕಾರಿದ್ದಾರೆ.

‘ಲಿಂಗಾಯತ ಸಮುದಾಯದ ನಾಯಕಯಡಿಯೂರಪ್ಪ.ಅವರನ್ನುಇಟ್ಟುಕೊಳ್ಳಬೇಕೊ,ಬೇಡವೊಎಂಬಅಡ್ಡಕತ್ತರಿಯಲ್ಲಿ ಬಿಜೆಪಿ ನಾಯಕರಿದ್ದಾರೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

BUSINESS

Business to Business

Hotel & Restaurant

FOR SALE RENOWNED HOTEL (OPP: JAMIA MASJID, CITY MARKET) NEXT to TAJ HOTEL, MEASURING 3000 SFT. CONTACT: 9448673160, 9845110533

PERSONAL

Change of Name

CHANGE OF NAME
I, ANTO JACHARIAS K.S. Resing at #35, 6th Cross, Opp.Vibgyor School,Pragathi Layout, Horamavu Post, Bangalore - 560043, have changed my name to PRABHU. S vide affidavit dated 03.12.2022, before Notary S.Samuel Solomon, Bangalore. Henceforth, I shall be called PRABHU. S only.

I, S K VENKATESHWARA RAJU have changed my name to S K V RAJU vide affidavit dated: 20/2/2023 Before Notary Shreeshail B.Gobbani Bangalore.

CHANGE OF NAME
I, JEEVAN C D, S/o Devaiaha C R/a No. 22/4, 1st Main Road, Mathikere, Bangalore North, Bengaluru-560054, have changed my name to JEEVAN CHOKKADI DEVAIAH S/o Late Devaiah Chokkadi Mandappa vide affidavit dated 27.02.2023, before Notary Bhagya Kumari. N, Bangalore. Henceforth, I shall be called as JEEVAN CHOKKADI DEVAIAH only.

I, MOHAMMED OMER HUSSAIN, Residing at #34, Doddamavalli, Bengaluru-4 have changed my name as MOHAMMED UMAR HUSSAIN, vide affidavit dated 27/2/2023 before Notary V.Rjashekhara, Bengaluru

I, ERANNA, Residing at Kadayarapanahalli Village, Bandi KodigeHalli Post, Bangalore-562149 have changed my name to ERANNA RAMJI SIDDANNA RAMJI vide affidavit dated 27.02.2023 sworn to before Advocate and Notary K.H. Venkatappa, Chickballapur.

DH DECCAN HERALD ಪ್ರಜಾವಾಣಿ

REAL ESTATE

BOOK YOUR REAL ESTATE AD IN DECCAN HERALD ALL KARNATAKA PRAJAVANI ALL KARNATAKA

@ 750/-* Per Sqcm
Single Column

conditions apply*

For More Details Contact:
9731810277 | 9901641752
9845114560 | 9886213331
080- 45557163 | 45557164

PUBLIC NOTICE

DOCUMENT LOST
My client, **Mrs. H A MANA,** D/o H.R. Ajay Kumar, has misplaced/lost the **Agreement to sell & Agreement to construction** both dated 10/06/2005, pertaining to apartment bearing #15103 (measuring 3122 sft) Prestige Shantiniketan Whitefield Bangalore 560048, adjudicated at Jayanagar Sub Registrar office.
If anyone has found, kindly inform the undersigned party in writing to the below No. B.S.Shahbuddin - 9902998203
(Reg.Roll No. Kar-1977/15)
Advocate, Bangalore
Date 28/02/2023

PUBLIC NOTICE
NOTICE is hereby given that **Mr. Ramesh N** has agreed to sell his Residential Plot No 363/1, Sy.No.20,21,23 & 24, 2nd Cross, Madhura Nagar Varthur, Bangalore..
If anyone has any rights /claims /objections then he/she may contact to Shahid Ahmed Baig no 67, 6th Cross, Rahmath Nagar, RT Nagar Bangalore - 560032. Contact No. 9740080679. Within 30 days of this notice after which no claims will be entertained

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ ಸ್ಥಿರಾಸ್ತಿಯನ್ನು, ಅದರ ಪ್ರಸ್ತುತ ಮಾಲೀಕರಾದ **ಶ್ರೀ. ಚಾಂಡಿ ಕೋಶಿ,** ವಿಳಾಸ ಫ್ಲಾಟ್ ನಂ. 404, ಎಂಬೆಸ್ಸಿ ಟ್ರಾಂಕ್ವಿಲ್, ನಂ. 22, 8ನೇ ಮುಖ್ಯರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034 (ಇಲ್ಲಿ ಇನ್ನುಮುಂದೆ "**ಮಾಲೀಕರು**" ಎನ್ನಲಾಗುವ) ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಒಂದು ವೇಳೆ ಯಾವುದೇ ವ್ಯಕ್ತಿಯಾಗಲಿ, ಸಂಸ್ಥೆಯಾಗಲಿ, ಕಂಪನಿಯಾಗಲಿ, ಸಂಘವಾಗಲಿ, ಸಂಘಟಣೆಯಾಗಲಿ (ಕಾರ್ಪೋರೇಟ್ ಅಥವಾ ಇನ್ನಿತರ) ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಭಾಗದ ಮೇಲೆ ಯಾವುದೇ ಸ್ವರೂಪ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಟೆನೆನ್ಸಿ, ಅಡಮಾನ, ಚಾರ್ಜ್, ಲೀನ್ ಅಥವಾ ಡಿಮಾಂಡ್ ಅಥವಾ ಇನ್ನಿತರ ಯಾವುದೇ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ತಮ್ಮ ಹಿತಾಸಕ್ತಿಯನ್ನು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 10 (ಹತ್ತು) ದಿನಗಳೊಳಗೆ, ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ಎಲ್ಲಾ ವಿವರಗಳು ಮತ್ತು ಪೂರಕ ದಾಖಲಾತಿಗಳ ಸಮೇತ ಸಲ್ಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಮೇಲ್ಕಂಡ ಮಾಲೀಕರು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಸ್ಪಷ್ಟವಾದ ಮತ್ತು ಮಾರಾಟ ಮಾಡಬಲ್ಲ ಯೋಗ್ಯ ಹಕ್ಕುಗಳನ್ನು ಹೊಂದಿದ್ದಾರೆ ಹಾಗೂ ಇನ್ನಿತರ ಯಾರೂ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಯಾವುದೇ ಹಕ್ಕು, ಹಿತಾಸಕ್ತಿ, ಬಾಧ್ಯತೆ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ; ಮತ್ತು ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ವ್ಯವಹಾರವನ್ನು ಕೈಗೊಂಡು ಪೂರ್ಣಗೊಳಿಸಿಕೊಳ್ಳಲು ಸ್ವತಂತ್ರರಾಗಿದ್ದಾರೆ ಎಂದು ಪರಿಭಾವಿಸಲಾಗುತ್ತದೆ. ನಿಗದಿತ ಕಾಲಾವಧಿಯ ನಂತರ ಸಂದಾಯವಾಗುವ ಯಾವುದೇ ಆಕ್ಷೇಪಣೆ ಮತ್ತು/ಅಥವಾ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವು ನಮ್ಮ ಕಕ್ಷಿದಾರರಿಗೆ ಯಾವುದೇ ನಿರ್ಬಂಧಗಳನ್ನು ರೂಪಿಸುವುದಿಲ್ಲ.

ಷೆಡ್ಯೂಲ್ ಪ್ರಾಪರ್ಟಿ

5ನೇ ಬ್ಲಾಕ್, ಕೋರಮಂಗಲ ಎಕ್ಸ್‌ಟೆನ್ಷನ್, ಬೆಂಗಳೂರು ವಿಳಾಸ ವಾರ್ಡ್ ನಂ. 151 ರಲ್ಲಿ ಸ್ಥಿತಗೊಂಡಿರುವ, ಬಿಬಿಎಂಪಿ ಪಿಐಡಿ ನಂ. 67–1–137 ಮತ್ತು ಸೈಟ್ ನಂ. 137 ಹೊಂದಿರುವ, ಸುಮಾರು 6,000 ಚ.ಅ. ವಿಸ್ತೀರ್ಣವುಳ್ಳ ಜಮೀನಿನಲ್ಲಿರುವ (ಮತ್ತು ಸುಮಾರು 2,000 ಚದರ ಅಡಿ ವಿಸ್ತೀರ್ಣದ ಕಟ್ಟಡವನ್ನು ಹೊಂದಿರುವ) ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವಕ್ಕೆ: ಸೈಟ್ ನಂ. 136;
ಪಶ್ಚಿಮಕ್ಕೆ: ಸೈಟ್ ನಂ. 138;
ಉತ್ತರಕ್ಕೆ: ಸೈಟ್ ನಂ. 121; ಮತ್ತು
ದಕ್ಷಿಣಕ್ಕೆ: ರಸ್ತೆ.

ಮಹೇಶ್ ಮದನ್ ಭಟ್, ವಕೀಲರು, ಎಂಎಂಬಿ ಲೀಗಲ್
634, 2ನೇ ಮಹಡಿ, 5ನೇ ಕ್ರಾಸ್, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034. ಫೋನ್: 91–80–41284444/41285555.
ಇ–ಮೇಲ್: mahesh@mmblegal.in
ಸ್ಥಳ: ಬೆಂಗಳೂರು ದಿನಾಂಕ: ಫೆಬ್ರವರಿ 28, 2023

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: E/GSU/ELE/2022-23/OT/GeM-02 ದಿನಾಂಕ: 22.02.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಗತಿ ಶಕ್ತಿ ಘಟಕ – ಬೆಂಗಳೂರು ವಿಭಾಗ – ಸ್ಥಿರವಾದ ಸಂಭಾವನೆಯೊಂದಿಗೆ 24 ತಿಂಗಳುಗಳ ಅವಧಿಯವರೆಗೆ ಮಾನವ ಶಕ್ತಿಯ ಹೊರಗುತ್ತಿಗೆ ಕಾರ್ಯ (ಸೈಟ್ ಇಂಜಿನಿಯರ್, ಟೆಕ್ನೀಷಿಯನ್‌ಗಳು /ವೈರ್‌ಮ್ಯಾನ್, ಆಟೋ ಕ್ಯಾಡ್ ಆಪರೇಟರುಗಳು, ಸ್ಟೆನೋಗ್ರಾಫರ್, ಡೇಟಾ ಎಂಟ್ರಿ ಆಪರೇಟರುಗಳು ಮತ್ತು ಸಹಾಯಕರು). ಬಿಡ್ ಸಂ. GEM/2023/B/3159075 ದಿನಾಂಕ: 22.02.2023	ರೂ. 5,39,10,024/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.03.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ https://gem.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್, ಗತಿ ಶಕ್ತಿ ಘಟಕ ಬೆಂಗಳೂರು
PUB/701/AAD/PRB/SWR/2022-23
S.W.Railways SWRRLY SWRRLY

SBI STATE BANK OF INDIA
Specialised Personal Banking Branch (Code 06866)
65, St. Mark's Road BENGALURU 560 001.

PUBLIC NOTICE

This is to inform you that, you have availed locker facility with this Branch of State Bank of India(hereinafter mentioned as bank for brevity) and the under mentioned amounts are due as on date towards recurring charges/maintenance charges/penalties against the assigned safe deposit locker. The Bank had sent 3 notices for which there is no reply. Hence you may kindly be informed that as per the RBI Circular No. DOR. LEG. REC/40/09.07.005/2021-22 dated 18.08.2021, the Bank had decided to break open the said lockers and settle the arrears by liquidating the assets if any in the said locker. Anyone who wishes to settle the below mentioned arrears and plan to continue/surrender the said lockers may kindly contact the Branch Manager of the Bank or the legal counsel with their due representation in written within 10 days of this public notice failing which Bank will consider as if you had forgone such rights of claim in favour of Bank in accordance with above mentioned RBI Policy.

Sl No	Locker No	Name	Total Amount Due (In Rs.)	Address
1	2222	AVANI NAGAVENI	31152	No.11/8, 1st cross, GH Layout, 3rd Block East, Jayanagar, Bangalore-11.
2	2381	AYSHA M	8850	Door no 15/1, colonel Hill Road, Bengaluru 560056.
3	1260	MANISH MISTRY	7780	4914, High Point, 45 Palace Road, Bengaluru 560001.
4	182	C CHENGAPPA	10620	1074, 35th D Cross, IV T Block, Jayanagar, Bengaluru-560041.
5	1287	EBENEZER SUNANDA	7788	T G Extension, Hosakote 562114, Bangalore Rural
6	1676	RAMYA LAKSHMI	38350	A 1215, Komarla Brigade Residency, 51 Uttarahalli Main Road, Banashankari, 3rd Stage, Bengaluru-560061.
7	612	MURLI MURTI	14357	E 904 , Sterling Terrace, 100 ft Road SSK, 3RD Stage, Bengaluru 560085.
8	583	NIDHI LOYALKA	14160	Zenith Exports LTD, No.11, Tavarakere Road, Bangalore-560029.
9	1350	MADHURI RAO	42480	207 B Elgin, 11 Hosur Road, Near Shanthi nagar, Hockey Stadium, Bengaluru-560025.
10	1236	SHABERA KHAN	9440	24/1-1, Bore Bank Road, Benson Town, Bengaluru-560046.
11	1525	RASHIDA BEGUM	9440	15/1 Colonel Hill Road, Opp Colonel Hill School, Bangalore 560051.
12	200	YVETTE VAZ	2360	4A, Ghar Appartment, 32 Church Street, Bangalore-560001.
13	1520	SHUAIB BAIG	35400	Sales Manager, York International, PO BOX 32232, Bangalore-560001.
14	507	MOHD. HUSSAIN	2360	ABN Amro Bank, po box 2567, Dubai, UAE
15	776	SRINIVAS K	2360	84, 13th Cross, 9th Main Lakkasandra Wilson Garden, Bangalore-560027.
16	219	RAJESH J	10620	612, Ground Floor, 4th C Main, Nr Chaya Hospital, OMBR Layout, Bengaluru 560043.
17	967	AZEEZ BEGUM	5428	#1/4 Cookson Road, Richards Town, Bengaluru, 560005.
18	2431	AMINA HUMAYAN	2360	C/O Aslesha, Casa Lavelle-6, A-3, Behind Rama Hotel Int. Bangalore 560001.
19	156	MD SHARIFF	10620	PB 1234, Benghazi, Libya
20	2129	MOHAMMED DR	18880	PO BOX 154, Sakla AL Jaouf , Saudi Arabia
21	1061	SHARADA NANAVATI	2960	202, Express Appartments,135 Richmond Road, Bengaluru-560025.
22	310	IRA SEQUIERA	2360	14/13 Langford Road, Bengaluru 560025.
23	2069	SYED AHMED	9558	PO BOX 20091, Jeddah 21435, KSA PH 6421973, Saudi Arabia
24	A17	MUSHTAQ AHMED	4720	435, 1st Floor, Chowdapa Layout, Shanthinagar, Bengaluru-560027.
25	160	SAMPATH KUMAR S	8024	24 NTI Layout, Vidyanarayanapura, Bangalore-97.
26	589	JAGANNATH E G	16048	A 66, 3/A Cross, VII Block, Jayanagar, Bangalore 560082.
27	318	RAJENDRA CHETTUR	5782	123/2, Varthur Road, Bangalore -560001.
28	308	VIDYA BHALLA	9794	SITT NO -9 , C Block, Kormangala, Bangalore-560001.
29	1038	SANDEEP SHETTY	9558	514, 8th main Sadashiv nagar, Bangalore-560080.
30	1277	NAGARAJA LATHA	10001	c/o Rajesh Tengli, Daffodil 303, Esteem Gardenia, 'e' Block, Bengaluru -560092.
31	1188	AMBROSE PAIS *	10001	UNCHA, Zelzniska 53, 1000, SKOPJE, MACEDONIA, US
32	93	CHARU SHARMA	9794	Flat 127, House #424/3, Soubhagya Appartment, 16th B Main, 4th B Block, Kormangala, Bengaluru -560034
33	251	SYEDA BANU	9794	C/o Rashid Mohammed Al Hajr, Fahaheel Makka, Qais Al Ghanim no 2, 1st Floor, Kuwait
34	1202	HARSHITA SINGH	9558	B 18, Bindra's Pebble Bey, Bagamugaliya, Bhopal 462043
35	2385	AMAN SINHA	10001	127/1 New Haven Wheelers Road, Cox Town Bangalore 560005.

Branch Manager, Legal Counsel for the Bank
ABHILASH R, Advocate,
Advaith Associates
107, 4th A Cross, Kaggadasapura Main Road, Bangalore 560093.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2, (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001
ಸಂ: ಕೆಐಎಡಿಬಿ/ಎಲ್‌ಎಕ್ಯೂ/1910/2022–23 ದಿನಾಂಕ: 24.02.2023

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಮಾವಿನಕುಂಟೆ ಮತ್ತು ಗೋರಘಟ್ಟ ಗ್ರಾಮಗಳಲ್ಲಿ ಒಟ್ಟು 492–10 ಎಕರೆ ವಿಸ್ತೀರ್ಣದ ಜಮೀನನ್ನು ಕೆಐಎಡಿ ಕಾಯ್ದೆ 1966 ಕಲಂ 28(4)ರಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 13 ಎಸ್‌ಪಿಕ್ಯೂ (ಇ) 2021 ದಿನಾಂಕ: 23.02.2023ರನ್ವಯ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಈ ಜಮೀನುಗಳಿಗೆ ಕೆ.ಐ.ಎ.ಡಿ.ಕಾಯ್ದೆ ಕಲಂ 29(2)ರನ್ವಯ ಪರಿಹಾರ ನಿಗಧಿಪಡಿಸಲು ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಕೆಐಎಡಿಬಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: **28.02.2023ರಂದು ಬೆಳಿಗ್ಗೆ 11.00 ಗಂಟೆಗೆ** ಈ ಕೆಳಕಂಡ ವಿಳಾಸದಲ್ಲಿ ಸಲಹಾ ಸಮಿತಿ ಸಭೆ ಕರೆಯಲಾಗಿದೆ.

"ಶ್ರೀ ಅಂಜನಾದ್ರಿ ಭವನ, (ರಾಜ ಮಹಲ್) ಚಿಕ್ಕಬೆಳವಂಗಲ, ದೊಡ್ಡಬಳ್ಳಾಪುರ–ದಾಬಸ್‌ಪೇಟೆ ಮುಖ್ಯರಸ್ತೆ, ರಾ.ಹೆ–207, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–561204"

ಆದುದರಿಂದ ದಿನಾಂಕ; 28.02.2023ರಂದು ನಡೆಯುವ ಸಲಹಾ ಸಮಿತಿ ಸಭೆಗೆ ಭೂಮಾಲೀಕರು ಮಾತ್ರ ಹಾಜರಾಗಲು ತಿಳಿಸಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2
ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ
ನೃಪತುಂಗ ರಸ್ತೆ, ಬೆಂಗಳೂರು.
ವಾಸಾಸಂಇ/ಉನಿ.ಸಿ.ಪಿ/4969/ಎಂಸಿಎ/2022–23

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಮರು ಆಹ್ವಾನ (ಐ.ಎಫ್.ಟಿ)
ಸಂಖ್ಯೆ: 52–1/2022–23 ದಿನಾಂಕ: 21.02.2023

(ರಸ್ತೆ ಸೇತುವೆ ಕಟ್ಟಡ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1ರಂತೆ ಏಕ–ಲಕೋಟೆ ಹಾಗೂ 3 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೊಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ: 22.02.2023 ರಿಂದ 02.03.2023ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **27.02.2023 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 02.03.2023 (ಸಂಜೆ 4.00 ಘಂಟೆಯವರೆಗೆ)** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **04.03.2023(ಸಂಜೆ 4.30 ಘಂಟೆಯವರೆಗೆ).** (4) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯುವುದು. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 539/ಎಂ.ಸಿ.ಎ/2022–23

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜೆಎಸ್‌ಡಬ್ಲ್ಯು ನೆರವು: ಮುಂದಿನ ಎರಡು ವರ್ಷ ನಿರ್ವಹಣೆಯ ಹೊಣೆ

ಮಾರಗೊಂಡನಹಳ್ಳಿ ಕೆರೆಗೆ ಪುನಶ್ಚೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಮಾರಗೊಂಡನಹಳ್ಳಿ ಕೆರೆಗೆ ಜೆಎಸ್‌ಡಬ್ಲ್ಯು ಸಮೂಹ ಕಾಯಕಲ್ಪ ನೀಡಿದೆ.

ಜೆಎಸ್‌ಡಬ್ಲ್ಯು ಸ್ಟೀಲ್ ವಿಜಯನಗರ ಮತ್ತು ಸೇಲಂ ವರ್ಕ್ಸ್‌ನ ಅಧ್ಯಕ್ಷ ಪಿ.ಕೆ. ಮುರುಗನ್ ಮತ್ತು ಜೆಎಸ್‌ಡಬ್ಲ್ಯು ಫೌಂಡೇಷನ್‌ನ ಸಿಇಒ ಅಶ್ವಿನಿ ಸಕ್ಸೇನಾ ಅವರು ಪುನರುಜ್ಜೀವನಗೊಳಿಸಿದ ಕೆರೆಯನ್ನು ಸೋಮವಾರ ಸಾರ್ವಜನಿಕರ ಬಳಕೆಗೆ ಹಸ್ತಾಂತರಿಸಿದರು.

ಈ ಯೋಜನೆಗೆ ಜೆಎಸ್‌ಡಬ್ಲ್ಯು ಸಮೂಹ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಅನ್ವಯ ನೆರವು ನೀಡಿತ್ತು. ಕೆರೆ ಪುನಶ್ಚೇತನ ಯೋಜನೆಯ ಅನುಷ್ಠಾನದ ಕಾರ್ಯವನ್ನು 2021ರಲ್ಲಿ ಮಲ್ಲಿಗವಾಡ ಫೌಂಡೇಷನ್‌ನ ಆನಂದ್ ಮಲ್ಲಿಗವಾಡ್ ಕೈಗೊಂಡಿದ್ದರು. ಜೆಎಸ್‌ಡಬ್ಲ್ಯು ಫೌಂಡೇಷನ್ ಮುಂದಿನ ಎರಡು ವರ್ಷಗಳವರೆಗೆ ಕೆರೆಯ ನಿರ್ವಹಣೆಯ ಜವಾಬ್ದಾರಿಯನ್ನು ಸಹ ವಹಿಸಿಕೊಂಡಿದೆ.

ಅಭಿವೃದ್ಧಿಪಡಿಸಿರುವ ಮಾರಗೊಂಡನಹಳ್ಳಿ ಕೆರೆ ನೋಟ.

ಮುಖ್ಯಾಂಶಗಳು

- 1 ಲಕ್ಷ ಘನ ಮೀಟರ್‌ಗಳಷ್ಟು ಹೆಚ್ಚುವರಿ ನೀರಿನ ಸಂಗ್ರಹ
- ಕೆರೆಯ ಸುತ್ತ 16 ಸಾವಿರ ಸಸಿಗಳನ್ನು ನೆಡಲಾಗಿದೆ

ಈ ಕೆರೆಯ ಪುನಶ್ಚೇತನ ಕಾರ್ಯ ಕೈಗೊಂಡಿರುವುದರಿಂದ 1 ಲಕ್ಷ ಘನ ಮೀಟರ್‌ಗಳಷ್ಟು ಹೆಚ್ಚುವರಿ ನೀರಿನ ಸಂಗ್ರಹ ಸಾಮರ್ಥ್ಯವನ್ನು ಇದು ಹೊಂದಲಿದೆ. ಕೆರೆಯ ಸುತ್ತ 16 ಸಾವಿರ ಸಸಿಗಳನ್ನು ನೆಡಲಾಗಿದೆ. ಸ್ಥಳೀಯ ನಿವಾಸಿಗಳು ಕೆರೆಯ ಸುತ್ತಲೂ 4,500ಕ್ಕೂ ಹೆಚ್ಚು ಸಸಿಗಳನ್ನು ನೆಡುವ ಮೂಲಕ ಪುನಶ್ಚೇತನ ಯೋಜನೆಗೆ ಸಹಕರಿಸಿದ್ದಾರೆ.

ಜೆಎಸ್‌ಡಬ್ಲ್ಯು ಫೌಂಡೇಷನ್‌ನ ಸಿಇಒ ಅಶ್ವಿನಿ ಸಕ್ಸೇನಾ, 'ಕೊಳಚೆ ಮತ್ತು ಕೆಸರು ತುಂಬಿದ್ದ ಮಾರಗೊಂಡನ ಹಳ್ಳಿ ಕೆರೆಯು ದುಃಸ್ಥಿತಿಯಲ್ಲಿತ್ತು. ಕೆರೆಯಲ್ಲಿ ತ್ಯಾಜ್ಯ ಎಸೆಯಲಾಗುತ್ತಿತ್ತು. ಇಂತಹ ಕೆರೆ ಪ್ರದೇಶವನ್ನು ಪುನರುಜ್ಜೀವನಗೊಳಿಸಲಾಗಿದೆ. ಕೆರೆಯಿಂದ ಹೂಳೆತ್ತಲಾದ ಮಣ್ಣನ್ನು ಗಡಿ ಗೋಡೆಗೆ ಬಳಸಲಾಗಿದೆ' ಎಂದು ಅವರು ವಿವರಿಸಿದರು.

ಮಲ್ಲಿಗವಾಡ ಫೌಂಡೇಶನ್‌ನ ಆನಂದ್ ಮಲ್ಲಿಗವಾಡ ಮಾತನಾಡಿ, 'ಕೆರೆ ಪುನಶ್ಚೇತನಕ್ಕೆ ಜೆಎಸ್‌ಡಬ್ಲ್ಯು ಫೌಂಡೇಷನ್ ಅಪಾರ ನೆರವು ನೀಡಿದೆ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾರ್ಚ್ 23ರಿಂದ ಬೆಂಗಳೂರು ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಧಾನಿಯ 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮಾರ್ಚ್ 23ರಿಂದ ಮೂರು ದಿನಗಳ ಕಾಲ 'ಬೆಂಗಳೂರು ಹಬ್ಬ' ಆಯೋಜಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ವಿಧಾನಸೌಧದ ಆವರಣದಲ್ಲಿ ಸ್ಥಾಪಿಸುತ್ತಿರುವ ಬಸವಣ್ಣ ಮತ್ತು ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳ ಉದ್ಘಾಟನೆ ಮಾರ್ಚ್ 23ರಂದು ನಡೆಯಲಿದೆ. 24 ಮತ್ತು 25ರಂದು ನಗರದ ವಿವಿಧೆಡೆ ಸಾಂಸ್ಕೃತಿ ಕಾರ್ಯಕ್ರಮ, ಜಾನಪದ ಕ್ರೀಡಾಕೂಟ, ಎತ್ತಿನ ಬಂಡಿ ಓಟ, ಬೈಸಿಕಲ್ ಮತ್ತು ದ್ವಿಚಕ್ರ ವಾಹನ ಜಾಥಾ, ವಿಂಟೇಜ್ ಕಾರುಗಳ ರ‍್ಯಾಲಿ, ಶ್ವಾನ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಸಿದ್ಧತೆ ಆರಂಭವಾಗಿದೆ.

ಕಂದಾಯ ಸಚಿವ ಆರ್. ಅಶೋಕ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಉನ್ನತಮಟ್ಟದ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಅಬಕಾರಿ ಸಚಿವ ಕೆ. ಗೋಪಾಲಯ್ಯ, ತೋಟಗಾರಿಕಾ ಸಚಿವ ಮುನಿರತ್ನ ಸಭೆಯಲ್ಲಿದ್ದರು.

ಸಭೆಯ ಬಳಿಕ ವಿವರ ನೀಡಿದ ಗೋಪಾಲಯ್ಯ, 'ಮಾರ್ಚ್ 24 ಮತ್ತು 25ರಂದು ಬೆಂಗಳೂರು ಹಬ್ಬದ ಕಾರ್ಯಕ್ರಮಗಳು ನಡೆಯಲಿವೆ. ಮಾರ್ಚ್ 24ರಂದು ವಿಧಾನಸೌಧದ ಮೆಟ್ಟಿಲುಗಳ ಮೇಲೆ ಪ್ರಧಾನ ಕಾರ್ಯಕ್ರಮ ನಡೆಯಲಿದೆ. ನಂತರ ವಿವಿಧೆಡೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು' ಎಂದರು.

ಕಬ್ಬನ್ ಪಾರ್ಕ್, ಲಾಲ್‌ಬಾಗ್ ಸೇರಿದಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ನಗರದ ಎಲ್ಲ ಉದ್ಯಾನಗಳು, ಕೆರೆಗಳು, ಐತಿಹಾಸಿಕ ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು. ಆಹಾರ ಮೇಳ, ಚಿತ್ರಕಲಾ ಸ್ಪರ್ಧೆ, ಪುಸ್ತಕ ಮೇಳ ಕೂಡ ನಡೆಯಲಿವೆ ಎಂದು ತಿಳಿಸಿದರು.

ಪ್ರಧಾನಿಗೆ ಆಹ್ವಾನ?: ಬಸವಣ್ಣ ಮತ್ತು ಕೆಂಪೇಗೌಡ ಪ್ರತಿಮೆ ಅನಾವರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅಥವಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಆಹ್ವಾನ ನೀಡುವ ಕುರಿತು ಚರ್ಚೆ ನಡೆದಿದೆ. ಶೀಘ್ರದಲ್ಲಿ ಈ ಕುರಿತು ನಿರ್ಧಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

'ವಿಪ್ರರಿಗೂ ಶೇ 10 ಮೀಸಲಾತಿ ಕಲ್ಪಿಸಿ'

ಕಲಬುರಗಿ: 'ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ನೀಡುವ ಕೇಂದ್ರದ ಶೇ 10ರಷ್ಟು ಮೀಸಲಾತಿ ಸೌಲಭ್ಯವನ್ನು ಕರ್ನಾಟಕದಲ್ಲೂ ವಿಪ್ರ ಸಮಾಜಕ್ಕೆ ಕಲ್ಪಿಸಬೇಕು' ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕ ಜಗದೀಶ ಹುನಗುಂದ ಸೋಮವಾರ ಒತ್ತಾಯಿಸಿದರು.

ಅಖಿಲ ಕರ್ನಾಟಕ ವಿಪ್ರ ಅಡುಗೆದಾರರ ರಾಜ್ಯಮಟ್ಟದ ಪ್ರಥಮ ಸಮಾವೇಶದಲ್ಲಿ ಮಾತನಾಡಿದ ಅವರು, 'ಬ್ರಾಹ್ಮಣರಿಗೆ ಜಾತಿ ಪ್ರಮಾಣಪತ್ರ ಕೊಡಲಾಗುತ್ತಿದೆ. ಶೇ10ರಷ್ಟು ಮೀಸಲಾತಿ ಸಿಕ್ಕಲ್ಲಿ ಉದ್ಯೋಗ, ಶಿಕ್ಷಣದಲ್ಲಿ ಬಡ ಬ್ರಾಹ್ಮಣರು, ಅಡುಗೆಯವರು ಮತ್ತು ಅರ್ಚಕರಿಗೆ ಅವಕಾಶ, ಸೌಲಭ್ಯ ದೊರೆಯುತ್ತವೆ'. 'ಮೀಸಲಾತಿ ಕೋರಿ ರಾಜ್ಯಪಾಲ, ಮುಖ್ಯಮಂತ್ರಿ ಮತ್ತು ಸಚಿವರಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಚುನಾವಣೆ ನೀತಿ ಸಂಹಿತೆ ಜಾರಿ ಆಗುವುದರೊಳಗೆ ಬೇಡಿಕೆ ಈಡೇರುವ ನಿರೀಕ್ಷೆ ಇದೆ' ಎಂದರು.

'ಅಡುಗೆ ಸಿದ್ಧಪಡಿಸುವಾಗ ಕೈ–ಕಾಲು ಸುಡುವುದು ಸೇರಿ ಇನ್ನಿತರ ಅವಘಡ ಸಂಭವಿಸುತ್ತವೆ. ಹೀಗಾಗಿ, ಅಪಘಾತ ವಿಮೆ ಸೌಲಭ್ಯ ನೀಡಬೇಕು' ಎಂದು ಅಖಿಲ ಕರ್ನಾಟಕ ವಿಪ್ರ ಅಡುಗೆದಾರರು, ಸಹಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗುರುರಾಜ ಕುಲಕರ್ಣಿ ಚಳ್ಳಾರಿ ಆಗ್ರಹಿಸಿದರು.

ಕಲಬುರಗಿಯಲ್ಲಿ ಸೋಮವಾರ ಆಯೋಜಿಸಿದ್ದ ಅಖಿಲ ಕರ್ನಾಟಕ ವಿಪ್ರ ಅಡುಗೆದಾರರ ರಾಜ್ಯಮಟ್ಟದ ಪ್ರಥಮ ಸಮಾವೇಶದಲ್ಲಿ ಮಹಾನಗರ ಪಾಲಿಕೆ ಸದಸ್ಯೆ ಶೋಭಾ ದೇಸಾಯಿ ದೀಪ ಬೆಳಗಿದರು. ಉದ್ಯಮಿ ಕೃಷ್ಣಾಜಿ ಕುಲಕರ್ಣಿ, ಗುರುರಾಜ ಕುಲಕರ್ಣಿ ಚಳ್ಳಾರಿ, ಹಾಸ್ಯ ಕಲಾವಿದ ಪ್ರಾಣೇಶ ಗಂಗಾವತಿ, ಜಗದೀಶ ಹುನಗುಂದ, ಕಾಂಗ್ರೆಸ್ ಮುಖಂಡ ಅಲ್ಲಮಪ್ರಭು ಪಾಟೀಲ, ಸಂಘದ ಜಿಲ್ಲಾ ಅಧ್ಯಕ್ಷ ಅನೀಲ ಅಷ್ಟಗಿ ಇದ್ದಾರೆ

ಶಿಕ್ಷಕರ ನೇಮಕಾತಿ: ಪರಿಷ್ಕೃತ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ಹೊಸ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಶಿಕ್ಷಣ ಇಲಾಖೆ ಕೇಂದ್ರೀಕೃತ ದಾಖಲಾತಿ ಘಟಕ ಸೋಮವಾರ ಬಿಡುಗಡೆ ಮಾಡಿದ್ದು, 13,351 ಅಭ್ಯರ್ಥಿಗಳು ಸ್ಥಾನಪಡೆದಿದ್ದಾರೆ. ಆಕ್ಷೇಪಣೆ ಸಲ್ಲಿಸಲು ಮಾರ್ಚ್ 4ರವರೆಗೆ ಅವಕಾಶ ನೀಡಲಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ (6 ರಿಂದ 8ನೇ ತರಗತಿ) ಖಾಲಿ ಇರುವ 15 ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ ಹುದ್ದೆಗೆ 2022ರ ಮಾರ್ಚ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಸೂಚನೆ ಹೊರಡಿಸಿತ್ತು. 68,849 ಅಭ್ಯರ್ಥಿಗಳು ಸಿಇಟಿ ಬರೆದಿದ್ದರು. ಕಳೆದ ನವೆಂಬರ್‌ನಲ್ಲೇ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು.

ತಂದೆಯ ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ಕಾರಣಕ್ಕಾಗಿ ವಿವಾಹಿತ ಮಹಿಳೆಯರನ್ನು ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿತ್ತು. ಈ ಕುರಿತು 'ಪ್ರಜಾವಾಣಿ' ನ.22ರ (2022) ಸಂಚಿಕೆಯಲ್ಲಿ 'ಶಿಕ್ಷಕಿಯಾಗುವ ಕನಸು ಕಿತ್ತುಕೊಂಡ ಮದುವೆ' ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ಇಲಾಖೆ ಪ್ರಕಟಿಸಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪ ವ್ಯಕ್ತಪಡಿಸಿ, ಅಕ್ಷತಾ ಚೌಗಲಾ ಸೇರಿದಂತೆ 90ಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. 'ವಿವಾಹಿತ ಮಹಿಳೆಯರು ಸಲ್ಲಿಸಿರುವ ತಂದೆಯ ಜಾತಿ ಮತ್ತು ಆದಾಯ ಪ್ರಮಾಣಪತ್ರ ಪರಿಗಣಿಸಿ ನೇಮಕಾತಿ ಪ್ರಕ್ರಿಯೆ ಮುಂದುವರಿಸುವಂತೆ' ತೀರ್ಪು ನೀಡಿತ್ತು. ತೀರ್ಪಿಗೆ ಅನುಗುಣವಾಗಿ ಹೊಸ ಪಟ್ಟಿ ಬಿಡುಗಡೆ ಮಾಡಲಾಗಿದೆ.

ಹೊಸ ತಾತ್ಕಾಲಿಕ ಪಟ್ಟಿಯಲ್ಲಿ 8,377 ಮಹಿಳೆಯರು, ಕಲ್ಯಾಣ ಕರ್ನಾಟಕದ 4,194, ಜೀವ ವಿಜ್ಞಾನ ವಿಷಯದ ಅಂಗವಿಕಲರ ಬ್ಯಾಕ್‌ಲಾಗ್‌ನ 122 ಹಾಗೂ ಮೂವರು ತೃತೀಯ ಲಿಂಗಿಗಳಲ್ಲಿ ಆಯ್ಕೆಪಟ್ಟಿಯಲ್ಲಿ ಸ್ಥಾಪ ಪಡೆದಿದ್ದಾರೆ.

'ಗಡಿ ಜಿಲ್ಲೆಗಳಿಗೆ ತಲಾ 1ಲಕ್ಷ'

ಬೆಂಗಳೂರು: ನೆರೆ ರಾಜ್ಯಗಳಿಗೆ ಹೊಂದಿಕೊಂಡಿರುವ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಕನ್ನಡಪರ ಕಾರ್ಯಕ್ರಮಗಳನ್ನು ಆಯೋಜಿಸಲು ನೆರವಾಗುವ ಉದ್ದೇಶದಿಂದ, ಅಲ್ಲಿನ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳಿಗೆ ತಲಾ ₹1 ಲಕ್ಷ ನೆರವು ನೀಡಲು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ. ನೆರೆಯ 6 ರಾಜ್ಯಗಳಿಗೆ (ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗೋವಾ) ರಾಜ್ಯದ 19 ಜಿಲ್ಲೆಗಳು ಹೊಂದಿಕೊಂಡಿವೆ. ಈ ಜಿಲ್ಲೆಗಳಲ್ಲಿ ಕನ್ನಡ ನಾಡು-ನುಡಿ, ಸಂಸ್ಕೃತಿಗೆ ಸಂಬಂಧಿಸಿದಂತೆ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ, ಕನ್ನಡ ಉಳಿಸಿ, ಬೆಳೆಸಲು ಪ್ರಾಧಿಕಾರ ಮುಂದಾಗಿದೆ.

'ಗಡಿ ಜಿಲ್ಲೆಗಳ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಇದೇ 28ರಂದು ಬೆಳಿಗ್ಗೆ 11 ಗಂಟೆಗೆ ಕೆಂಪೇಗೌಡ ರಸ್ತೆಯ ಎಫ್‌ಕೆಸಿಸಿಐ ಕಟ್ಟಡದ ಮೂರನೇ ಮಹಡಿಯಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಅನುದಾನ ವಿತರಿಸಲಾಗುವುದು' ಎಂದು ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಕ್ತದಾನ ಶಿಬಿರ: ಅತಿಥಿಗಳು: ಡಾ.ಎಸ್.ಎಂ.ಜಯಕರ್, ಮಹೇಶ್‌ಬಾಬು, ಶ್ರೀನಾಥ್ ಗುಪ್ತ. ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ ಹಾಗೂ ಭಾರತೀಯ ರೆಡ್‌ಕ್ರಾಸ್ ಸೊಸೈಟಿ. ಸ್ಥಳ: ವಿವಿಯ ಎನ್‌ಎಸ್‌ಎಸ್ ಭವನ. ಬೆಳಿಗ್ಗೆ 8.30.

ರಾಷ್ಟ್ರೀಯ ವಿಜ್ಞಾನ ದಿನ–2023 ಮೆಗಾ ಎಕ್ಸ್‌ಪೊ: ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ವಿಜ್ಞಾನ ವಸ್ತು ಪ್ರದರ್ಶನ: ಆಯೋಜನೆ: ಶಿಕ್ಷಣಾಧಿಕಾರಿ ಮತ್ತು ಕ್ಷೇತ್ರ ಸಮನ್ವಯಾಧಿಕಾರಿ ಕಚೇರಿ, ಬೆಂಗಳೂರು ದಕ್ಷಿಣ ವಲಯ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಸಕೆರೆಹಳ್ಳಿ, ಬೆಳಿಗ್ಗೆ 10.30

ಡಾ.ಎಚ್.ಎಸ್. ಶ್ರೀಮತಿ ಅವರಿಗೆ ಪ್ರೊ.ಎಲ್.ಎಸ್.ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಮತ್ತು ಡಾ.ಎನ್.ಜಗದೀಶ್ ಕೊಪ್ಪ ಅವರಿಗೆ ವಿ.ನಾಗರಾಜ್‌ರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪ್ರದಾನ: ಡಾ. ವೂಡೆ ಪಿ. ಕೃಷ್ಣ, ಅತಿಥಿಗಳು: ಆರ್.ಪೂರ್ಣಿಮಾ, ಡಾ.ಬೈರಮಂಗಲ ರಾಮೇಗೌಡ, ಆಯೋಜನೆ: ಬಿಎಂಶ್ರೀ ಪ್ರತಿಷ್ಠಾನ, ಸ್ಥಳ: ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ನರಸಿಂಹರಾಜ ಕಾಲೊನಿ, ಸಂಜೆ 5

ರಾಷ್ಟ್ರೀಯ ವಿಜ್ಞಾನ ದಿನಾಚರಣೆ: ಅತಿಥಿ: ಡಾ.ಕೆ. ಕಸ್ತೂರಿ ರಂಗನ್. ಆಯೋಜನೆ: ಸದಾಶಿವನಗರದ ರಾಮನ್ ಸಂಶೋಧನಾ ಸಂಸ್ಥೆ, ಸ್ಥಳ: ಮುಖ್ಯ ಕಟ್ಟಡದ ಸಭಾಂಗಣ. ಬೆಳಿಗ್ಗೆ 10.30

ಕಬ್ಬಾಳಮ್ಮ ಬ್ರಹ್ಮರಥಾರೋಹಣ, ಜಾತ್ರಾ ಮಹೋತ್ಸವ: ಆಯೋಜನೆ: ತಪೋವನಕ್ಷೇತ್ರ ದೇವಸ್ಥಾನಗಳ ಅಭಿವೃದ್ಧಿ ಸೇವಾ ಸಮಿತಿ, ಸ್ಥಳ: ಅರೆಹಳ್ಳಿ ಎಜಿಎಸ್ ಬಡಾವಣೆ, ಉತ್ತರಹಳ್ಳಿ, ಬೆಳಿಗ್ಗೆ 11.25

ತಂಬಾಕು ಮುಕ್ತ ತಲೆಮಾರು – ಮಾಧ್ಯಮ ಕಾರ್ಯಾಗಾರ: ಅತಿಥಿಗಳು: ಟಿ.ಕೆ.ಅನಿಲ್‌ಕುಮಾರ್, ಡಿ.ರಂದೀಪ್, ಡಾ.ವೈ.ನವೀನ್‌ಭಟ್, ಡಾ.ಎಂ. ಇಂದುಮತಿ, ನವೀನ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ ಹಾಗೂ ರಾಜ್ಯ ತಂಬಾಕು ನಿಯಂತ್ರಣ ಘಟಕ, ಮಧ್ಯಾಹ್ನ 2.30

`ಸಂಸ್ಕೃತಿ ಸಂಭ್ರಮದಲ್ಲಿ 'ಅಂಗುಲೀಮಾಲ' ನಾಟಕ ಪ್ರದರ್ಶನ: ಉದ್ಘಾಟನೆ: ಕಿರಣಮ್ಮ, ಅಧ್ಯಕ್ಷತೆ: ಮಾವಿನಕೆರೆ ರಂಗನಾಥನ್, ಅತಿಥಿಗಳು: ಅಲಂಕಾರ್ ಚಂದ್ರು, ಮೋಹನ್, ಆರ್.ರಾಮಮೂರ್ತಿ, ಪ್ರಿಯಾ, ಶಿವಕುಮಾರ್, ವಿ.ಪುರುಷೋತ್ತಮ, ಆಯೋಜನೆ: ರಂಗ ಕಲಾವೇದಿಕೆ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ರಾಗಿಗುಡ್ಡದ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ 22ನೇ ವರ್ಷದ ಪ್ರವಚನ ವಾಹಿನಿ: ಶ್ರೀರಾಮ ಗುಣ ವರ್ಣನಂ ಉಪನ್ಯಾಸ: ವಿದ್ವಾನ್ ದಿಲೀಪ್ ಬೆಳ್ಳಾವೆ, ಸ್ಥಳ: ಸಾಂಸ್ಕೃತಿಕ ಮಂದಿರ, ಸಂಜೆ 6.30

'ಕಾರ್ಮಿಕರ ಅಭಿವೃದ್ಧಿಗೆ ಒತ್ತು'

ಬೆಂಗಳೂರು: 'ಲಂಚ ಮುಕ್ತ ಸರ್ಕಾರದ ರಚನೆಯೇ ಪರಿಸರ ಬಂಧು ಪಕ್ಷದ ಉದ್ದೇಶ' ಎಂದು ಪಕ್ಷದ ಅಧ್ಯಕ್ಷ ವಿ.ಸಿ.ಸಚ್ಚಿದಾನಂದಮೂರ್ತಿ ತಿಳಿಸಿದರು.

'ಸಮಾಜದಲ್ಲಿ ಶಾಂತಿ, ಸಾಮರಸ್ಯ, ಸಮಾನತೆ, ಸಾಮಾಜಿಕ ಅಭಿವೃದ್ಧಿ ಹಾಗೂ ಶೋಷಣೆ ಮುಕ್ತ ಸಮಾಜಕ್ಕೆ ಈ ಬಾರಿಯ ಚುನಾವಣೆಯಲ್ಲಿ ಹೊಸ ಪಕ್ಷವನ್ನು ಜನರು ಬೆಂಬಲಿಸಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ಸೋಮವಾರ ಕೋರಿದರು.

'ರೈತರ, ರೈತರ ಮಕ್ಕಳ, ಕೂಲಿ ಕಾರ್ಮಿಕರ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ವ್ಯವಸಾಯಕ್ಕೆ ನೀರು ಮುಖ್ಯ. ಅಣೆಕಟ್ಟು ಹಾಗೂ ಕೆರೆಗಳಲ್ಲಿ ಹೂಳೆತ್ತಿಸಿ ರಾಜಕಾಲುವೆ ಸುಸ್ಥಿತಿಯಲ್ಲಿ ಇಡಲಾಗುವುದು' ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಮಧುಸೂದನ್ ಹಾಗೂ ಜಯರಾಮ್ ಹಾಜರಿದ್ದರು.

ಕರ್ನಾಟಕ ಅರಣ್ಯ ಇಲಾಖೆ

ನೀರಿಗಾಗಿ ನಾಳೆಗಾಗಿ ನಮ್ಮ ಅಸ್ತಿತ್ವಕ್ಕಾಗಿ **ಅರಣ್ಯ**

2022-23ನೇ ಸಾಲಿನ ಸಾಧನೆಗಳು

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯ ಮಂತ್ರಿಗಳು

ಸುಸ್ಥಿರ ಭವಿಷ್ಯಕ್ಕಾಗಿ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ

2744 ಕಾರ್ಯಕ್ರಮಗಳು
2.5 ಕೋಟಿ ಬೀಜ ಬಿತ್ತನೆ
ಬಿತ್ತೋತ್ಸವ 2022 5-12 ಜೂನ್
1.5 ಲಕ್ಷ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು

563 ಕಾರ್ಯಕ್ರಮಗಳು
1.8 ಲಕ್ಷ ಸಸಿ ನೆಡುವಿಕೆ
ವನಮಹೋತ್ಸವ 2022
40000 ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು

68ನೇ ವನ್ಯಜೀವಿ ಸಪ್ತಾಹ 2022
2ನೇ ಅಕ್ಟೋಬರ್ - 8ನೇ ಅಕ್ಟೋಬರ್

- ರಾಜ್ಯದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಭಿವೃದ್ಧಿ ಚಟುವಟಿಕೆಗಳಿಂದ ಆಗಿರುವ ಹಾನಿಯನ್ನು ಸರಿದೂಗಿಸಲು ರೂ.100 ಕೋಟಿಗಳ **'ಹಸಿರು ಆಯವ್ಯಯವನ್ನು'** ತಯಾರಿಸಿ, ಇದರಡಿ ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.
- 46,434 ಹೆ. ಬ್ಲಾಕ್ ಮತ್ತು 1032 ಕಿ.ಮೀ. **ರಸ್ತೆಬದಿ ನೆಡುತೋಪುಗಳನ್ನು** 2.85 ಕೋಟಿ ಸಸಿಗಳನ್ನು ನೆಡುವ ಮೂಲಕ ಬೆಳೆಸಲಾಗಿದೆ.
- **ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ** 15,121 ರೈತರಿಗೆ ಕೃಷಿ ಅರಣ್ಯ ಉತ್ತೇಜನಕ್ಕಾಗಿ ರೂ. 10 ಕೋಟಿ ಪ್ರೋತ್ಸಾಹ ಧನ ವಿತರಿಸಲಾಗಿದೆ.
- ಎಸ್.ಸಿ.ಪಿ. ಅಡಿಯಲ್ಲಿ 3339 ಫಲಾನುಭವಿಗಳಿಗೆ ಮತ್ತು ಟಿ.ಎಸ್.ಪಿ ಅಡಿಯಲ್ಲಿ 3139 ಫಲಾನುಭವಿಗಳಿಗೆ **ಸಸಿ, ಬಿದರು ಮತ್ತು LPG ಸಿಲಿಂಡರ್ ರೀಫಿಲ್** ಇತ್ಯಾದಿ ಕಾರ್ಯಕ್ರಮಗಳ ಅನುಗುಣವಾಗಿ ಒದಗಿಸಲಾಗಿದೆ.
- ಮಾನವ - ವನ್ಯಪ್ರಾಣಿಗಳ ಸಂಘರ್ಷ ತಡೆಗಟ್ಟಲು **5 ಆನೆ ಕಾರ್ಯಪಡೆಗಳು** ಮತ್ತು **ಒಂದು ಚಿರತೆ ಕಾರ್ಯಪಡೆ**ಯನ್ನು ಸ್ಥಾಪಿಸಲಾಗಿದೆ.
- ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಅಂಗವಿಕಲತೆ, ಆಸ್ತಿನಷ್ಟ ಮತ್ತು ಬೆಳೆ ಹಾನಿ ಪ್ರಕರಣಗಳಲ್ಲಿ ಈಗಾಗಲೆ ನೀಡಲಾಗುತ್ತಿದ್ದ ಪರಿಹಾರಧನವನ್ನು ಪರಿಷ್ಕರಿಸಿ **ದ್ವಿಗುಣ ಗೊಳಿಸಲಾಗಿದೆ**.
- ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ **ಬಿತ್ತೋತ್ಸವ, ವನಮಹೋತ್ಸವ, ಚಿಣ್ಣರವನದರ್ಶನ** ಶಿಬಿರಗಳು ಮತ್ತು **ವನ್ಯಜೀವಿ ಸಪ್ತಾಹ** ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.
- **ನರೇಗಾ** ಯೋಜನೆಯಲ್ಲಿ **61,399 ಲಕ್ಷ** ಮಾನವ ದಿನಗಳು ಉತ್ಪಾದಿಸಲಾಗಿದೆ.
- ಶ್ರೀಗಂಧ ಕೃಷಿಯನ್ನು ಪ್ರೇರೇಪಿಸಲು ಹೊಸ **ಶ್ರೀಗಂಧ ನೀತಿ**ಯನ್ನು ತರಲಾಗಿದೆ.
- 9677.47 ಹೆಕ್ಟೇರ್ ಪ್ರದೇಶವನ್ನು **ಮೀಸಲು ಅರಣ್ಯವನ್ನಾಗಿ** ಮತ್ತು 41.62 ಹೆಕ್ಟೇರ್ ಪ್ರದೇಶವನ್ನು **ರಕ್ಷಿತ ಅರಣ್ಯವನ್ನಾಗಿ** ಘೋಷಿಸಿದೆ.
- **3 ವನ್ಯಜೀವಿಧಾಮಗಳು**- ಉತ್ತರೆಗುಡ್ಡ, ಅರಸೀಕೆರೆ ಕರಡಿ ಧಾಮ, ಬಂಕಾಪುರ ತೋಳ ಧಾಮ ಮತ್ತು **3 ಮೀಸಲು ಸಂರಕ್ಷಿತ** ಪ್ರದೇಶ ಬೋನಲ್ ಕೆರೆ ಪಕ್ಷಿ ಧಾಮ, ಚಿಕ್ಕಸಂಗಮ ಪಕ್ಷಿ ಧಾಮ, ಮುಂಡಿಗೆ ಕೆರೆ ಪಕ್ಷಿ ಧಾಮಗಳನ್ನು ಅಧಿಸೂಚಿಸಿದೆ.
- **E**-ಪರಿಹಾರ ಮತ್ತು **E**-ಸಸ್ಯಕ್ಷೇತ್ರ ಗಳಂತಹ ತಂತ್ರಜ್ಞಾನದ ಮತ್ತು ಅಪ್ಲಿಕೇಶನ್‌ಗಳ ಮುಖಾಂತರ ಇಲಾಖೆಯ ಅನೇಕ ಪ್ರಕ್ರಿಯೆಗಳನ್ನು ಸರಳಗೊಳಿಸಿಲಾಗಿದೆ.
- ಮೊದಲ **G20 ಪರಿಸರ ಮತ್ತು ಹವಾಮಾನ ಸುಸ್ಥಿರತೆ ಕಾರ್ಯ ಗುಂಪಿನ** (ECWG) ಸಭೆಯನ್ನು ಬೆಂಗಳೂರಿನಲ್ಲಿ ಫೆಬ್ರವರಿ 9 ರಿಂದ ಫೆಬ್ರವರಿ 11 ರವರೆಗೆ ಯಶಸ್ವಿಯಾಗಿ ನಡೆಸಲಾಗಿದೆ.

ಜಾವೆದ್ ಅಖ್ತರ್, ಭಾ.ಆ.ಸೇ
ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ

ರಾಜ್ ಕಿಶೋರ್ ಸಿಂಗ್, ಭಾ.ಅ.ಸೇ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು)

ಅರಣ್ಯ ಸಹಾಯವಾಣಿ: 1926
/aranya.kfd /aranya.kfd @aranya_kfd aranya_kfd

ದೇಶದ ಅತಿ ದೊಡ್ಡ ಸುರಂಗ ಮಾರ್ಗ: ಶೇ 72ರಷ್ಟು ಕಾಮಗಾರಿ ಪೂರ್ಣ • ಎಲಿವೇಟೆಡ್ ಮಾರ್ಗ ನಿರ್ಮಾಣಕ್ಕಿಂತ ನಾಲ್ಕು ಪಟ್ಟು ಹೆಚ್ಚು ವೆಚ್ಚ

ಟಿಬಿಎಂ ಚಮತ್ಕಾರ: ಅಂತಿಮ ಹಂತಕ್ಕೆ ಮೆಟ್ರೊ ಸುರಂಗ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಲ್ಲಿರಲಿ, ಮಣ್ಣಿರಲಿ, ದೊಡ್ಡ ಬಂಡೆಗಳೇ ಎದುರಾಗಲಿ... ಸೀಳಿ ಮುನ್ನುಗ್ಗುವ ಯಂತ್ರಗಳು, ದೇಶದಲ್ಲೇ ಅತಿ ದೊಡ್ಡ ಮೆಟ್ರೊ ರೈಲು ಸುರಂಗ ಮಾರ್ಗವನ್ನು ಕೊರೆಯುತ್ತಿವೆ. ಗೊಟ್ಟಿಗೆರೆ–ನಾಗವಾರ ಮಾರ್ಗದಲ್ಲಿ 13.90 ಕಿಲೋ ಮೀಟರ್ ಸುರಂಗವನ್ನು ಕೊರೆಯುತ್ತಿರುವ ಟಿಬಿಎಂಗಳು (ಟನಲ್ ಬೋರಿಂಗ್ ಮಷಿನ್) ತಮ್ಮ ಕೆಲಸವನ್ನು ಬಹುತೇಕ ಅಂತಿಮ ಹಂತಕ್ಕೆ ತಂದಿವೆ.

ನಗರದಲ್ಲಿ ಎಲ್ಲೆಂದರಲ್ಲಿ ತಲೆ ಎತ್ತುತ್ತಿರುವ ಮೇಲ್ಸೇತುವೆಗಳು, ಎತ್ತರಿಸಿದ ಮಾರ್ಗಗಳು ನಗರದ ಸೌಂದರ್ಯವನ್ನು ಹಾನಿ ಮಾಡುತ್ತಿರುವುದರ ನಡುವೆಯೇ, ‘ನಮ್ಮ ಮೆಟ್ರೊ’ ಯೋಜನೆಯ ಎರಡನೇ ಹಂತದಲ್ಲಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ದೇಶದಲ್ಲೇ ಅತಿ ಉದ್ದವಾದ ಸುರಂಗ ಮಾರ್ಗ ನಿರ್ಮಿಸುತ್ತಿದೆ.

ಮೆಟ್ರೊ ಯೋಜನೆಯನ್ನು ಅನುಷ್ಠಾನಗೊಳಿಸು-ತ್ತಿರುವ ದೇಶದ ಹಲವು ಮಹಾನಗರಗಳು ದುಬಾರಿ ವೆಚ್ಚದ ಕಾರಣಕ್ಕೆ ಸುರಂಗ ಮಾರ್ಗಕ್ಕೆ ಅಷ್ಟೇನೂ ಆಸಕ್ತಿ ವಹಿಸುತ್ತಿಲ್ಲ. ಆದರೆ, ಬಿಎಂಆರ್‌ಸಿಎಲ್ ಇಂತಹ ಸಾಹಸಕ್ಕೆ ಕೈ ಹಾಕಿ ಈಗ ಯಶಸ್ಸಿನ ಹಾದಿಯಲ್ಲಿದೆ.

ಬೆಂಗಳೂರು ನಗರ ಎಂದರೆ ಸುರಂಗ ನಿರ್ಮಾಣಕ್ಕೆ ಅತ್ಯಂತ ಕಠಿಣವಾದ ಭೂಪ್ರದೇಶ. ಬೇರೆಲ್ಲಾ ರಾಜ್ಯ ಮತ್ತು ದೇಶಗಳ ಸುರಂಗ ಮಾರ್ಗಗಳಿಗೆ ಹೋಲಿಸಿದರೆ ಜಟಿಲವಾದ ಹಾದಿಯನ್ನು ಸುರಂಗ ಕೊರೆಯುವ ಯಂತ್ರಗಳು(ಟಿಬಿಎಂ) ಎದುರಿಸಿವೆ.

ಎತ್ತರಿಸಿದ (ಎಲಿವೇಟೆಡ್) ನಿಲ್ದಾಣ ಅಥವಾ ಮಾರ್ಗಗಳನ್ನು ನಿರ್ಮಿಸುವುದಕ್ಕೆ ತಗಲುವ ವೆಚ್ಚಕ್ಕೆ ಹೋಲಿಸಿದರೆ ಸುರಂಗ ಮಾರ್ಗ ನಿರ್ಮಾಣಕ್ಕೆ ನಾಲ್ಕು ಪಟ್ಟು ಹೆಚ್ಚು ಮೊತ್ತ ಬೇಕಾಗುತ್ತದೆ. ಆದರೆ, ದೀರ್ಘ ಕಾಲದ ಅನುಕೂಲಗಳನ್ನು ಪರಿಗಣಿಸಿದರೆ ಎತ್ತರಿಸಿದ ಮಾರ್ಗಕ್ಕಿಂತ ಸುರಂಗ ಮಾರ್ಗಗಳಿಂದಲೇ ಜನರಿಗೆ ಲಾಭ ಹೆಚ್ಚು.

ವಿಶಾಲ ರಸ್ತೆಯ ಒಂದು ಪಥದಲ್ಲಿ ಎತ್ತರಿಸಿದ ಮಾರ್ಗ ನಿರ್ಮಾಣವಾಗುತ್ತಿದ್ದರೂ, ಅಕ್ಕ-ಪಕ್ಕದ ಪಥಗಳಲ್ಲಿ ಸಂಚಾರ ನಿರ್ಬಂಧಿಸಲಾಗುತ್ತದೆ. ಬ್ಯಾ-ರಿಕೇಡ್‌ಗಳನ್ನು ಹಾಕಲಾಗುತ್ತದೆ. ಜನನಿಬಿಡ ಸ್ಥಳಗಳಲ್ಲಿ ನಡೆಯುವ ಈ ಕಾಮಗಾರಿ ನಾಲ್ಕೈದು ವರ್ಷಗಳ ಬಳಿಕವೂ ಪೂರ್ಣಗೊಳ್ಳುವುದಿಲ್ಲ. ಇದಕ್ಕೆ ಹೋಲಿಸಿದರೆ ಸುರಂಗ ಮಾರ್ಗದ ನಿರ್ಮಾಣ ಕಾರ್ಯ (ನೆಲದಡಿಯ ನಿಲ್ದಾಣಗಳನ್ನು ಹೊರತಾಗಿ) ಸದ್ದಿಲ್ಲದೇ ನಡೆಯುತ್ತದೆ.

‘ನಗರದ ಸೌಂದರ್ಯವನ್ನು, ಮೂಲಸ್ವರೂಪವನ್ನು ಅಂತೆಯೇ ಉಳಿಸಿಕೊಂಡು ರಾಜಧಾನಿಯ ಕ್ಷಿಪ್ರ ಸಾರಿಗೆ ವ್ಯವಸ್ಥೆಗೆ ಈ ಮೆಟ್ರೊ ಸುರಂಗ ಹೊಸ ದಿಕ್ಕು ತೋರಲಿದೆ’ ಎನ್ನುತ್ತಾರೆ ಬಿಎಂಆರ್‌ಸಿಎಲ್ ಅಧಿಕಾರಿಗಳು.

ಗೊಟ್ಟಿಗೆರೆ–ನಾಗವಾರದಲ್ಲಿ ಡೇರಿ ವೃತ್ತದಿಂದ ನಾಗವಾರ ತನಕ ಮೆಟ್ರೊ ಸುರಂಗ ಮಾರ್ಗ ಬಹುತೇಕ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ(ಸಿಬಿಡಿ) ಸಾಗುತ್ತದೆ. ನೆಲದಡಿಯಲ್ಲೇ ಕಾಮಗಾರಿ ನಡೆಯುತ್ತಿರುವುದರಿಂದ ಜನ ಜೀವನದ ಮೇಲೆ ಅಷ್ಟೇನೂ ಪರಿಣಾಮ ಬೀರಿಲ್ಲ.

ಸುರಂಗದ ಕಾಮಗಾರಿ ಶೇ 72ರಷ್ಟು ಪೂರ್ಣಗೊಂಡಿದ್ದು, ನಿಲ್ದಾಣಗಳ ಕಾಮಗಾರಿ ಪ್ರಗ-ತಿಯಲ್ಲಿದೆ. ಗೊಟ್ಟಿಗೆರೆಯಿಂದ(ಕಾಳೇನ ಅಗ್ರಹಾರ) ನಾಗವಾರ ತನಕದ ಒಟ್ಟಾರೆ 21.30 ಕಿಲೋ ಮೀಟರ್ ಉದ್ದದ ಮೆಟ್ರೊ ಮಾರ್ಗ 2025ರ ಅಂತ್ಯಕ್ಕೆ ಪ್ರಯಾಣಿಕರಿಗೆ ಸಮರ್ಪಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.



ಟಿಬಿಎಂ

ಶೇ 72ರಷ್ಟು ಕಾಮಗಾರಿ ಪೂರ್ಣ

ನಾಲ್ಕು ಪ್ಯಾಕೇಜ್‌ಗಳಲ್ಲಿ ಸುರಂಗ ಕಾಮಗಾರಿ ನಡೆಯುತ್ತಿದ್ದು, ಎರಡು ಪ್ಯಾಕೇಜ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಸರಾಸರಿ ಶೇ 72ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕು ಪ್ಯಾಕೇಜ್‌ಗಳಲ್ಲಿ 9 ಟಿಬಿಎಂಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ ಊರ್ಜಾ, ಅವನಿ, ಲಾವಿ, ವರದ ಮತ್ತು ವಿಂಧ್ಯಾ ಟಿಬಿಎಂಗಳು ಈಗಾಗಲೇ ಕಾಮಗಾರಿ ಪೂರ್ಣಗೊಳಿಸಿವೆ. ಇನ್ನು ನಾಲ್ಕು ಟಿಬಿಎಂಗಳು ಕಾಮಗಾರಿ ಮುಂದುವರಿಸಿವೆ.

13.09 ಕಿ.ಮೀ
ಡೇರಿ ಸರ್ಕಲ್‌ನಿಂದ ನಾಗವಾರದ ವರೆಗಿನ ಸುರಂಗ ಮಾರ್ಗದ ಉದ್ದ

15,210 ಮೀಟರ್
ಸುರಂಗ ಮಾರ್ಗ ಪೂರ್ಣಗೊಂಡಿರುವುದು

₹11,500 ಕೋಟಿ
ಗೊಟ್ಟಿಗೆರೆಯಿಂದ ನಾಗವಾರ ಮಾರ್ಗ ನಿರ್ಮಾಣ ವೆಚ್ಚ (ಎಲಿವೇಟೆಡ್ ಮಾರ್ಗ ಸಹಿತ)

12 ಮಾರ್ಗದಲ್ಲಿ ನಿರ್ಮಾಣವಾಗುವ ನೆಲದಡಿ ನಿಲ್ದಾಣಗಳು

6 ಎತ್ತರಿಸಿದ ನಿಲ್ದಾಣಗಳು

21,245 ಮೀಟರ್
ಒಟ್ಟು ಸುರಂಗ ಮಾರ್ಗದ ಉದ್ದ

ಸುರಂಗ ಮಾರ್ಗದ 12 ನಿಲ್ದಾಣಗಳು

- ಡೇರಿ ವೃತ್ತ
- ಲಕ್ಕಸಂದ್ರ
- ಲ್ಯಾಂಗ್‌ಫೋರ್ಡ್ ಟೌನ್
- ರಾಷ್ಟ್ರೀಯ ಮಿಲಿಟರಿ ಶಾಲೆ
- ಎಂ.ಜಿ. ರಸ್ತೆ
- ಶಿವಾಜಿನಗರ
- ಕಂಟೋನ್ಮೆಂಟ್
- ಪಾಟರಿ ಟೌನ್
- ಟ್ಯಾನರಿ ರಸ್ತೆ
- ವೆಂಕಟೇಶಪುರ
- ಕಾಡುಗೊಂಡನಹಳ್ಳಿ
- ನಾಗವಾರ

ಟಿಬಿಎಂ

ಟಿಬಿಎಂ ಕಾರ್ಯವೈಖರಿ ಹೀಗೆ...

ಟಿಬಿಎಂಗಳು 6.8 ಮೀಟರ್‌ನಷ್ಟು ಬಾಹ್ಯವ್ಯಾಸ ಮತ್ತು 5.8 ಮೀಟರ್‌ನಷ್ಟು ಆಂತರಿಕ ವ್ಯಾಸ ಹೊಂದಿದ್ದು, ದೈತ್ಯ ಚಕ್ರದಂತೆ ಕಾಣಿಸುತ್ತವೆ.

ಅವು ತಿರುಗುತ್ತಿದ್ದರೆ, ಒತ್ತಡ ಸೃಷ್ಟಿಯಾಗಿಸುತ್ತ ಯಂತ್ರ ಮುಂದಕ್ಕೆ ಸಾಗುತ್ತದೆ. ಮಣ್ಣು ಮತ್ತು ಬಂಡೆಗಳನ್ನು ಮುರಿದು ಯಂತ್ರಗಳು ನುಗ್ಗುತ್ತವೆ. ಸ್ಲರಿ ಪೈಪ್‌ಗಳಿಗೆ ಮುರಿದ ತುಂಡನ್ನು ತಳ್ಳುತ್ತವೆ.

ಈ ಟಿಬಿಎಂ ಹಿಂಬಾಲಿಸುವ ರೈಲಿನ ರೀತಿಯ ರಚನೆಯು ಯಂತ್ರದ ನರನಾಡಿ ಇದ್ದಂತೆ. ಇದರಲ್ಲಿ ಕಾರ್ಯಾಚರಣೆ ಕೊಠಡಿ, ನಿಯಂತ್ರಣ ಕೊಠಡಿ, ವಿದ್ಯುತ್ ಪರಿವರ್ತಕ ಮತ್ತು ಹೈ ವೋಲ್ಟೇಜ್ ವಿದ್ಯುತ್ ಹೊಂದಿರುವ ವ್ಯವಸ್ಥೆ ಇರುತ್ತದೆ. ಕಟ್ಟರ್ ವೇಗವನ್ನು ಹೆಚ್ಚಿಸುವುದು ಮತ್ತು ಕಡಿಮೆ ಮಾಡುವ ಕಾರ್ಯ ಇಲ್ಲಿಂದಲೇ ನಡೆಯುತ್ತದೆ. ಮಣ್ಣಿನ ಪದರಗಳನ್ನು ಕತ್ತರಿಸಲು ಅನುಕೂಲಕರವಾಗಿದ್ದರೆ ಟಿಬಿಎಂ ಪ್ರತಿ ನಿಮಿಷಕ್ಕೆ 10–12 ಮಿಲಿ ಮೀಟರ್ ಚಲಿಸುತ್ತದೆ. ಬಂಡೆಗಳು ಎದುರಾದರೆ ಅದು ನಿಮಿಷಕ್ಕೆ 1ರಿಂದ 2 ಮಿಲಿ ಮೀಟರ್ ಮಾತ್ರ ಸಾಗಲು ಸಾಧ್ಯವಾಗುತ್ತದೆ. ಈ ಯಂತ್ರಗಳು ಸರಾಸರಿ ದಿನಕ್ಕೆ ನಾಲ್ಕು ಮೀಟರ್ ಕ್ರಮಿಸುತ್ತವೆ.

ದೈತ್ಯವಾದ ಈ ಯಂತ್ರ ಎಲ್ಲವನ್ನೂ ಕತ್ತರಿಸಿ ಮುನ್ನಗುತ್ತದೆ. ಆದರೂ, ಕೆಲವೊಮ್ಮೆ ಸಿಲುಕಿಕೊಳ್ಳುವ ಸಾಧ್ಯತೆಯೂ ಇರುತ್ತದೆ. ಒಮ್ಮೆ ಸಿಲುಕಿಕೊಂಡರೆ ಬಿಡಿಸಿ ಮತ್ತೆ ಕಾರ್ಯಾಚರಣೆಗೆ ಇಳಿಸಲು ಹಲವು ತಿಂಗಳುಗಳೇ ಬೇಕಾಗುತ್ತದೆ. ನಾಗವಾರ–ಗೊಟ್ಟಿಗೆರೆ ಮಾರ್ಗದಲ್ಲಿ ಲಕ್ಕಸಂದ್ರ ಬಳಿ ತ್ಯಾಜ್ಯದಲ್ಲಿ ಯಂತ್ರ ಸಿಲುಕಿಕೊಂಡಿತ್ತು.

ದಿನದ 24 ಗಂಟೆಯೂ ಟಿಬಿಎಂಗಳು ಕಾರ್ಯನಿರ್ವಹಿಸುತ್ತವೆ. ಇದನ್ನು ನಿರ್ವಹಿಸುವ ಸಿಬ್ಬಂದಿ ಪಾಳಿಯಲ್ಲಿ ಕೆಲಸ ಮಾಡುತ್ತಾರೆ.

ಹೆಸರೇ ಆಕರ್ಷಕ

ಸುರಂಗ ಕೊರೆಯುತ್ತಿರುವ ಟಿಬಿಎಂಗಳಿಗೆ ಆಕರ್ಷಕ ಹೆಸರುಗಳನ್ನು ಇಡಲಾಗಿದೆ. ಅವನಿ(ಭೂಮಿ), ಲಾವಿ(ಸಿಂಹ), ಊರ್ಜಾ(ಶಕ್ತಿ), ವಿಂಧ್ಯಾ(ಪರ್ವತ), ರುದ್ರ(ಶಿವನ ಹೆಸರು), ವರದ(ಗಣಪತಿಯ ಹೆಸರು), ತುಂಗಾ(ನದಿ), ವಾಮಿಕಾ(ಪಾರ್ವತಿಯ ಹೆಸರು), ಭದ್ರಾ(ನದಿ).

ಕರೆ ಬಂದ 5 ನಿಮಿಷಕ್ಕೆ ಸ್ಪಂದನೆ: ಕಾರ್ಯಕ್ಕೆ ಮೆಚ್ಚುಗೆ

ವಿಷ ಕುಡಿದಿದ್ದ ಬ್ಯೂಟಿಷಿಯನ್ ರಕ್ಷಿಸಿದ ಪೊಲೀಸರು

ಬೆಂಗಳೂರು: ಆತ್ಮಹತ್ಯೆ ಮಾಡಿಕೊಳ್ಳಲೆಂದು ವಿಷ ಕುಡಿದಿದ್ದ ಬ್ಯೂಟಿಷಿಯನ್ ಒಬ್ಬರನ್ನು ಪುಲಿಕೇಶಿನಗರ ಠಾಣೆ ಪೊಲೀಸರು ರಕ್ಷಿಸಿದ್ದು, ಅಸ್ವಸ್ಥಗೊಂಡಿರುವ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

ಸಾರ್ವಜನಿಕರೊಬ್ಬರಿಂದ ಬಂದ ತುರ್ತು ಕರೆಗೆ ಸ್ಪಂದಿಸಿ 5 ನಿಮಿಷಗಳಲ್ಲಿ ಸ್ಥಳಕ್ಕೆ ಹೋಗಿ ಮಹಿಳೆಯನ್ನು ಕಾಪಾಡಿರುವ ಪೊಲೀಸರ ಕೆಲಸಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

‘ಪುಲಿಕೇಶಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ವಾಸವಿರುವ 30 ವರ್ಷದ ಮಹಿಳೆ, ವೃತ್ತಿಯಲ್ಲಿ ಬ್ಯೂಟಿಷಿಯನ್. ಯೂಟ್ಯೂಬರ್ ಸಹ ಆಗಿರುವ ಇವರ ಚಾನೆಲ್‌ಗೆ ಲಕ್ಷಾಂತರ ಮಂದಿ ಚಂದಾದಾರರಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೌಟುಂಬಿಕ ಕಾರಣದಿಂದ ಮಾನಸಿಕವಾಗಿ ನೊಂದಿದ್ದ ಮಹಿಳೆ, ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಾಗಿ ಭಾನುವಾರ ರಾತ್ರಿ ಕ್ರಿಮಿನಾಶಕ ಕುಡಿದಿದ್ದರು. ಪ್ರಾಣ ಹೋಗುವ ಸಂಕಟ ತಾಳಲಾರದೇ ಕಿರುಚಾಡಲಾರಂಭಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆಯ ನರಳಾಟ ಗಮನಿಸಿದ್ದ ಸ್ಥಳೀಯರೊಬ್ಬರು ಮನೆಯೊಳಗೆ ಹೋಗಲು ಯತ್ನಿಸಿದ್ದರು. ಆದರೆ, ಒಳಗಿನಿಂದ ಲಾಕ್ ಆಗಿದ್ದರಿಂದ ಅದು ಸಾಧ್ಯವಾಗಿರಲಿಲ್ಲ. ಹೀಗಾಗಿ, ಪಶ್ಚಿಮ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ತ್ವರಿತವಾಗಿ ಸ್ಪಂದಿಸಿದ ಡಿಸಿಪಿ, ಹೊಯ್ಸಳ ಗಸ್ತು ವಾಹನ ಸಿಬ್ಬಂದಿಗೆ ಸಂದೇಶ ರವಾನಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘5 ನಿಮಿಷದಲ್ಲಿ ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿ, ಮಹಿಳೆಯನ್ನು ಎತ್ತಿಕೊಂಡು ಹೊಯ್ಸಳ ಗಸ್ತು ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ’ ಎಂದು ಹೇಳಿವೆ.

ರಕ್ಷಣೆ ಬಗ್ಗೆ ಪ್ರತಿಕ್ರಿಯಿಸಿದ ಭೀಮಾಶಂಕರ್ ಗುಳೇದ್, ‘ಸಾರ್ವಜನಿಕರೊಬ್ಬರು ನೀಡಿದ್ದ ಮಾಹಿತಿಗೆ ಸ್ಪಂದಿಸಿದ್ದ ಇನ್‌ಸ್ಪೆಕ್ಟರ್ ಪಿ.ಬಿ.ಕಿರಣ್, ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಡಿ. ರೇವಣ್ಣ ಹಾಗೂ ಹೆಡ್ ಕಾನ್‌ಸ್ಟೆಬಲ್ ಕುಮಾರ್, ಮಹಿಳೆಯನ್ನು ರಕ್ಷಿಸಿದ್ದಾರೆ’ ಎಂದರು.

ರಿಯಲ್ ಎಸ್ಟೇಟ್ ಉದ್ಯಮಿ ಕೊಲೆ: ಮಗ ಸೇರಿ ಮೂವರು ಬಂಧನ

ಅಪ್ಪನ ಕೊಲ್ಲಲು ₹1 ಕೋಟಿ ಸುಪಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಎನ್. ನಾರಾಯಣಸ್ವಾಮಿ (70) ಎಂಬುವವರ ಕೊಲೆ ಪ್ರಕರಣದ ಸಂಬಂಧ ಮಗ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕಾವೇರಪ್ಪ ಬಡಾವಣೆ ನಿವಾಸಿ ನಾರಾಯಣಸ್ವಾಮಿ ಅವರನ್ನು ಫೆ. 13ರಂದು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಮಗ ಮಣಿಕಂಠ ಅಲಿಯಾಸ್ ಮಣಿ (30), ಹೊಸಕೋಟೆ ನಡುವತ್ತಿಯ ಎನ್. ಎಂ. ಶಿವಕುಮಾರ್ ಅಲಿಯಾಸ್ ಶಿವ (24) ಹಾಗೂ ಅನುಗೊಂಡನಹಳ್ಳಿಯ ಟಿ. ಆದರ್ಶ ಅಲಿಯಾಸ್ ಬೆಂಕಿ (26) ಎಂಬುವವರನ್ನು ಬಂಧಿಸಲಾಗಿದೆ’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಎಸ್. ಗಿರೀಶ್ ತಿಳಿಸಿದರು.

ನಾರಾಯಣ ಸ್ವಾಮಿ

ಮಣಿಕಂಠ

ಆದರ್ಶ

ಶಿವ

‘ರಿಯಲ್ ಎಸ್ಟೇಟ್ ಉದ್ಯಮಿ ನಾರಾಯಣಸ್ವಾಮಿ, 28 ಫ್ಲ್ಯಾ-ಟ್‌ಗಳನ್ನು ಒಳಗೊಂಡ ಇಂದ್ರಪ್ರಸ್ಥ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಿದ್ದರು. ಅದರಲ್ಲೇ ಒಂದು ಫ್ಲ್ಯಾಟ್‌ನಲ್ಲಿ ಅವರು ವಾಸವಿದ್ದರು’ ಎಂದು ಹೇಳಿದರು.

ಪತ್ನಿ ಕೊಂದು ಜೈಲಿಗೆ: ‘ನಾರಾಯಣ ಸ್ವಾಮಿ ಅವರಿಗೆ ನಾಲ್ವರು ಪುತ್ರಿಯರಿದ್ದಾರೆ. ಮಣಿಕಂಠ ಒಬ್ಬನೇ ಮಗ. ಈತ ಬಿ.ಕಾಂ ಪದವೀಧರನಾಗಿದ್ದು, 2013ರಲ್ಲಿ ಪತ್ನಿಯನ್ನು ಕೊಂದಿದ್ದ. ಈ ಪ್ರಕರಣದಲ್ಲಿ ಜೈಲು ಸೇರಿ, ಜಾಮೀನು ಮೇಲೆ ಹೊರಬಂದಿದ್ದ’ ಎಂದು ಗಿರೀಶ್ ತಿಳಿಸಿದರು.

‘ಮಗನ ಜೀವನ ಸರಿಪಡಿಸಲು ಮುಂದಾಗಿದ್ದ ತಂದೆ, ಆತನಿಗೆ ಅರ್ಚನಾ ಎಂಬುವವರನ್ನು ಎರಡನೇ ಮದುವೆ ಮಾಡಿಸಿದ್ದರು. ಅರ್ಚನಾ ಜೊತೆಗೂ ಮಣಿ ಗಲಾಟೆ ಮಾಡಲಾರಂಭಿಸಿದ್ದ. ಕೆಲ ದಿನಗಳ ಹಿಂದೆಯಷ್ಟೇ ಚಾಕುವಿನಿಂದ ಇರಿದು ಅರ್ಚನಾ ಅವರನ್ನು ಕೊಲ್ಲಲು ಯತ್ನಿಸಿದ್ದ. ಈ ಪ್ರಕರಣದಲ್ಲಿ ಈತ ಪುನಃ ಜೈಲು ಸೇರಿದ್ದ’ ಎಂದು ಹೇಳಿದರು.

‘ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅರ್ಚನಾ ನೋವಿಗೆ ಸ್ಪಂದಿಸಿದ್ದ ನಾರಾಯಣಸ್ವಾಮಿ, ‘ಒಂದು ಫ್ಲ್ಯಾಟ್ ನೀಡುತ್ತೇನೆ’ ಎಂದು ಭರವಸೆ ನೀಡಿದ್ದರು. ಈ ವಿಷಯ ಗೊತ್ತಾಗುತ್ತಿದ್ದಂತೆ ಸಿಟ್ಟಾಗಿದ್ದ ಮಣಿಕಂಠ, ‘ಎಲ್ಲ ಆಸ್ತಿಯನ್ನು ಬೇರೆಯವರಿಗೆ ದಾನ ಮಾಡುತ್ತಿದ್ದೀಯಾ? ಆಸ್ತಿಯನ್ನು ನನ್ನ ಹೆಸರಿಗೆ ಮಾಡು’ ಎಂದು ತಂದೆಗೆ ಹೇಳಿದ್ದ. ಅದಕ್ಕೆ ತಂದೆ ಒಪ್ಪಿರಲಿಲ್ಲ’ ಎಂದರು.

ಆಸ್ತಿಗಾಗಿ ಕೊಲೆ ಸಂಚು: ‘ತಾನೊಬ್ಬನೇ ಮಗ. ತಂದೆಯನ್ನು ಕೊಂದರೆ ಎಲ್ಲ ಆಸ್ತಿ ತನ್ನ ಪಾಲಾಗುತ್ತದೆಂದು ಮಣಿ ಅಂದುಕೊಂಡಿದ್ದ. ಜೈಲಿನಲ್ಲಿ ಪರಿಚಯವಾಗಿದ್ದ ಶಿವ ಹಾಗೂ ಆದರ್ಶ ಜೊತೆ ಸೇರಿ ತಂದೆ ಕೊಲ್ಲಲು ಸಂಚು ರೂಪಿಸಿದ್ದ’ ಎಂದು ಡಿಸಿಪಿ ಹೇಳಿದರು.

‘ಆರೋಪಿಗಳಿಗೆ ಮುಂಗಡವಾಗಿ ₹ 1 ಲಕ್ಷ ನೀಡಿದ್ದ ಮಣಿ, ತಂದೆಯನ್ನು ಕೊಂದ ನಂತರ ₹ 15 ಲಕ್ಷ ನೀಡುವುದಾಗಿ ಹೇಳಿದ್ದ. ಬಳಿಕ, ಹಂತ ಹಂತವಾಗಿ ₹ 1 ಕೋಟಿ ನಗದು, 1 ಫ್ಲ್ಯಾಟ್ ಹಾಗೂ ಕಾರು ಕೊಡುವುದಾಗಿ ಭರವಸೆ ನೀಡಿದ್ದ’ ಎಂದು ಗಿರೀಶ್ ತಿಳಿಸಿದರು.

‘ಸೊಸೆ ಅರ್ಚನಾ ಹೆಸರಿಗೆ ಫ್ಲ್ಯಾಟ್ ನೋಂದಣಿ ಮಾಡಿಸಲು ಕೆ.ಆರ್. ಪುರ ಉಪ ನೋಂದಣಾಧಿಕಾರಿ ಕಚೇರಿಗೆ ಹೊರಟಿದ್ದ ವೇಳೆಯಲ್ಲಿ ನಾರಾಯಣಸ್ವಾಮಿ ಮೇಲೆ ಶಿವ ಹಾಗೂ ಸಹಚರ ದಾಳಿ ಮಾಡಿದ್ದರು. ಮಚ್ಚಿನಿಂದ ಹೊಡೆದು ಕೊಲೆ ಮಾಡಿ ಪರಾರಿಯಾ-ಗಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ, ಆದರ್ಶ್ ಹಾಗೂ ಶಿವನ ಬಗ್ಗೆ ಸುಳಿವು ಸಿಕ್ಕಿತ್ತು. ಇಬ್ಬರನ್ನೂ ವಿಚಾರಿಸಿದಾಗ ಮಗನೇ ಪ್ರಮುಖ ಆರೋಪಿ ಎಂಬುದು ತಿಳಿಯಿತು’ ಎಂದು ಹೇಳಿದರು.

‘ಬಂಧಿತ ಶಿವ ವಿರುದ್ಧ ವಿವಿಧ ಠಾಣೆಗಳಲ್ಲಿ 9 ಪ್ರಕರಣ ದಾಖಲಾಗಿವೆ. ಆದರ್ಶ ವಿರುದ್ಧ ತಿರುಮಲಶೆಟ್ಟಿಹಳ್ಳಿ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿರುವುದು ಗೊತ್ತಾಗಿದೆ’ ಎಂದು ಡಿಸಿಪಿ ತಿಳಿಸಿದರು.

ಅಪರಾಧ ಸುದ್ದಿ

ಕಳ್ಳತನ: 22 ವರ್ಷಗಳ ಬಳಿಕ ಸಿಕ್ಕಿಬಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಶಾಲೆ-ಕಾಲೇಜುಗಳಲ್ಲಿ ಕಳ್ಳತನ ಮಾಡಿ ಪರಾರಿ-ಯಾಗುತ್ತಿದ್ದ ಮೂವರು ಆರೋಪಿಗಳು, 22 ವರ್ಷಗಳ ಬಳಿಕ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

‘ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಶಾಲೆಯೊಂದರ ಬೀಗ ಮುರಿದು ಇತ್ತೀಚೆಗೆ ಕಳ್ಳತನ ಮಾಡಲಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ತಮಿಳುನಾಡಿನ ಅಣ್ಣಾ ದೊರೈ (42), ವೀರಮಲೈ ಅಲಿಯಾಸ್ ಕುಮಾರ್ (40) ಹಾಗೂ ಬಾಬು (34) ಬಂಧಿತರು. ಇವರಿಂದ ₹5 ಲಕ್ಷ ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

2001ರಿಂದ ಕೃತ್ಯ: ‘ಒಂದೇ ರಾಜ್ಯದವರಾಗಿದ್ದ ಮೂವರು ಆರೋಪಿಗಳು, ಕಳ್ಳತನಕ್ಕೆಂದು ತಂಡ ಕಟ್ಟಿಕೊಂಡಿದ್ದರು. 2001ರಿಂದ ಶಾಲೆ-ಕಾಲೇಜುಗಳಲ್ಲಿ ಕಂಪ್ಯೂಟರ್ ಹಾಗೂ ಇತರೆ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದರು. ಯಾವುದೇ ಸುಳಿವು ಸಿಗದಂತೆ ಪರಾರಿಯಾಗುತ್ತಿದ್ದರು. ಕದ್ದ ವಸ್ತುಗಳನ್ನು ಮಾರಿ ಹಣ ಸಂಪಾದಿಸುತ್ತಿದ್ದರು. ಅದನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ವೀರಮಲೈ

ಬಾಬು

ಅಣ್ಣಾದೊರೈ

ಸಂಕ್ಷಿಪ್ತ ಸುದ್ದಿ

ಮತದಾರರಿಗೆ ಕುಕ್ಕರ್ ಕಿಟ್ ವಿತರಣೆ

ದಾಬಸ್ ಪೇಟೆ: ನೆಲಮಂಗಲ ವಿಧಾನಸಭಾ ಕ್ಷೇತ್ರದ ಕೆಪಿಸಿಸಿ ವೀಕ್ಷಕ ಹಾಗೂ ಪಕ್ಷದ ಟಿಕೆಟ್ ಆಕಾಂಕ್ಷಿಯಾ-ಗಿರುವ ಎನ್. ಶ್ರೀನಿವಾಸ್ ಕ್ಷೇತ್ರದ ಉದ್ದಗಲಕ್ಕೂ ಗ್ರಾಮ ಗ್ರಾಮಗಳಿಗೆ ತೆರಳಿ ಕುಕ್ಕರ್ ಕಿಟ್ ವಿತರಣೆ ಮಾಡುತ್ತಿದ್ದಾರೆ.

ಭಾನುವಾರ ಸೋಂಪುರ ಹೋಬಳಿಯ ಹಲವು ಗ್ರಾಮಗಳಿಗೆ ತೆರಳಿ ಶ್ರೀನಿವಾಸ್ ಕಿಟ್ ವಿತರಣೆ ಮಾಡಿದರು. ಕಿಟ್ 5 ಲೀಟರ್ ನ ಒಂದು ಕುಕ್ಕರ್, ತವಾ, ಬಾಣಲೆ, ಹಾಟ್ ಬಾಕ್ಸ್ ಮತ್ತು ಟೀ ಪಾತ್ರೆ ಒಳಗೊಂಡಿದೆ.

ಕುಕ್ಕರ್ ಕಿಟ್ ವಿತರಣೆ ಮಾಡುವುದಕ್ಕೂ ಮುಂಚೆ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಮೂಲಕ ಮನೆಮನೆಗೂ ಟೋಕನ್‌ಗಳನ್ನು ನೀಡಲಾಗಿತ್ತು. ಟೋಕನ್‌ಗಳನ್ನು ಕೊಟ್ಟವರಿಗೆ ಕಿಟ್ ನೀಡಲಾಗುತ್ತಿದೆ.

ಕೆಲವರು ಸ್ಥಳೀಯ ಕಾರ್ಯಕರ್ತರ ನೆರವಿನೊಂದಿಗೆ ಎರಡು-ಮೂರು ಟೋಕನ್ ಗಳನ್ನು ಪಡೆದುಕೊಂಡಿದ್ದರು. ಕುಕ್ಕರ್ ವಿತರಿಸುವುದನ್ನು ಆರಂಭಿಸಿದ ಶ್ರೀನಿವಾಸ್ ಅವರ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಟೀಕೆಗಳು ಕೇಳಿ ಬಂದಿದ್ದವು.

ಬ್ರಿಟನ್: ಅಪಘಾತದಲ್ಲಿ ಕೇರಳದ ವಿದ್ಯಾರ್ಥಿನಿ ಸಾವು

ಲಂಡನ್ (ಪಿಟಿಐ): ಉತ್ತರ ಲಂಡನ್‌ನ ಲೀಡ್ಸ್ ನಗರದಲ್ಲಿ ಕಾರೊಂದು ಇದೇ 22ರಂದು ವೇಗವಾಗಿ ಬಸ್ ನಿಲ್ದಾಣದೊಳಗೆ ನುಗ್ಗಿದ ಪರಿಣಾಮ ತೀವ್ರ ಗಾಯಗೊಂಡಿದ್ದ ಭಾರತೀಯ ಮೂಲದ ವಿದ್ಯಾರ್ಥಿನಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ವಿದ್ಯಾರ್ಥಿನಿಯನ್ನು ಅಥಿರಾ ಅನಿಲ್‌ಕುಮಾರ್ ಲಾಲಿ ಕುಮಾರಿ (28) ಎಂದು ಗುರುತಿಸಲಾಗಿದೆ.

ಅಥಿರಾ ಕೇರಳದ ತಿರುವನಂತಪುರ ಮೂಲದವರು. ಕಳೆದ ತಿಂಗಳು ಇಲ್ಲಿನ ಬೆಕೆಟ್ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿದ್ದರು.

ಚಿತ್ರಾವಳಿ

ನಗರದ ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ವತಿಯಿಂದ ನಡೆದ 58ನೇ ನಾದಜ್ಯೋತಿ ಸಂಗೀತ ಸಂಭ್ರಮದಲ್ಲಿ ವಿದುಷಿ ಗೀತಾ ರಮಾನಂದ್ ಅವರಿಗೆ ‘ಕಲಾಜ್ಯೋತಿ’, ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜು ಅವರಿಗೆ ‘ನಾದಜ್ಯೋತಿ’ ಗಾಯಕಿ ಶಾಂತಾ ನರಸಿಂಹನ್ ಅವರಿಗೆ ‘ಜೀವಮಾನ ಸಾಧನೆ’ ಪುರಸ್ಕಾರ ನೀಡಲಾಯಿತು. ಪೊಲೀಸ್ ಆಯುಕ್ತ ಶ್ರೀನಿವಾಸ ಗೌಡ, ಗಾಯಕ ಎಸ್. ಶಂಕರ್, ಸಭಾದ ಅಧ್ಯಕ್ಷ. ಎಸ್. ನಾಗರಾಜ ಶಾಸ್ತ್ರಿ, ಕಾರ್ಯದರ್ಶಿ ಕಟ್ಟೆ ಸತ್ಯನಾರಾಯಣ ರಾವ್ ಹಾಗೂ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು

ಬೆಂಗಳೂರು ವಿ.ವಿಯಲ್ಲಿ ಸೋಮವಾರ ಆರಂಭವಾದ ಪುಸ್ತಕ ಪ್ರದರ್ಶನಕ್ಕೆ ಕುಲಪತಿ ಪ್ರೊ.ಎಸ್.ಎಂ. ಜಯಕರ್ ಚಾಲನೆ ನೀಡಿದರು. ಕುಲಸಚಿವ ಎನ್. ಮಹೇಶ್‌ಬಾಬು, ಹಣಕಾಸು ಅಧಿಕಾರಿ ಅಜಿತ್ ಕುಮಾರ್ ಹೆಗ್ಡೆ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಡಾ.ಎ.ಎನ್. ವೆಂಕಟೇಶ್ ಇದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಮೇಲೆ ನಿಗಾ ಇಡಿ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಿಜೆಪಿ ಸರ್ಕಾರವು ಅಧಿಕಾರಿಗಳ ನೆರವಿನಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಸಮುದಾಯಗಳು ಹಾಗೂ ಮುಸ್ಲಿಮರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಸತತ ಪ್ರಯತ್ನಗಳನ್ನು ಮಾಡುತ್ತಿದೆ. ಮತದಾರರ ಪಟ್ಟಿ ಪರಿಷ್ಕರಣೆ ನೆಪದಲ್ಲಿ ನಡೆಯುವ ಇಂತಹ ಚಟುವಟಿಕೆಗಳ ಕುರಿತು ನಿರಂತರ ನಿಗಾ ಇಡಲು ರಾಜ್ಯ ನಾಯಕತ್ವಕ್ಕೆ ಸೂಚಿಸಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳ ವರದಿಯಲ್ಲಿ ತಿಳಿಸಲಾಗಿದೆ.

ರಾಯಪುರದಲ್ಲಿ ಮೂರು ದಿನಗಳ ಕಾಲ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳ 2018–2022ರ ವರದಿಯನ್ನು ಸಲ್ಲಿಸಲಾಗಿದೆ. ಕರ್ನಾಟಕದ ವರದಿಯನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಮಂಡಿಸಿದ್ದು, ‘ಪಕ್ಷವು ರಾಜ್ಯದಲ್ಲಿ ಬಲವಾದ ನೆಲೆ ಹೊಂದಿದೆ. ಪಕ್ಷದ ಎಲ್ಲರೂ ಒಟ್ಟಾಗಿ, ಸಾಮೂಹಿಕ ನಾಯಕತ್ವದಡಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಪಕ್ಷದ ನಾಯಕತ್ವವು ಆಕಾಂಕ್ಷಿಗಳನ್ನು ಭೇಟಿ ಮಾಡಿ ಸಮಾಲೋಚಿಸಿ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದೆ’ ಎಂದು ಉಲ್ಲೇಖಿಸಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ನಡೆಸಿದ ಹೋರಾಟ ಹಾಗೂ ಪ್ರತಿಭಟನೆಗಳಿಂದಾಗಿ ಕೇಸರಿ ಪಾಳಯದಲ್ಲಿ ತುಂಬಾ ಆತಂಕ ಸೃಷ್ಟಿಯಾಗಿದೆ. ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ಬಸವರಾಜ ಬೊಮ್ಮಾಯಿ ಅವರಿಗೆ ಚುಕ್ಕಾಣಿ ನೀಡಲಾಯಿತು. ಆದರೆ, ಮುಖ್ಯಮಂತ್ರಿ ಬದಲಾವಣೆಯಿಂದ ಭ್ರಷ್ಟಾಚಾರ ಕಡಿಮೆ ಆಗಲಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿಯಲಿದೆ’ ಎಂದು ಸುರ್ಜೆವಾಲಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿಯ ಇನ್ಫೊಸಿಸ್ ಕಚೇರಿ ಬಳಿ ನಿರ್ಮಾಣ

ನಗರದಲ್ಲಿ ತಲೆ ಎತ್ತಿದ ಮೊದಲ ಸ್ಮಾರ್ಟ್ ನಿಲ್ದಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲವೂ ಸ್ಮಾರ್ಟ್ ಆಗುತ್ತಿರುವ ನಗರದಲ್ಲೀಗ ಸ್ಮಾರ್ಟ್ ನಿಲ್ದಾಣವೊಂದು ತಲೆ ಎತ್ತಿದೆ.

ಎಲೆಕ್ಟ್ರಾನಿಕ್‌ಸಿಟಿಯ ಇನ್ಫೊಸಿಸ್ ಕಚೇರಿ ಬಳಿಯ ಒಟೆರಾ ಜಂಕ್ಷನ್ ನಲ್ಲಿ ಇದನ್ನು ನಿರ್ಮಿಸಲಾ-ಗಿದ್ದು, ಸೋಮವಾರ ಉದ್ಘಾಟನೆ-ಯಾಗಿದೆ.

ಈ ನಿಲ್ದಾಣದಲ್ಲಿ ಪ್ರಯಾಣಿಕರು ಬಸ್‌ಗಾಗಿ ಕಾಯುತ್ತ ಲ್ಯಾಪ್‌ಟಾಪ್ ಚಾರ್ಜ್ ಮಾಡುತ್ತಲೇ ಕೆಲಸ ಮಾಡಬಹುದು. ಮೊಬೈಲ್ ಚಾರ್ಜಿಂಗ್ ವ್ಯವಸ್ಥೆ, ಮಹಿಳೆಯರಿಗಾಗಿ ಸ್ಯಾನಿಟರಿ ಪ್ಯಾಡ್ ಯಂತ್ರ, ಶೌಚಾಲಯ, ಸ್ನ್ಯಾಕ್ಸ್ ಯಂತ್ರ ಕೂಡ ಇಲ್ಲಿ ಅಳವಡಿಸಲಾಗಿದೆ.

ಸಿಟಿ ಕೈಗಾರಿಕಾ ಸಮುಚ್ಚಯ ಪ್ರಾಧಿಕಾರ (ಎಲ್ಸಿಟಾ) ಇದನ್ನು ನಿರ್ಮಿಸಿದೆ. ಇದು ನಗರದ ಮೊದಲ ಸ್ಮಾರ್ಟ್ ಬಸ್ ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಬಸ್ ಯಾವಾಗ ಬರಲಿದೆ ಎಂಬುದರ ಡಿಜಿಟಲ್ ವೇಳಾಪಟ್ಟಿ ಇದೆ. ಮಹಿಳಾ ಪ್ರಯಾಣಿಕರ ಅನುಕೂಲಕ್ಕಾಗಿ ಪ್ಯಾನಿಕ್ ಬಟನ್, ಸಿಸಿಟಿವಿ ಸೇರಿ ಹತ್ತು ಹಲವು ಹೈಟೆಕ್ ಸೌಲಭ್ಯಗಳನ್ನು ಒಳಗೊಂಡಿದೆ. ಇನ್ನೂ 16 ಸ್ಮಾರ್ಟ್ ಬಸ್ ನಿಲ್ದಾಣವನ್ನು ಮುಂಬರುವ ದಿನಗಳಲ್ಲಿ ನಿರ್ಮಿಸಲು ಎಲ್ಸಿಟಾ ಉದ್ದೇಶಿಸಿದೆ.



ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಉದ್ಘಾಟಿಸಿದರು. ವಿಶೇಷ ಆಯುಕ್ತ (ಸಂಚಾರ) ಡಾ.ಸಲೀಂ, ಎಲ್ಸಿಟಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚಾರ್ಲ್ಸ್ ಕರ್ನಾಲ್ ಅನಿರುದ್ಧ ಗುಡಿ ಇದ್ದರು.

ಅಪ್ಪಿತಪ್ಪಿಯೂ ಸಾಬ್ರಿಗೆ ವೋಟ್ ಹಾಕಬೇಡಿ: ಯತ್ನಾಳ

ವಿಜಯಪುರ: ‘ವಿಜಯಪುರ ನಗರದಲ್ಲಿ ಇನ್ನು ಮೇಲೆ ಯಾವ ಟಿಪ್ಪು ಸುಲ್ತಾನ್ ಆರಿಸಿ ಬರೋದಿಲ್ಲ, ಶಿವಾಜಿ ಮಹಾರಾಜರ ವಂಶದವರೇ ಆರಿಸಿ ಬರೋದು. ಅಪ್ಪಿತಪ್ಪಿ ಸಹಿತ ಸಾಬ್ರಿಗೆ ವೋಟ್ ಹಾಕಬಾರದು’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಭಾನುವಾರ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ‘ಗೌಡ್ರೆ, ವಿಜಯಪುರದಲ್ಲಿ ಒಂದು ಲಕ್ಷ ಟಿಪ್ಪು ಸುಲ್ತಾನರಿದ್ದಾರೆ. ಆದರೂ ಶಿವಾಜಿ ಮಹಾರಾಜನ ವಂಶದ ನೀವು ಹೆಂಗೆ ಆರಿಸಿ ಬರುತ್ತೀರಿ? ಎಂದು ರಾಜ್ಯದ ಅನೇಕ ಶಾಸಕರು ನನ್ನನ್ನ ಕೇಳುತ್ತಾರೆ’ ಎಂದರು.

ಇಂಗ್ಲೆಂಡ್‌ನಲ್ಲಿ ಕೆಲಸ ಕೊಡಿಸುವುದಾಗಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗ್ಲೆಂಡ್‌ನ ಕಂಪನಿಯಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸಿದ್ದ ಆರೋಪದಡಿ ನೋಕೊಚಾ ಕಾಸ್ಮಿರ್ ಇಕೆಂಬಾ ಎಂಬುವವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾ ನೋಕೊಚಾ, ಕೆಲ ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದ. ಹರಿಯಾಣದ ಫರಿದಾಬಾದ್‌ನಲ್ಲಿ ವಾಸವಿದ್ದ. ದೊಡ್ಡಗುಬ್ಬಿ ನಿವಾಸಿಯಾದ ಯುವತಿಯೊಬ್ಬರು ನೀಡಿದ್ದ ದೂರು ಆಧರಿಸಿ ಈತನನ್ನು ಬಂಧಿಸಲಾಗಿದೆ. 6 ಮೊಬೈಲ್, ಲ್ಯಾಪ್‌ಟಾಪ್, ಡೆಬಿಟ್ ಕಾರ್ಡ್, ಸಿಮ್ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಯು ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದ. ಅದನ್ನು ನಂಬಿ ಸಂಪರ್ಕಿ-ಸುತ್ತಿದ್ದ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸುತ್ತಿದ್ದ’ ಎಂದು ತಿಳಿಸಿದರು.

‘ದೂರುದಾರ ಯುವತಿಗೆ, ನರ್ಸ್ ಕೆಲಸ ಕೊಡಿಸುವುದಾಗಿ ಹೇಳಿ, ಹಂತ ಹಂತವಾಗಿ ₹34 ಲಕ್ಷ ಪಡೆದಿದ್ದ. ನಂತರ, ನಾಪತ್ತೆಯಾಗಿದ್ದ. ತನಿಖೆ ಕೈಗೊಂಡು ಫರಿದಾಬಾದ್‌ನಲ್ಲಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಈತನ ವಿರುದ್ಧ ತೆಲಂಗಾಣದಲ್ಲೂ ಪ್ರಕರಣ ದಾಖಲಾಗಿದೆ’ ಎಂದರು.

ನಿಧನ ವಾರ್ತೆ

ವೆಂಕಟ ಸುಬ್ಬರಾವ್ ಬಿ.ವಿ.

ಬೆಂಗಳೂರು: ವೆಂಕಟ ಸುಬ್ಬರಾವ್ ಬಿ.ವಿ. (79 ವರ್ಷ) ಅವರು ಸ್ವಗೃಹದಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರಿ-ದ್ದಾರೆ.

ಬಿ.ಇ.ಎಮ್.ಎಲ್. ನಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದ ಸುಬ್ಬರಾವ್, ಹಲವಾರು ದಶಕಗಳ ಕಾಲ ಸಾಮಾಜಿಕ ಮತ್ತು ವೈಚಾರಿಕ ಸಂಘಟನೆಗಳ ಜೊತೆ ಗುರುತಿಸಿಕೊಂಡಿದ್ದರು. ಸುಬ್ಬರಾವ್ ಅವರ ಆಶಯದಂತೆ ಅವರ ದೇಹವನ್ನು ವೈದ್ಯಕೀಯ ಸಂಶೋಧನೆಗಾಗಿ ದಾನ ಮಾಡಲಾಗಿದೆ.

ಪ್ರಧಾನಿಯಿಂದ ಶಿವಮೊಗ್ಗ ವಿಮಾನ ನಿಲ್ದಾಣ ಲೋಕಾರ್ಪಣೆ

ಅಭಿವೃದ್ಧಿ, ಬಿಎಸ್‌ವೈ ಸಾಧನೆಗೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ದೇಶದ ನಾಗರಿಕರು ‘ಮೇಡ್ ಇನ್ ಇಂಡಿಯಾ’ ಮೊಹರು ಇರುವ ವಿಮಾನಗಳಲ್ಲಿ ಓಡಾಡುವ ಕಾಲ ದೂರವಿಲ್ಲ. ಯುವಜನತೆಗೆ ಉದ್ಯೋಗಾವಕಾಶ ಕಲ್ಪಿಸುವಲ್ಲಿ ವಿಮಾನಯಾನ ಕ್ಷೇತ್ರ ಮುಂದಿನ ದಿನಗಳಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಮೋದಿ ಹೇಳಿದರು.

ಜಿಲ್ಲೆಯ ಸೋಗಾನೆಯಲ್ಲಿ ಸೋಮವಾರ ನೂತನ ವಿಮಾನ ನಿಲ್ದಾಣ ಲೋಕಾರ್ಪಣೆ ಮಾಡಿದ ಪ್ರಧಾನಿ ನರೇಂದ್ರ ಮೋದಿ, ಭಾರತಕ್ಕೆ ಈಗ ಸಾವಿರಾರು ವಿಮಾನಗಳ ಅಗತ್ಯವಿದ್ದು, ವಿಮಾನ ತಯಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸುವತ್ತ ದೇಶ ಮುಂದಡಿ ಇಟ್ಟಿದೆ ಎಂದರು.

‘ಬಿಜೆಪಿ ಅಧಿಕಾರಕ್ಕೆ ಬಂದ 9 ವರ್ಷಗಳಲ್ಲಿ ಹೊಸದಾಗಿ 74 ವಿಮಾನ ನಿಲ್ದಾಣಗಳ ನಿರ್ಮಾಣವಾಗಿವೆ. ಇದು ನಮ್ಮ (ಬಿಜೆಪಿ) ಅಭಿವೃದ್ಧಿಯ ದೃಷ್ಟಿಕೋನ. ಈ ಹಿಂದೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಏರ್ ಇಂಡಿಯಾ ಅಂದರೆ ಬರೀ ನಕಾರಾತ್ಮಕ ಸಂಗತಿಗಳೇ ಕೇಳಿಬರುತ್ತಿದ್ದವು. ಅಧಿಕಾರಸ್ಥರಿಂದ ಹಗರಣಗಳು, ಕೆಟ್ಟ ನಿರ್ವಹಣೆಗೆ ಮಾದರಿ ಆಗಿದ್ದ ಏರ್ ಇಂಡಿಯಾ ಈಗ ದೇಶದ ಹೊಸ ಸಾಮರ್ಥ್ಯದ ಧ್ಯೋತಕವಾಗಿ ಮುನ್ನಡೆಯುತ್ತಿದೆ’ ಎಂದು ಬಣ್ಣಿಸಿದರು.

ಯಡಿಯೂರಪ್ಪ ಕೇಂದ್ರಬಿಂದು: ಕಾರ್ಯಕ್ರಮದ ಬಹುಪಾಲು ಸಮಯವನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಗೌರವ ಸಲ್ಲಿಸಲು ಬಳಸಿಕೊಂಡರು. ಯಡಿಯೂರಪ್ಪ ಅವರನ್ನು ಬಿಜೆಪಿ ಕಡೆಗಣಿಸಿಲ್ಲ ಎಂಬ ಸಂದೇಶವನ್ನು ರವಾನಿಸಲು ಯತ್ನಿಸಿದರು.

> **ಶಿವಮೊಗ್ಗದ ಸೋಗಾನೆ ವಿಮಾನ ನಿಲ್ದಾಣವನ್ನು ಇನ್ನೆರಡು ವರ್ಷಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಮೇಲ್ದರ್ಜೆಗೇರಿಸಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

80ನೇ ವಸಂತಕ್ಕೆ ಕಾಲಿಸಿರಿದ ಯಡಿಯೂರಪ್ಪ ಅವರಿಗೆ ಮೋದಿ ಅವರ ಮನವಿಯಂತೆ ಕಾರ್ಯಕ್ರಮದಲ್ಲಿ ಸೇರಿದ್ದ ಲಕ್ಷಕ್ಕೂ ಹೆಚ್ಚು ಮಂದಿಗೆ ಮೊಬೈಲ್‌ಫೋನ್ ಟಾರ್ಚ್ ಬೆಳಗಿಸಿ ಹಿರಿಯ ನಾಯಕನಿಗೆ ಹಗಲಲ್ಲೂ ಟಾರ್ಚ್ ಬೆಳಕಿನ ಗೌರವ ಕೊಡಿಸಿದರು.

‘ಯಡಿಯೂರಪ್ಪ ಅವರ 50–60 ವರ್ಷಗಳ ಸಾರ್ವಜನಿಕ ಬದುಕು ನಮಗೆಲ್ಲರಿಗೂ ಮಾದರಿಯಾಗಿದ್ದು, ಮೊಬೈಲ್ ಟಾರ್ಚ್ ಬೆಳಕಿನ ಮೂಲಕ ಅವರನ್ನು ಗೌರವಿಸೋಣ’ ಎಂದು ಮೋದಿ ಹೇಳಿದಾಗ, ‘ಮೋದಿ, ಮೋದಿ..’ ಹಾಗೂ ‘ಯಡಿಯೂರಪ್ಪ ಅವರಿಗೆ ಜೈ’ ಎಂಬ ಘೋಷಣೆ ಮುಗಿಲುಮುಟ್ಟಿತು.

ಶಿವಮೊಗ್ಗದಲ್ಲಿ ಸೋಗಾನೆ ವಿಮಾನ ನಿಲ್ದಾಣ ಲೋಕಾರ್ಪಣೆ ಸಮಾರಂಭದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಪ್ರಧಾನಿ ನರೇಂದ್ರ ಮೋದಿ ಹಸಿರು ಶಾಲು ಹಾಕಿ, ನೇಗಿಲುಕೊಟ್ಟು ಸನ್ಮಾನಿಸಿದರು. ಶಾಸಕ ಕೆ.ಎಸ್. ಈಶ್ವರಪ್ಪ, ಸಚಿವರಾದ ಎಸ್.ಟಿ.ಸೋಮಶೇಖರ್, ಸಿ.ಸಿ.ಪಾಟೀಲ, ವಿ.ಸೋಮಣ್ಣ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಆರಗ ಜ್ಞಾನೇಂದ್ರ, ಬೈರತಿ ಬಸವರಾಜ, ಶಾಸಕ ಹರತಾಳು ಹಾಲಪ್ಪ ಚಿತ್ರದಲ್ಲಿದ್ದಾರೆ.

ಹಸಿರು ಶಾಲು: ಪ್ರವೇಶ ನಿರಾಕರಣೆ

ಸಮಾರಂಭಕ್ಕೆ ಕಪ್ಪು ಬಟ್ಟೆ, ಶಾಲು ಹಾಕಿಕೊಂಡು ಬಂದರೆ ಪ್ರವೇಶವಿಲ್ಲ ಎಂದು ಮೊದಲೇ ಸಂಘಟಕರು ತಿಳಿಸಿದ್ದರು. ಆದರೆ, ಹಸಿರು ಶಾಲು ಹಾಕಿಕೊಂಡು ಬಂದವರಿಗೂ ಪ್ರವೇಶ ನೀಡಲಿಲ್ಲ.

‘ಯಡಿಯೂರಪ್ಪ ಅವರಿಗೆ ಹಸಿರುಶಾಲು ಹಾಕಿ ಮೋದಿ ಸನ್ಮಾನಿಸಿದರು. ಆದರೆ, ಹಸಿರು ಶಾಲು ಹಾಕಿದ್ದಕ್ಕೆ ನಮ್ಮನ್ನು ಒಳಗೆ ಬಿಡಲಿಲ್ಲ’ ಎಂದು ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಪ್ರತಿನಿಧಿ ಬಿ.ಎಚ್. ಹನುಮಣ್ಣ ಹೇಳಿದರು.

‘ಹಸಿರು ಶಾಲು ತೆಗೆದಿಟ್ಟರೆ ಒಳಗೆ ಬಿಡುತ್ತೇವೆ ಅಂದರು. ಅದಕ್ಕೆ ಒಪ್ಪದೇ ನಾವು ಎಂಟು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೇ ಮರಳಿದೆವು’ ಎಂದರು. ಕೇಸರಿ ಶಾಲು ಹಾಕಿಕೊಂಡು ಬಂದವರಿಗೆ ಕಾರ್ಯಕ್ರಮಕ್ಕೆ ಪ್ರವೇಶ ನೀಡಲಾಗಿತ್ತು.

ವಿಮಾನ ನಿಲ್ದಾಣದ ಹೆಸರು ಪ್ರಸ್ತಾಪವಿಲ್ಲ: ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಸ್ವತಃ ಪ್ರಧಾನಿ ಉದ್ಘಾಟನಾ ಸಮಾರಂಭದಲ್ಲಿ ಘೋಷಿಸುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿದ್ದವು. ಭಾಷಣದಲ್ಲಿ ಕುವೆಂಪು ಹಾಗೂ ಅವರ ವಿಶ್ವಮಾನವ ಸಂದೇಶವನ್ನು ನರೇಂದ್ರ ಮೋದಿ ಸಾರಿದರೂ, ವಿಮಾನ ನಿಲ್ದಾಣಕ್ಕೆ ಯಾರ ಹೆಸರನ್ನು ಇರಿಸಲಾಗುವುದು ಎಂಬುದರ ಬಗ್ಗೆ ಪ್ರಸ್ತಾಪಿಸಲಿಲ್ಲ.

‘ಮೋದಿ ಸಾವು ಜಪಿಸುತ್ತಿದೆ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ನಾನು ಬದುಕಿರುವವರೆಗೂ ಕಾಂಗ್ರೆಸ್‌ಗೆ ಏನೂ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿಯೇ ‘ಮರ್ ಜಾ ಮೋದಿ, ಮರ್ ಜಾ ಮೋದಿ’ (ಮೋದಿ ಸಾಯಿ, ಮೋದಿ ಸಾಯಿ) ಎಂದು ಘೋಷಣೆ ಕೂಗುತ್ತಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದರು.

ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ಆದರೆ, ಕಾಂಗ್ರೆಸ್ಸಿಗರ ಜಪ ಫಲಿಸುವುದಿಲ್ಲ. ನಿಮ್ಮೆಲ್ಲರ ಪ್ರೀತಿ, ಆಶೀರ್ವಾದಿಂದ ಕಮಲದೊಂದಿಗೆ ನಾನೂ ಅರಳುತ್ತೇನೆ’ ಎಂದರು. ಆ ಕ್ಷಣ ಪ್ರೇಕ್ಷಕರ ಗ್ಯಾಲರಿಯಿಂದ ‘ಮೋದಿ ಮೋದಿ’ ಎಂಬ ಘೋಷಣೆ ನಿರಂತರ ಮೊಳಗಿತು.

‘ಕರ್ನಾಟಕದ ನಾಯಕರಿಗೆ ಕಾಂಗ್ರೆಸ್ ಪಕ್ಷವು ನಿರಂತರವಾಗಿ ಅವಮಾನಿಸುತ್ತಿದೆ. ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ ಅವರಿಗೆ ಹೇಗೆ ಅವಮಾನ ಮಾಡಿದರು ಎಂಬುದು ನಿಮಗೆ ಗೊತ್ತಿದೆ. ಈಗ ಹಿರಿಯ ನಾಯಕ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸರದಿ ಬಂದಿದೆ’ ಎಂದು ಟೀಕಿಸಿದರು.

‘ಖರ್ಗೆ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. 50 ವರ್ಷಗಳಿಂದಲೂ ಜನರಿಗಾಗಿ ಏನೇನು ಸೇವೆ ಮಾಡಲು ಸಾಧ್ಯವೋ ಎಲ್ಲವನ್ನೂ ಮಾಡಲು ಯತ್ನಿಸಿದ್ದಾರೆ. ಆದರೆ, ಇಷ್ಟು ದೊಡ್ಡ ನಾಯಕನನ್ನು ಕಾಂಗ್ರೆಸ್ಸಿಗರು ಕೀಳಾಗಿ ನಡೆಸಿಕೊಳ್ಳುವುದನ್ನು ನೋಡಿ ನನಗೆ ದುಃಖವಾಗಿದೆ’ ಎಂದು ಹೇಳಿದರು.

ಇದಕ್ಕೆ ತಕ್ಕ ಉದಾಹರಣೆ ಬೇಕೆಂದರೆ ಛತ್ತೀಸ್‌ಗಡ ಸಮಾವೇಶ. ಎಐಸಿಸಿ ಅಧ್ಯಕ್ಷರನ್ನು ಧೂಳು, ಬಿಸಿಲಿನಲ್ಲಿ ನಿಲ್ಲಿಸಿದ್ದರು. ಛತ್ರಿ ಕೂಡ ಹಿಡಿಯಲಿಲ್ಲ. ಆದರೆ, ಪಕ್ಕದಲ್ಲಿದ್ದ ‘ಇನ್ಯಾರಿಗೋ’ ಪೆಂಡಾಲ್ ಹಾಕಿ ನೆರಳು ಮಾಡಿದರು. ಕಾಂಗ್ರೆಸ್ ರಿಮೋಟ್ ಯಾರ ಕೈಯಲ್ಲಿದೆ ಎಂದು ಈಗಲಾದರೂ ಅರ್ಥವಾಯಿತೇ’ ಎಂದು ಗೇಲಿ ಮಾಡಿದರು.

‘ಕೇಂದ್ರದ ಪ್ರತಿ ಪೈಸೆ ನೇರ ರೈತರಿಗೆ’: ‘ಕೇಂದ್ರ ಸರ್ಕಾರ ಒಂದು ರೂಪಾಯಿ ನೀಡಿದರೆ ಫಲಾನುಭವಿಗೆ 15 ಪೈಸೆ ಮಾತ್ರ ಸಿಗುತ್ತದೆ’ ಎಂದು ಹಿಂದೆ ಒಬ್ಬ ಪ್ರಧಾನಿ ಹೇಳಿದ್ದರು. ಆದರೆ, ನಾನು ಒಂದು ಪೈಸೆಯೂ ವ್ಯತ್ಯಾಸ ಆಗದಂತೆ ಜನರಿಗೆ ಮುಟ್ಟಿಸಿದ್ದೇನೆ’ ಎಂದು ನರೇಂದ್ರ ಮೋದಿ ಹೇಳಿದರು.

‘ಇಲ್ಲೀಗ ಒಂದು ಬಟನ್ ಒತ್ತಿ ₹16 ಸಾವಿರ ಕೋಟಿಯನ್ನು 8 ಕೋಟಿ ರೈತರ ಖಾತೆಗೆ ಹಾಕಿದ್ದೇನೆ. ಕಾಂಗ್ರೆಸ್ ಸರ್ಕಾರವಿದ್ದಿದ್ದರೆ ನಿಮಗೆ ಕೇವಲ ₹13ಸಾವಿರ ಮಾತ್ರ ಮುಟ್ಟುತ್ತಿತ್ತು. ಈಗಲೇ ನಿಮ್ಮ ಮೊಬೈಲ್ ಮೆಸೇಜುಗಳನ್ನು ನೋಡಿಕೊಳ್ಳಿ. ಕೇಂದ್ರದ ಪ್ರತಿ ಪೈಸೆಯೂ ನಿಮಗೆ ಬಂದಿದೆ’ ಎಂದೂ ಹೇಳಿದರು.

ರೋಡ್ ಶೋ: ಪ್ರಧಾನಿ ಇದಕ್ಕೂ ಮೊದಲು ಸುಮಾರು 10 ಕಿ.ಮೀ ರೋಡ್ ಶೋ ನಡೆಸಿ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿದರು. ‘ಹರ್ ಹರ್ ಮೋದಿ, ಘರ್ ಘರ್ ಮೋದಿ, ಮೋದಿಮೋದಿ...’ ಎಂಬ ಘೋಷಣೆಗಳು ನಿರಂತರ ಮೊಳಗಿದವು.

ಸಿರಿಧಾನ್ಯ ರಂಗೋಲಿ ಬೆರಗು: ವೇದಿಕೆ ಬಳಿ ವಿಶಿಷ್ಟ ಸಿರಿಧಾನ್ಯಗಳ ರಂಗೋಲಿ ಗಮನಸೆಳೆದರು. ಮೋದಿ ವೇದಿಕೆ ಮುಂಭಾಗಕ್ಕೆ ಬಂದು ರಂಗೋಲಿಗಳನ್ನು ಇಣುಕಿ ನೋಡಿದರು. ನಂತರ 9 ತರಹದ ಸಿರಿಧಾನ್ಯಗಳನ್ನು ಮಣ್ಣಿನ ಮಡಕೆಗೆ ಸುರಿದು ಕಾರ್ಯಕ್ರಮ ಉದ್ಘಾಟಿಸಿದರು.

ಭೌಗೋಳಿಕ ಸೂಚ್ಯಂಕ (ಜಿಐ ಟ್ಯಾಗ್) ಹೊಂದಿದ ವಸ್ತುಗಳಿಂದ ಸಿದ್ಧಪಡಿಸಿದ ಶಾಲ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೋದಿ ಅವರಿಗೆ ಹೊದಿಸಿದರು. ಹಳದಿ ಪೇಟಾ, ರೇಣುಕಾದೇವಿ ಯಲ್ಲಮ್ಮನ ಫೋಟೊ, ಏಲಕ್ಕಿ ಹಾರ, ಕಸೂತಿಯಿಂದ ಸಿಂಪಿಗರು ಸಿದ್ಧಪಡಿಸಿದ ಕಸೂತಿ ಪೇಂಟಿಂಗ್ ನೀಡಿದರು.

‘ಕಿಸಾನ್ ಸಮ್ಮಾನ್ ಯೋಜನೆಯ 13ನೇ ಕಂತಿನ ನಿಧಿ ₹16 ಸಾವಿರ ಕೋಟಿಯನ್ನು ಬಟನ್ ಒತ್ತಿ ರೈತರ ಖಾತೆಗೆ ಜಮೆ ಮಾಡಿದರು. ಜಿಲ್ಲೆಯಲ್ಲಿ ಜನಜೀವನ ಮಿಷನ್ ಯೋಜನೆ ಕಾಮಗಾರಿ ಸೇರಿ ಒಟ್ಟು ₹2,240 ಕೋಟಿ ವೆಚ್ಚದ ಕಾಮಗಾರಿಗಳನ್ನು ಉದ್ಘಾಟಿಸಿದರು.

ಡಬಲ್ ಎಂಜಿನ್ ಸರ್ಕಾರದ ಜಪ

ಒಂದನೇ ಪುಟದಿಂದ...

ನೆತ್ತಿ ಸುಡುವ ಬಿಸಿಲಿನಲ್ಲೂ ಮಕ್ಕಳು, ಮಹಿಳೆಯರು, ಹಿರಿಯರು ರಸ್ತೆಯ ಎರಡೂ ಕಡೆ ನಿಂತರು. ‘ಹರ್ ಹರ್ ಮೋದಿ, ಘರ್ ಘರ್ ಮೋದಿ, ಮೋದಿ ಮೋದಿ...’ ಎಂಬ ಘೋಷಣೆಗಳು ನಿರಂತರ ಮೊಳಗಿದವು. ಮಾರ್ಗದುದ್ದಕ್ಕೂ ನಿಂತಿದ್ದ ಬಿಜೆಪಿ ಕಾರ್ಯಕರ್ತರು ಮೋದಿ ಕಾರಿನತ್ತ 15 ಕ್ವಿಂಟಲ್‌ಗಳಷ್ಟು ಪುಷ್ಪವೃಷ್ಟಿ ಮಾಡಿದರು.

ಪೂರ್ಣಕುಂಭ ಹೊತ್ತ ಹಾಗೂ ಕೇಸರಿ ಪೇಟಾ ಧರಿಸಿದ ತಲಾ 10 ಸಾವಿರ ಮಹಿಳೆಯರು ವಿಶಿಷ್ಟವಾಗಿ ಸ್ವಾಗತಿಸಿದರು. ಮೋದಿ ಸ್ವಾಗತಿಸುವ ಭಾಗವಾಗಿ ವಿವಿಧ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ರೋಡ್ ಷೋ ಬಳಿಕ ವೇದಿಕೆ ತಲುಪಲು ಒಂದು ತಾಸು ಸಮಯ ಹಿಡಿಯಿತು.

ವೇದಿಕೆ ಕಾರ್ಯಕ್ರಮದಲ್ಲಿ ಅವರು, ‘ಕಿಸಾನ್ ಸಮ್ಮಾನ್ ಯೋಜನೆಯ 13ನೇ ಕಂತಿನ ನಿಧಿ ₹16 ಸಾವಿರ ಕೋಟಿ ಮೊತ್ತವನ್ನು ಬಟನ್ ಒತ್ತಿ ರೈತರ ಖಾತೆಗೆ ಜಮೆ ಮಾಡುವ ಕಾರ್ಯಕ್ಕೆ ಚಾಲನೆ ನೀಡಿದರು.

ಅಲ್ಲದೆ, ಬೆಳಗಾವಿ ಜಿಲ್ಲೆಯಲ್ಲಿ ಜಲಜೀವನ ಮಿಷನ್ ಯೋಜನೆಯಡಿ ಕೈಗೊಂಡ ₹1,120 ಕೋಟಿ ವೆಚ್ಚದ ವಿವಿಧ ಕಾಮಗಾರಿ, ನವೀಕರಣಗೊಂಡ ರೈಲು ನಿಲ್ದಾಣ, ಡಬ್ಲಿಂಗ್ ಮಾರ್ಗಗಳು ಸೇರಿ ಒಟ್ಟು ₹2,240 ಕೋಟಿ ವೆಚ್ಚದ ಕಾಮಗಾರಿಗಳನ್ನು ಉದ್ಘಾಟಿಸಿದರು.

ಸರ್ಕಾರಿ ಸೇವೆ ಬಂದ್?

ಒಂದನೇ ಪುಟದಿಂದ

ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಗಾಗಿ ನಿವೃತ್ತ ಮುಖ್ಯಕಾರ್ಯದರ್ಶಿ ಕೆ.ಸುಧಾಕರ್ ರಾವ್ ಅಧ್ಯಕ್ಷತೆಯಲ್ಲಿ ಕಳೆದ ನವೆಂಬರ್‌ನಲ್ಲಿ ಏಳನೇ ವೇತನ ಆಯೋಗ ರಚಿಸಲಾಗಿದೆ. ಭವಿಷ್ಯದ ನಿವೃತ್ತಿ ಪಿಂಚಣಿ, ಹೊಸ ಪಿಂಚಣಿ ವ್ಯವಸ್ಥೆಗೆ ತಗಲುವ ವೆಚ್ಚ, ವಾರ್ಷಿಕ ವೇತನ ಬಡ್ತಿಗಳನ್ನು ಗಮನದಲ್ಲಿ ಇಟ್ಟುಕೊಂಡು ವೇತನ ಪರಿಷ್ಕರಣೆ ಮಾಡಲಾಗುತ್ತಿದೆ. ಖಾಲಿ ಇರುವ 2.58 ಲಕ್ಷ ಹುದ್ದೆಗಳ ಉಳಿತಾಯವನ್ನೂ ಪರಿಗಣಿಸಿ ಆಯೋಗ ವರದಿ ನೀಡಿದಲ್ಲಿ, ಅದನ್ನು ಜಾರಿಗೊಳಿಸಿದರೆ ಸರ್ಕಾರಕ್ಕೆ ಹೆಚ್ಚುವರಿಯಾಗಿ ಮೊದಲ ವರ್ಷ ₹ 12 ಸಾವಿರ ಕೋಟಿಯಿಂದ ₹ 18 ಸಾವಿರ ಕೋಟಿ ವೆಚ್ಚವಾಗಲಿದೆ.

ಘೋಷಣೆ, ಪ್ರತಿಭಟನೆಗಳಿಗೆ ತಡೆ

ಮುಷ್ಕರದ ಸಮಯದಲ್ಲಿ ನೌಕರರು ಪ್ರತಿಭಟನೆ, ಉಪವಾಸ ಸತ್ಯಾಗ್ರಹ, ಧರಣಿ ನಡೆಸುವುದು, ಸರ್ಕಾರದ ವಿರುದ್ಧ ಯಾವುದೇ ಘೋಷಣೆ ಮಾಡುವಂತಿಲ್ಲ ಎಂದು ನೌಕರರ ಸಂಘ ನಿರ್ಬಂಧ ವಿಧಿಸಿದೆ.

ಕೆಲಸಕ್ಕೆ ಗೈರುಹಾಜರಾಗುವ ಮೂಲಕ ಶಾಂತಿಯುತವಾಗಿ ಮುಷ್ಕರ ನಡೆಸಬೇಕು. ಸಂಘ ನಿಗದಿಪಡಿಸಿದ ಮಾಹಿತಿ ಒಳಗೊಂಡ ಪೋಸ್ಟರ್‌ಗಳನ್ನು ಮಾತ್ರ ಪ್ರಚುರಪಡಿಸಲು ಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಮಾಹಿತಿ ನೀಡಿದರು.

ಅಹವಾಲು ಸಲ್ಲಿಕೆಗೆ ಇಂದು ಕೊನೆದಿನ

ಏಳನೇ ವೇತನ ಆಯೋಗ ಈಚೆಗೆ ಪ್ರಶ್ನಾವಳಿಗಳನ್ನು ಬಿಡುಗಡೆ ಮಾಡಿ ರಾಜ್ಯ ಸರ್ಕಾರಿ ನೌಕರರು ಮತ್ತು ಸಾರ್ವಜನಿಕರು, ಇಲಾಖೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಅಭಿಪ್ರಾಯಗಳನ್ನು ಆಹ್ವಾನಿಸಿತ್ತು. ಅಹವಾಲು ಸಲ್ಲಿಕೆಯ ಅವಧಿ ಇದೇ 28ಕ್ಕೆ ಕೊನೆಗೊಳ್ಳಲಿದೆ. ಮರು ದಿನದಿಂದಲೇ ನೌಕರರ ಮುಷ್ಕರ ಆರಂಭವಾಗುತ್ತಿದೆ.

ನಾಳೆಯಿಂದ ಧರಣಿ: ಸಾರಿಗೆ ನೌಕರರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ನೀಡಿದ್ದ ಭರವಸೆಯನ್ನು ಈಡೇರಿಸುವ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ ಎಂದು ಆರೋಪಿಸಿ ಸಾರಿಗೆ ನಿಗಮಗಳ ನೌಕರರ ಸಮಾನ-ಮನಸ್ಕರ ವೇದಿಕೆ ನೇತೃತ್ವದಲ್ಲಿ ಸಾರಿಗೆ ನೌಕರರು ಮಾರ್ಚ್ 1ರಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲು ತೀರ್ಮಾನಿಸಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಯಲಿದೆ. ಪ್ರತಿಭಟನೆಯಲ್ಲಿ ನಾಲ್ಕೂ ನಿಗಮಗಳ ನೌಕರರು ಭಾಗವಹಿಸಲಿದ್ದಾರೆ. ಬಸ್ ಸಂಚಾರ ಯಥಾಸ್ಥಿತಿಯಲ್ಲಿ ಇರಲಿದ್ದು ಸರ್ಕಾರದ ನಿರ್ಧಾರ ನೋಡಿಕೊಂಡು ಬಸ್ ಸಂಚಾರ ಸ್ಥಗಿತದ ಬಗ್ಗೆ ತೀರ್ಮಾನಿಸಲಾಗುವುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯ ಅಧ್ಯಕ್ಷ ಚಂದ್ರಶೇಖರ್ ಪತ್ರಿಕಾ ಗೋಷ್ಠಿಯಲ್ಲಿ ಸೋಮವಾರ ಹೇಳಿದರು.

‘ಈ ಹಿಂದೆ ಪ್ರತಿಭಟನೆ ನಡೆಸಿದ್ದಾಗ ಅಂದಿನ ಸಾರಿಗೆ ಸಚಿವರು ಸಂಧಾನ ನಡೆಸಿದ್ದರು. 6ನೇ ವೇತನದ ಆಯೋಗದ ಮಾದರಿಯಲ್ಲೇ ಸಾರಿಗೆ ನೌಕರರಿಗೂ ವೇತನ ನೀಡಲಾಗುವುದು. ಇದನ್ನು ಮೂರು ತಿಂಗಳ ಒಳಗೆ ಈಡೇರಿಸಲಾಗುವುದು ಎಂದು ಭರವಸೆ ನೀಡಿದ್ದರು. ಅದು ಈಡೇರದ ಕಾರಣಕ್ಕೆ ಮತ್ತೆ ಪ್ರತಿಭಟನೆ ನಡೆಸಲಾಗಿತ್ತು. ಆಗ ಸರ್ಕಾರವು ನೌಕರರ ವಜಾ, ವರ್ಗಾವಣೆ, ಅಮಾನತು ಮಾಡಿತ್ತು.

ಜತೆಗೆ, ನೌಕರರ ಹಾಗೂ ಅವರ ಕುಟುಂಬದವರ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿತ್ತು’ ಎಂದು ತಿಳಿಸಿದರು.

‘ಸಾರಿಗೆ ನೌಕರರನ್ನು 7ನೇ ವೇತನ ಆಯೋಗಕ್ಕೆ ಸೇರ್ಪಡೆ ಮಾಡುವುದು ನನ್ನ ಜವಾಬ್ದಾರಿ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಹೇಳಿದ್ದರು. ಆದರೆ, ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪವನ್ನೇ ಮಾಡಿಲ್ಲ’ ಎಂದು ದೂರಿದರು.

‘ಸಾರಿಗೆ ಸಂಸ್ಥೆಯ ಖಾಸಗೀಕರಣ ಮಾಡುವ ಯೋಜನೆ ಕೈಬಿಡಬೇಕು. ಸರ್ಕಾರಿ ನೌಕರರಿ ಸಮಾನ ವೇತನ ನೀಡಬೇಕು. ಕಾರ್ಮಿಕ ಸಂಘಗಳ ಚುನಾವಣೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ಮೋದಿ, ಅಮಿತ್ ಶಾ ಬಿಜೆಪಿ ಚುನಾವಣಾ ಏಜೆಂಟ್: ಸಿದ್ದರಾಮಯ್ಯ

ಬೆಂಗಳೂರು: ‘ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ದೇಶದ ಕೆಲಸ ಮಾಡುವುದನ್ನು ಬಿಟ್ಟು ಬಿಜೆಪಿಯ ಚುನಾವಣಾ ಏಜೆಂಟರಾಗಿ ದುಡಿಯುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿರುವಂತೆ ಮೋದಿ, ಶಾ ಪದೇ ಪದೇ ರಾಜ್ಯಕ್ಕೆ ಭೇಟಿ ನೀಡುತ್ತಿರುವುದನ್ನು ಟೀಕಿಸಿರುವ ಸಿದ್ದರಾಮಯ್ಯ, ‘ರಾಜ್ಯದ ಜನರಿಂದ ದೋಚಿಕೊಂಡ ಸಂಪತ್ತನ್ನು ಜನರ ಕಲ್ಯಾಣಕ್ಕೆ ಖರ್ಚು ಮಾಡುವ ಬದಲು ಚುನಾವಣಾ ಪ್ರಚಾರಗಳಿಗೆ ಖರ್ಚು ಮಾಡುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಕರ್ನಾಟಕದ ರೈಲ್ವೆ, ಹೆದ್ದಾರಿ ಯೋಜನೆಗಳಿಗೆ ಬಹಳ ಅನುದಾನ ಕೊಟ್ಟಿದ್ದೇವೆ. ಅನುದಾನಗಳನ್ನು ಹೆಚ್ಚಿಸಿದ್ದೇವೆ ಎಂದು ಸುಳ್ಳು ಹೇಳಿರುವ ಮೋದಿ, ಜನರ ಕ್ಷಮೆ ಕೇಳಬೇಕು. ರಾಜ್ಯದ ಪಾಲಿನ ಅನುದಾನಗಳನ್ನು ನ್ಯಾಯಯುತವಾಗಿ ಕೊಡಬೇಕು. ನೀವು ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವ ಧೈರ್ಯ ಮಾಡಿಲ್ಲ. ರಸ್ತೆ, ರೈಲ್ವೆ, ತೆರಿಗೆ ಪಾಲಿನ ಕುರಿತು ಮಾತ್ರ ಮಾತನಾಡಿದ್ದೀರಿ. ಯಾಕೆ ಸುಳ್ಳು ಹೇಳಿ ಕರ್ನಾಟಕದ ಮರ್ಯಾದಸ್ಥ ಜನರ ಕಿವಿ ಮೇಲೆ ಹೂ ಇಡಲು ಪ್ರಯತ್ನಿಸುತ್ತೀರಿ? ಈ ಮಟ್ಟದ ಸುಳ್ಳುಗಳು ನಿಮ್ಮ ಪದವಿಗೆ ಯೋಗ್ಯವೆ’ ಎಂದೂ ಮೋದಿಯನ್ನು ಪ್ರಶ್ನಿಸಿದ್ದಾರೆ.

> **2018ರ ಚುನಾವಣೆಯಲ್ಲಿ ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ನೀಡಿದ್ದ 600 ಭರವಸೆಗಳಲ್ಲಿ ಶೇ 10ರಷ್ಟನ್ನೂ ಪೂರೈಸಿಲ್ಲ ಏಕೆ?**
> **ರಣದೀಪ್ ಸಿಂಗ್ ಸುರ್ಜೇವಾಲಾ,** ಕಾಂಗ್ರೆಸ್ ರಾಜ್ಯ ಉಸ್ತುವಾರಿ

‘ವಿಜಯ ಸಂಕಲ್ಪ’ ಯಾತ್ರೆಗೆ ಬಿಜೆಪಿ ಸಜ್ಜು

ನಾಲ್ಕು ಕೋಟಿ ಜನರನ್ನು ತಲುಪಲು ನಾಲ್ಕು ರಥಯಾತ್ರೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪಕ್ಷದ ಪರ ಅಲೆ ಎಬ್ಬಿಸಲು ಬಿಜೆಪಿಯು ಮಾರ್ಚ್ 1 ರಿಂದ ‘ವಿಜಯ ಸಂಕಲ್ಪ ಯಾತ್ರೆ’ ಆರಂಭಿಸಲಿದೆ.

ಮಾ.1 ರಂದು ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮಾ. 2 ರಂದು ಬೆಳಗಾವಿ ಜಿಲ್ಲೆಯ ನಂದಗಢದಲ್ಲಿರುವ ಸಂಗೊಳ್ಳಿ ರಾಯಣ್ಣ ಸ್ಮಾರಕದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಮಾ.3 ರಂದು ಬೀದರ್ ಜಿಲ್ಲೆ ಬಸವಕಲ್ಯಾಣ ಅನುಭವ ಮಂಟಪದ ಸ್ಥಳದಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚಾಲನೆ ನೀಡಲಿದ್ದಾರೆ. ಈವರೆಗೆ ಮಂದಗತಿಯಲ್ಲಿ ನಡೆಸುತ್ತಿದ್ದ ಪ್ರಚಾರಕ್ಕೆ ಹೆಚ್ಚಿನ ಬಿರುಸು ನೀಡಲು ಬಿಜೆಪಿ ಮುಂದಾಗಿದೆ.

‘ಈ ಯಾತ್ರೆಯ ಮೂಲಕ ಸುಮಾರು 4 ಕೋಟಿ ಜನರನ್ನು ತಲುಪುವ ಉದ್ದೇಶ ಹೊಂದಲಾಗಿದೆ. ಬಹುಮತದಿಂದ ಅಧಿಕಾರಕ್ಕೆ ಬರಲು ಇದು ಪೂರಕವಾಗಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸೇರಿ ಹಲವು ಮುಖಂಡರು 4 ಯಾತ್ರೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು’ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದ್ದಾರೆ.

ರಾಜ್ಯ ಮತ್ತು ರಾಷ್ಟ್ರ ಮಟ್ಟದ 50 ಕ್ಕೂ ಹೆಚ್ಚು ಪಕ್ಷದ ನಾಯಕರು ಭಾಗವಹಿಸಲಿದ್ದಾರೆ. ಮಾ. 25 ರಂದು ದಾವಣಗೆರೆಯಲ್ಲಿ ಬೃಹತ್ ರ್‍ಯಾಲಿ ನಡೆಯಲಿದ್ದು, ಅದರಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಭರ್ಜರಿ ಗೆಲುವು ಸಾಧಿಸುವ ಉದ್ದೇಶಕ್ಕೆ ಜನತಾ ಅಲೆ ಎಬ್ಬಿಸಲು ಈ ಯಾತ್ರೆ ನಡೆಯಲಿದೆ ಎಂದರು.

ನಾಲ್ಕು ರಥಗಳು ಏನೇನು ಹೊಂದಿವೆ?

‘ನಾಲ್ಕು ರಥಗಳ ಲೈಲ್ಯಾಂಡ್ ಚಾಸಿಯನ್ನು ಪ್ರಕಾಶ್ ರೋಡ್‌ಲೈನ್ಸ್‌ನವರು ನಿರ್ಮಿಸಿದ್ದಾರೆ. ಪ್ರತಿ ರಥವು 30 ಅಡಿ ಉದ್ದ, 8 ಅಡಿ ಅಗಲದ್ದಾಗಿದೆ. ರಥದಲ್ಲಿ ನಿಂತು ಭಾಷಣ ಮಾಡಲು ಆಕರ್ಷಕ ಕೆನೊಪಿ ರಚಿಸಲಾಗಿದೆ. ಬಸ್‌ನ ಒಳಗೆ 7 ಸೀಟುಗಳಿವೆ, ಹೋಂ ಥಿಯೇಟರ್, 32 ಇಂಚಿನ ಟಿವಿ, ಚಾಲಕನ ಜತೆ ಮಾತನಾಡಲು ಇಂಟರ್‌ಕಾಂ ವ್ಯವಸ್ಥೆ, ಎಲ್‌ಇಡಿ ಡಿಸ್‌ಪ್ಲೇ ಮತ್ತಿತರ ವ್ಯವಸ್ಥೆ ಇದೆ ’ಎಂದು ರವಿಕುಮಾರ್ ಹೇಳಿದರು.

ಯಾತ್ರೆಯ ಮುಖ್ಯಾಂಶ	
ರಥಗಳು	4 (ತಂಡಗಳು)
ವಿಧಾನಸಭಾ ಕ್ಷೇತ್ರಗಳು	224
ಎಷ್ಟು ಕಿ.ಮೀ	8,000
ರ್‍ಯಾಲಿಗಳು	80
ರೋಡ್ ಶೋ	150

ಅಭ್ಯರ್ಥಿ ಆಯ್ಕೆ ಗೊಂದಲಕ್ಕೆ ಸದ್ಯದಲ್ಲೇ ತೆರೆ: ಎಚ್‌ಡಿಕೆ

ಹಾಸನ ಕ್ಷೇತ್ರ: ದೇವೇಗೌಡರು ನಿರ್ಧಾರ ಕೈಗೊಳ್ಳುವ ಸ್ಥಿತಿಯಲ್ಲಿಲ್ಲ, ಒಟ್ಟಿಗೆ ಕೂತು ನಿರ್ಧರಿಸುತ್ತೇವೆ

ಪ್ರಜಾವಾಣಿ ವಾರ್ತೆ

ರಾಮನಗರ: ಹಾಸನ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆಯ್ಕೆ ಕುರಿತ ಗೊಂದಲಗಳಿಗೆ ಶೀಘ್ರದಲ್ಲೇ ತೆರೆ ಎಳೆಯುತ್ತೇವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚನ್ನಪಟ್ಟಣದಲ್ಲಿ ಸೋಮವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಹಾಸನದಲ್ಲಿ ಅಭ್ಯರ್ಥಿ ಆಗಬೇಕು ಎಂದು ಆಸೆ ಇರುವವರು ಗೊಂದಲ ಸೃಷ್ಟಿಸುತ್ತಿದ್ದಾರೆ. ಅದಕ್ಕೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದರು.

‘ಸದ್ಯದ ಆರೋಗ್ಯ ಸ್ಥಿತಿಯಲ್ಲಿ ದೇವೇಗೌಡರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಎಲ್ಲರೂ ಒಟ್ಟಾಗಿ ಕೂತು ನಿರ್ಧಾರ ಮಾಡುತ್ತೇವೆ. ಸದ್ಯದಲ್ಲಿಯೇ ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಆಗಲಿದ್ದು, ಅದರಲ್ಲಿ ಹಾಸನ ಕ್ಷೇತ್ರದ ಅಭ್ಯರ್ಥಿಯ ಹೆಸರೂ ಇರಲಿದೆ’ ಎಂದು ಸ್ಪಷ್ಟಪಡಿಸಿದರು.

ಭವಾನಿ ರೇವಣ್ಣ ಪರವಾಗಿ ಬೆಂಬಲಿಗರು ಬಲಪ್ರದರ್ಶನ ನಡೆಸಿದ ಕುರಿತ ಪ್ರಶ್ನೆಗೆ ‘ನಿನ್ನೆ ಸ್ವರೂಪ್ ಬೆಂಬಲಿಗರು ಮಾಡಿದ್ದರು. ಇವತ್ತು ಭವಾನಿ ರೇವಣ್ಣ ಪರವಾಗಿ ಕೆಲವರು ಬಲ ಪ್ರದರ್ಶಿಸಿದ್ದಾರೆ’ ಎಂದರು.

ಮೊದಲು ಕುಟುಂಬದ ಗೊಂದಲ ಸರಿಪಡಿಸಿಕೊಳ್ಳಲಿ ಎಂಬ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಟೀಕೆಗೆ ‘ನಮ್ಮ ಮನೆಯಲ್ಲಿ ಆರು ಜನರಿದ್ದೇವೆ. ಜೋಶಿ ಅವರಿಗೆ ಇರುವುದು ಒಬ್ಬನೇ ತಮ್ಮ. ಅವರನ್ನೇ ಸರಿಯಾಗಿ ಇಟ್ಟುಕೊಂಡಿಲ್ಲ. ಸುಮ್ನೆ ಕೆಣಕಿ ಅವರ ಬುಡಕ್ಕೆ ತಂದುಕೊಳ್ಳುತ್ತಾರೆ’ ಎಂದು ತಿರುಗೇಟು ನೀಡಿದರು.

‘ಯಾರು ಮಾಡದ ವಿಮಾನ ನಿಲ್ದಾಣ ಇವರೇನು ಮಾಡಿಲ್ಲ. ಮೋದಿ ರಾಜ್ಯಕ್ಕೆ ಇನ್ನೂ 10–20 ಸಲ ಬರಬಹುದು. ಅದಕ್ಕೆ ನಾನು ಗಮನ ಕೊಡುವುದಿಲ್ಲ’ ಎಂದು ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಕುರಿತು ಪ್ರತಿಕ್ರಿಯಿಸಿದರು.

> **ಚನ್ನಪಟ್ಟಣದ ಅಭ್ಯರ್ಥಿಯಾಗಿ ಇದು ನನ್ನ ಕಡೆಯ ಚುನಾವಣೆ. ನನಗೂ ರಾಜಕೀಯ ವಿಶ್ರಾಂತಿ ಅಗತ್ಯವಿದೆ. ಮುಂದೆ ಸ್ಥಳೀಯ ಕಾರ್ಯಕರ್ತರಿಗೇ ಟಿಕೆಟ್ ನೀಡುತ್ತೇನೆ.**
> **ಎಚ್.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

‘ರಾಜಕೀಯ ಆತ್ಮಹತ್ಯೆಯತ್ತ ರೇವಣ್ಣ ಕುಟುಂಬ’

ಹಾಸನ: ‘ಶಾಸಕ ಎಚ್.ಡಿ.ರೇವಣ್ಣ ಹಾಗೂ ಅವರ ಕುಟುಂಬದವರು ರಾಜಕೀಯ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದಾರೆ. ಜಿಲ್ಲೆಯಲ್ಲಿ ಅವರು ಮಾಡುತ್ತಿರುವ ರಾಜಕೀಯ ಸರಿಯಿಲ್ಲ’ ಎಂದು ಶಾಸಕ ಎ.ಟಿ. ರಾಮಸ್ವಾಮಿ ಪ್ರತಿಪಾದಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಹಾಸನದಲ್ಲಿ ಗುಲಾಮಗಿರಿ ಇದೆ. ಕೈಕಟ್ಟಿ ನಿಲ್ಲಬೇಕು. ಉಸಿರು ಬಿಡುವುದೂ ಕಷ್ಟ. ಜಿಲ್ಲೆಯಲ್ಲಿ ಬೆಳೆದಿರುವ ಈ ರಾಜಕೀಯ ಕಳೆಯನ್ನು ಬುಡ ಸಮೇತ ಕಿತ್ತು ಹಾಕಬೇಕು. ಜನ ಸ್ವಾಭಿಮಾನಿಗಳಾಗಬೇಕು’ ಎಂದರು.

‘ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಉದ್ಘಾಟನೆ ಕಾರ್ಯಕ್ರಮಕ್ಕೆ ಆಹ್ವಾನಿಸಲು ಕಳೆದ ತಿಂಗಳು ಸಂಸದ ಎಚ್.ಡಿ.ದೇವೇಗೌಡರ ಮನೆಗೆ ಹೋಗಿದ್ದೆ. ಆಗ ನನ್ನ ಕೈ ಹಿಡಿದು, ರಾಮಸ್ವಾಮಿಯವರೇ ನಿಮಗೆಲ್ಲ ಏನೇನು ಕಿರುಕುಳ ಕೊಡುತ್ತಿದ್ದಾರೆ ಗೊತ್ತು. ನನ್ನ ಜೀವ ಇರುವವರೆಗೆ ನಿಮ್ಮನ್ನು ರಕ್ಷಿಸುತ್ತೇನೆ ಅಂದಿದ್ದರು. ಆದರೆ, ಅವರನ್ನೂ ಕಾರ್ಯಕ್ರಮಕ್ಕೆ ಬರದಂತೆ ಮಾಡಿದರು’ ಎಂದು ವಿಷಾದಿಸಿದರು.

‘ಯಾರ ಹೆಸರು, ತಪಸ್ಸಿನಿಂದ ಅವರು ಮೇಲೆ ಬಂದರೋ, ಅದೇ ಏಣಿಯನ್ನು ಒದ್ದು ಬಿಸಾಕಿದರು. ನೋವು ಕೊಟ್ಟರು. ಇವತ್ತು ಆ ಹಿರಿಯ ಜೀವ ನೋವಿನಿಂದ ನರಳಾಡುತ್ತಿದೆ’ ಎಂದರು.

‘ಶಾಸಕಾಂಗ ಪಕ್ಷದ ಸಭೆಗೆ ಬಂದಿಲ್ಲ ಎಂದು ನಾಯಕರಾದ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದರು. ಹಾಜರಾತಿ ಪುಸ್ತಕ ನೋಡಲಿ. ಅವರು ಸತ್ಯವನ್ನು ಮರೆ ಮಾಚಬಾರದು. ಮತ್ತೆ ಗೆದ್ದು ವಿಧಾನಸಭೆಗೆ ಹೋಗುತ್ತೇನೆ. ಕ್ಷೇತ್ರವನ್ನು ಜನ ತೀರ್ಮಾನಿಸುತ್ತಾರೆ’ ಎಂದರು.

ಭವಾನಿ ಪರ ಬೆಂಬಲಿಗರ ಶಕ್ತಿ ಪ್ರದರ್ಶನ

ಹಾಸನ: ನಗರದಲ್ಲಿ ಭಾನುವಾರ ಎಚ್.ಪಿ. ಸ್ವರೂಪ್ ಬೆಂಬಲಿಗರು ನಡೆಸಿದ್ದ ಶಕ್ತಿ ಪ್ರದರ್ಶನಕ್ಕೆ ಪ್ರತಿಯಾಗಿ, ಸೋಮವಾರ ಭವಾನಿ ರೇವಣ್ಣ ಬೆಂಬಲಿಗರೂ ತಮ್ಮ ಶಕ್ತಿ ಪ್ರದರ್ಶನ ನಡೆಸಿದರು.

ನಗರದ ಸಂಸದರ ನಿವಾಸದ ಎದುರು ಸೇರಿದ್ದ ಕಾರ್ಯಕರ್ತರು, ಭವಾನಿ ಅವರ ಭಾವಚಿತ್ರ ಹಿಡಿದು, ದೇವೇಗೌಡರು, ರೇವಣ್ಣ, ಭವಾನಿ, ಪ್ರಜ್ವಲ್ ಪರ ಘೋಷಣೆ ಕೂಗಿದರು. ನಗರದ ಆರ್‌ಸಿ ರಸ್ತೆಯ ಮೂಲಕ ಸಾಗಿ, ಜಿಲ್ಲಾ ಪಂಚಾಯಿತಿ ವೃತ್ತದಲ್ಲಿ ಪಟಾಕಿ ಸಿಡಿಸಿದರು. ‘ಭವಾನಿ ಅಥವಾ ರೇವಣ್ಣ ಅವರನ್ನೇ ಹಾಸನದಿಂದ ಕಣಕ್ಕಿಳಿಸಬೇಕು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಾಸನ ಕ್ಷೇತ್ರ ಕೈತಪ್ಪಿದೆ. ಮತ್ತೆ ಪಕ್ಷ ಗೆಲ್ಲಬೇಕು. ರೇವಣ್ಣ ಕುಟುಂಬದಿಂದ ಮಾತ್ರ ಗೆಲ್ಲಲು ಸಾಧ್ಯ’ ಎಂದು ನಗರಸಭೆ ಸದಸ್ಯ ಗಿರೀಶ್ ಚನ್ನವೀರಪ್ಪ ಆಗ್ರಹಿಸಿದರು.

‘ಪಂಥಾಹ್ವಾನ ನೀಡಿರುವ ಪ್ರೀತಂ ಗೌಡರನ್ನು ಮಣಿಸಲು ದೇವೇಗೌಡರ ಕುಟುಂಬದವರೇ ಸ್ಪರ್ಧಿಸಬೇಕು’ ಎಂದು ಮುಖಂಡ ಜಯರಾಂ ಒತ್ತಾಯಿಸಿದರು.

ಭಾರತ ಸರ್ಕಾರ
ರಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ
ಫಾರ್ಮಾಸ್ಯೂಟಿಕಲ್ಸ್ ಇಲಾಖೆ
प्रधानमंत्री भारतीय जन औषधि परियोजना
ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಲಭಿಸುವ
ಗುಣಮಟ್ಟದ ಜನರಿಕ್ ಔಷಧಿಗಳು
ಜನ ಔಷಧಿಗಳಿಂದಾಗ ಕಳೆದ 8 ವರ್ಷಗಳಲ್ಲಿ ಜನ ಸಾಮಾನ್ಯರಿಗೆ ಸುಮಾರು ರೂ.20,000 ಕೋಟಿ ಉಳಿತಾಯವಾಗಿದೆ
1759 ಉತ್ಕೃಷ್ಟ ಗುಣಮಟ್ಟದ ಔಷಧಿಗಳು
280 ಸರ್ಜಿಕಲ್ ಉಪಕರಣಗಳು
ಸುಮಾರು 9000+ ಕೇಂದ್ರಗಳು
50% ರಿಂದ 90% ವರೆಗೆ ಕನಿಷ್ಠ ದರಗಳು
janaushadhi.gov.in
ನಿಮ್ಮ ಸಮೀಪದ ಜನ ಔಷಧಿ ಕೇಂದ್ರ ತಿಳಿದುಕೊಳ್ಳಲು, ಜನ ಔಷಧಿ ಸುಗಮ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿರಿ ಅಥವಾ 1800 180 8080 ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಿ.
ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

ಕ್ಷೇಮ ಕುಶಲ

ಸ್ವಚ್ಛತೆಯಲ್ಲಿದೆ ಆರೋಗ್ಯ

ಡಾ. ಕಿರಣ್ ವಿ. ಎಸ್.

ಮಾನವ ಸಮಾಜಜೀವಿ ಎನ್ನುವ ಮಾತನ್ನು ಕೇಳಿರುತ್ತೇವಾದರೂ ಅದರ ಸಂಪೂರ್ಣ ಅರ್ಥವ್ಯಾಪ್ತಿಯನ್ನು ಅರಿಯುವ ಪ್ರಯತ್ನವನ್ನು ಹೆಚ್ಚು ಮಂದಿ ಮಾಡಿರುವುದಿಲ್ಲ. ಒಂದು ಬೃಹತ್ ಯಂತ್ರದ ಸಾವಿರಾರು ಬಿಡಿಭಾಗಗಳು ಇಡೀ ಯಂತ್ರದ ಕಾರ್ಯಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತವೆ. ಅಂತೆಯೇ, ಯಂತ್ರದ ಕೆಲಸ ಏರುಪೇರಾದಾಗ ಕೆಲವು ಭಾಗಗಳ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ. ನಮ್ಮ ಸಮಾಜವೂ ಇಂತಹ ಒಂದು ಬೃಹತ್ ಜೀವಂತ ಯಂತ್ರ. ಪ್ರತಿಯೊಬ್ಬ ಪ್ರಜೆಯೂ ಇದರ ಬಿಡಿಭಾಗಗಳು. ಸಮಾಜದ ಆರೋಗ್ಯ ಪ್ರತಿಯೊಬ್ಬ ಪ್ರಜೆಯ ಮೇಲೂ ಹಲವಾರು ಸ್ತರಗಳಲ್ಲಿ ಪರಿಣಾಮ ಬೀರುತ್ತದೆ. ಹೀಗಾಗಿ, ಸಮಷ್ಟಿಯ ಆರೋಗ್ಯದ ಹಿತದೃಷ್ಟಿಯಿಂದ ಸಮಾಜದ ನೈರ್ಮಲ್ಯವನ್ನು ಕಾಪಾಡುವುದು ಪ್ರಜೆಗಳ ಆದ್ಯ ಕರ್ತವ್ಯವಾಗುತ್ತದೆ.

ಅಭಿವೃದ್ಧಿ ಹೊಂದಿರುವ ದೇಶಕ್ಕೂ, ಅಭಿವೃದ್ಧಿಶೀಲ ದೇಶಕ್ಕೂ ಇರುವ ವ್ಯತ್ಯಾಸ ಕೇವಲ ಹಣಕಾಸಿನದ್ದಲ್ಲ. ಬದಲಿಗೆ ಸಮಾಜ ಮತ್ತು ಅದರ ಪ್ರಜೆಗಳ ನಡುವಿನ ಪರಸ್ಪರ ಗೌರವ ಯಾವ ಮಟ್ಟದಲ್ಲಿದೆ ಎನ್ನುವುದು. ಇದರ ಒಂದು ಸೂಚ್ಯಂಕ ಪ್ರಜೆಗಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಯಾವ ರೀತಿಯಲ್ಲಿ ನೋಡಿಕೊಳ್ಳುತ್ತಾರೆ ಎನ್ನುವುದರಲ್ಲಿದೆ. ಈ ವಿಷಯದಲ್ಲಿ ನಾವು ದಶಕಗಳಿಂದ ಹಿಂದುಳಿದಿದ್ದೇವೆ. ಪ್ರಧಾನ ಮಂತ್ರಿಗಳ ಸ್ವಚ್ಛ ಭಾರತ ಆಂದೋಲನ ಈ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಿದೆ. ಆದರೂ ಸಾರ್ವಜನಿಕ ನೈರ್ಮಲ್ಯದ ವಿಷಯದಲ್ಲಿ ಸಮಾಜ ಪ್ರಗತಿ ಸಾಧಿಸುವುದು ಬಹಳವಿದೆ.

ಸಾರ್ವಜನಿಕ ಸ್ಥಾನಗಳ ಸ್ವಚ್ಛತೆ ಆಯ್ಕೆಯಲ್ಲ; ಅದು ಪ್ರತಿಯೊಬ್ಬರೂ ಪಾಲಿಸಲೇಬೇಕಾದ ಜವಾಬ್ದಾರಿ. ವೈಯಕ್ತಿಕ ಆರೋಗ್ಯದ ಮೇಲೆ ಸಮಾಜದ ಸ್ವಚ್ಛತೆ ಬಹಳ ಪರಿಣಾಮ ಬೀರುತ್ತದೆ. 1994ರಲ್ಲಿ ಗುಜರಾತಿನ ಸೂರತ್ ನಗರದಲ್ಲಿ ಪ್ಲೇಗ್‌ರೋಗ ವ್ಯಾಪಿಸಿತು. ಭಾರತದ ವಜ್ರಗಳ ಮಾರುಕಟ್ಟೆ ಎಂದೇ ಖ್ಯಾತವಾದ ಸೂರತ್, ವೈಯಕ್ತಿಕ ಮಟ್ಟದಲ್ಲಿ ಸಿರಿವಂತರ ನಗರವಾದರೂ, ಸಮಷ್ಟಿಯ ಸ್ವಚ್ಛತೆಯ ದೃಷ್ಟಿಯಿಂದ ತೀರಾ ಕೆಟ್ಟ ಪರಿಸ್ಥಿತಿಯಲ್ಲಿತ್ತು. ಮಧ್ಯಕಾಲೀನ ಯುಗದಲ್ಲಿ ಯುರೋಪಿನ ಹಲವಾರು ದೇಶಗಳನ್ನು ಕಂಗೆಡಿಸಿದ್ದ ಪ್ಲೇಗ್‌ರೋಗ, ಕಾಲಾಂತರದಲ್ಲಿ ಯುರೋಪು ಅಭಿವೃದ್ಧಿಯಾಗುತ್ತಿದ್ದಂತೆ ಇಲ್ಲವಾಯಿತು. ಆದರೂ, ಐತಿಹಾಸಿಕವಾಗಿ ಆ ರೋಗ ಸಾವು-ನೋವುಗಳ ಸಮಾನಾರ್ಥಕವಾಗಿ ಬಳಕೆಯಾಗುತ್ತದೆ. ಈ ಕಾರಣದಿಂದ ಸೂರತ್ ನಗರದ ಪ್ಲೇಗ್‌ರೋಗ ಜಗತ್ತಿನ ತಾತ್ಸಾರದ ಕಣ್ಣಿಗೆ ಗುರಿಯಾಯಿತು. ಇಡೀ ದೇಶಕ್ಕೆ ಜಾಗತಿಕವಾಗಿ ಕೆಟ್ಟ ಹೆಸರು ತಂದಿತ್ತ ಆ ಘಟನೆಯಿಂದ ಎಚ್ಚೆತ್ತ ಸೂರತ್ ನಗರದ ಅಧಿಕಾರಿಗಳು ಸಾಮಾಜಿಕ ಸ್ವಚ್ಛತೆಯ ಬಗ್ಗೆ ತೀವ್ರ ಕಾಳಜಿ ವಹಿಸಿದರು. ಈ ದಿನ ಭಾರತದ ಸ್ವಚ್ಛ ನಗರಗಳಲ್ಲಿ ಒಂದೆಂದು ಸೂರತ್ ಹೆಸರಾಗಿದ್ದರೂ, ಅದರೊಡನೆ ಜೋಡಿಸಿಕೊಂಡ ಪ್ಲೇಗ್ ಕುಖ್ಯಾತಿ ಮೂರು ದಶಕಗಳಾದರೂ ಅಳಿದಿಲ್ಲ. ಪರಿಸರ ಸ್ವಚ್ಛವಾಗಿಲ್ಲದಿದ್ದರೆ ಅದರೊಡನೆ ವಾಸಿಸುವ ಪ್ರತಿಯೊಬ್ಬರೂ ವೈಯಕ್ತಿಕ ಬೆಲೆ ತೆರಬೇಕಾಗುತ್ತದೆ.

ಕೋವಿಡ್-19 ಆರಂಭವಾದಾಗ ವೈಯಕ್ತಿಕ ಮತ್ತು ಪರಿಸರದ ಸ್ವಚ್ಛತೆಯ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಿತ್ತು. ಈ ಜಾಗೃತಿ ಹಾಗೆಯೇ ಉಳಿದು, ಜನರ ಜೀವನಶೈಲಿಯಲ್ಲಿ ಸಮ್ಮಿಳಿತವಾದರೆ ಅದು ಕೋವಿಡ್-19 ಕಾರ್ಮೋಡದ ನಡುವಿನ ಬೆಳ್ಳಿಗೆರೆ ಎಂದು ತಜ್ಞರು ಬಣ್ಣಿಸಿದ್ದರು. ದುರದೃಷ್ಟವಶಾತ್ ಸಾರ್ವಜನಿಕ ನೆನಪು ಎನ್ನುವುದು ಅತ್ಯಂತ ಕ್ಷೀಣ ಎನ್ನುವುದನ್ನು ನಮ್ಮ ಜನರು ಮತ್ತೊಮ್ಮೆ ಸಿದ್ಧಮಾಡಿದರು. ಸಾರ್ವಜನಿಕ ಸ್ಥಳಗಳನ್ನು ಕೊಳಕು ಮಾಡುವುದು, ಸಿಕ್ಕಿದೆಡೆಯೆಲ್ಲ ಕಸ ಎಸೆಯುವುದು, ದಾರಿಯಲ್ಲಿ ಉಗುಳುವುದು, ಸಾಕುನಾಯಿಗಳನ್ನು ಸಂಚಾರಕ್ಕೆ ಕರೆದೊಯ್ಯುವಾಗ ಎಲ್ಲೆಂದರಲ್ಲಿ ಅವುಗಳ ಮಲ-ಮೂತ್ರ ವಿಸರ್ಜಿಸುವಂತೆ ಮಾಡುವುದು, ರಸ್ತೆಯಲ್ಲಿ ಹೋಗುವಾಗ ಖಾಲಿ ಸಿಕ್ಕ ಜಾಗಗಳಲ್ಲಿ ಮೂತ್ರ ವಿಸರ್ಜಿಸುವುದು - ಇಂತಹ ಕ್ರಿಯೆಗಳು ನಾಚಿಕೆಯ ವಿಷಯಗಳೆಂದು ಅನ್ನಿಸದ ಜನರೂ ಇದ್ದಾರೆ. ಆದರೆ ಇಂತಹವರಲ್ಲಿ ಬಹುತೇಕರು ತಮ್ಮ ಸ್ವಂತ ಮನೆಗಳನ್ನು ಬಹಳ ಸ್ವಚ್ಛವಾಗಿ ಇರಿಸಿಕೊಳ್ಳುತ್ತಾರೆ. ಅಂದರೆ, ಇವರುಗಳಿಗೆ ಸ್ವಚ್ಛತೆಯ ಅರಿವಿಲ್ಲ ಎಂದಲ್ಲ; ತಮ್ಮ ಸಮಾಜದ ಬಗ್ಗೆ ಗೌರವವಿಲ್ಲ ಎಂದೇ ಎಣಿಸಬೇಕು.

ಸದ್ಯದ ಸಮಾಜ ಬಹಳ ಸಂಕೀರ್ಣವಾಗಿದೆ. ಅನೇಕ ಸ್ಥಿತ್ಯಂತರಗಳ ಮೂಲಕ ಹಾದು ಹೋಗುತ್ತಿರುವ ಜನರು ಹೊಸ ಜೀವನಶೈಲಿಗಳಿಗೆ ಹೊಂದಿಕೊಳ್ಳುತ್ತಿದ್ದಾರೆ. ಜನರ ನಡುವೆ ಪರಸ್ಪರ ಅವಲಂಬನೆ ಹೆಚ್ಚಾದಷ್ಟೂ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿರುವುದು ಬಹಳ ಮುಖ್ಯವಾಗುತ್ತದೆ. ಒಂದು ಉದಾಹರಣೆ ನೋಡುವುದಾದರೆ, ದಿನನಿತ್ಯದ ಊಟವನ್ನು ಹೊರಗಿನಿಂದ ಮನೆಗೆ ತರಿಸಿಕೊಂಡು ಸೇವಿಸುವವರ ಸಂಖ್ಯೆ ಸಾಕಷ್ಟು ಬೆಳೆದಿದೆ.

ಈ ರೀತಿಯ ಆಹಾರವನ್ನು ಸಿದ್ಧಪಡಿಸುವ ಸ್ಥಳಗಳು, ಅದನ್ನು ತಯಾರಿಸುವ ಬಾಣಸಿಗರು, ಅದನ್ನು ಪ್ಯಾಕ್ ಮಾಡುವ ಕೆಲಸಗಾರ, ಅದನ್ನು ಹೊತ್ತು ತಂದು ನಮ್ಮ ಮನೆಗೆ ತಲುಪಿಸುವ ವ್ಯಕ್ತಿ - ಇವೆಲ್ಲದರ ಸ್ವಚ್ಛತೆಯ ಮಟ್ಟ ಸಮಂಜಸವಾಗಿದ್ದರೆ ಮಾತ್ರ ಆ ಆಹಾರ ನಮ್ಮ ಆರೋಗ್ಯವನ್ನು ಕಾಯಬಲ್ಲದು. ಇಲ್ಲವಾದರೆ, ಅದೇ ನಮ್ಮ ಅನಾರೋಗ್ಯದ ಕಾರಣವಾದೀತು. ಈ ಪ್ರತಿಯೊಂದು ಹಂತವನ್ನೂ, ಪ್ರತಿದಿನವೂ ಪರೀಕ್ಷಿಸುವ ಸಾಧ್ಯತೆಗಳು ಇರುವುದಿಲ್ಲ. ಹೀಗಾಗಿ, ಇಡೀ ಸಮಾಜವೇ ತನ್ನ ನೈರ್ಮಲ್ಯದ ಮಟ್ಟವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ಏರಿಸಿಕೊಳ್ಳಬೇಕು. ಈ ಕಾರಣಕ್ಕೆ ಸಮಷ್ಟಿಯ ಪ್ರಾಮಾಣಿಕತೆಯ ಮಟ್ಟ ಮೇಲಿನ ಸ್ತರದಲ್ಲಿರಬೇಕು. ಸ್ವಚ್ಛತೆಯನ್ನು ಕಾಪಾಡಿಕೊಳ್ಳದಿದ್ದರೆ ಸಮಾಜದ ಪ್ರಗತಿ ಕುಂಠಿತವಾಗುತ್ತದೆ.

ಸ್ವಚ್ಛ ಪರಿಸರವೆನ್ನುವುದು ಕೇವಲ ದೈಹಿಕ ಆರೋಗ್ಯಕ್ಕೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಅದು ಮಾನಸಿಕ ನೆಮ್ಮದಿಗೂ ಕಾರಣ. ಮನೆಯಿಂದ ಹೊರಗೆ ಹೆಜ್ಜೆ ಇಟ್ಟ ಕೂಡಲೇ ಹೊಲಸನ್ನು ಕಾಣುವುದು ಯಾರಿಗೂ ಸಹ್ಯವಲ್ಲ. ಎಲ್ಲೆಂದರಲ್ಲಿ ಎಸೆದ ಕಸ, ಪ್ರಾಣಿಗಳ ಮಲಮೂತ್ರಗಳ ಮೇಲೆ ತಪ್ಪಿ ಹೆಜ್ಜೆ ಇಟ್ಟಾಗ ಆಗುವ ಮಾನಸಿಕ ಯಾತನೆ ಅಷ್ಟಿಷ್ಟಲ್ಲ. ಇದು ನಾಗರಿಕ ಸಮಾಜದ ಲಕ್ಷಣವೂ ಅಲ್ಲ. ವೈಯಕ್ತಿಕ ನೈರ್ಮಲ್ಯದಷ್ಟೇ ಸಮಷ್ಟಿಯ ಸ್ವಚ್ಛತೆಯೂ ಮುಖ್ಯವೆಂದು ಮನಗಾಣುವವರೆಗೆ ಆರೋಗ್ಯಕರ ಸಮಾಜದ ನಿರ್ಮಾಣ ಅಸಾಧ್ಯ. ❖

ಕಾಡದಿರಲಿ ರಕ್ತಹೀನತೆ

ಡಾ. ವಿನಯ ಶ್ರೀನಿವಾಸ್

ರಕ್ತಹೀನತೆ ಎಲ್ಲ ವಯೋಮಾನದವರನ್ನೂ ಕಾಡಬಹುದಾದಂತಹ ಆರೋಗ್ಯಸಮಸ್ಯೆ. ಮಹಿಳೆಯರಲ್ಲಿ ಮತ್ತು ಹದಿಹರೆಯದ ಹೆಣ್ಣುಮಕ್ಕಳಲ್ಲಿ ಇದು ಸ್ವಲ್ಪ ಹೆಚ್ಚೇ ಎನ್ನಬಹುದು. ಸಮಸ್ಯೆ ಸೌಮ್ಯಸ್ವರೂಪದಿದ್ದಾಗ ಗುಣಲಕ್ಷಣಗಳು ವ್ಯಕ್ತಿಯನ್ನು ಹೆಚ್ಚು ಬಾಧಿಸದೆ ಇರುವುದರಿಂದ ಇದು ಪತ್ತೆಯಾಗದೆಯೇ ಉಳಿಯುವ ಸಂಭವವೂ ಇದೆ. ಅಷ್ಟೇ ಅಲ್ಲ, ಒಮ್ಮೊಮ್ಮೆ ಅದರ ವೈವಿಧ್ಯ ಗುಣಲಕ್ಷಣಗಳು ವೈದ್ಯರನ್ನು ಬೇರಾವುದೋ ಆರೋಗ್ಯ ಸಮಸ್ಯೆ ಎಂದು ಯೋಚಿಸುವಂತೆಯೂ ಮಾಡಬಹುದು. ಹಾಗಾಗಿಯೇ ಒಮ್ಮೆ ಸರಳ ರಕ್ತಪರೀಕ್ಷೆಯಿಂದ ರಕ್ತದ ಹಿಮೊಗ್ಲೋಬಿನ್ ಅಂಶದ ಪ್ರಮಾಣವನ್ನು ತಿಳಿಯುವುದು ಸೂಕ್ತ.

ರಕ್ತದ ಕೆಂಪುರಕ್ತಕಣದಲ್ಲಿರುವ 'ಹಿಮೊಗ್ಲೋಬಿನ್' ಎಂಬ ಅಂಶವು ಶರೀರದ ಎಲ್ಲ ಅಂಗಾಂಶಗಳಿಗೆ ಆಮ್ಲಜನಕವನ್ನು ಪೂರೈಸುವ ಮುಖ್ಯ ಜವಾಬ್ದಾರಿಯ ಕೆಲಸವನ್ನು ನಿರ್ವಹಿಸುತ್ತದೆ. ಜೀವಕೋಶಗಳ ಕಾರ್ಯಕ್ಷಮತೆಗೆ ಆಮ್ಲಜನಕ ಅತ್ಯವಶ್ಯ. ಜೀವಕೋಶಗಳಿಗೆ ಆಮ್ಲಜನಕದ ಪೂರೈಕೆಯಲ್ಲಿ ವ್ಯತ್ಯಯವಾದಾಗ ಅವುಗಳ ಕಾರ್ಯಕ್ಷಮತೆ ಕುಗ್ಗುತ್ತದೆ. ಹಾಗಾಗಿಯೇ ರಕ್ತಹೀನತೆಯು ಶರೀರದ ಎಲ್ಲ ಅಂಗಾಂಗ ವ್ಯವಸ್ಥೆಗಳ ಮೇಲೆಯೂ ಪರಿಣಾಮ ಬೀರುತ್ತದೆ.

ಸಾಮಾನ್ಯವಾಗಿ ಪುರುಷರಲ್ಲಿ ಪ್ರತಿ ಡೆಸಿ ಲೀಟರ್ ರಕ್ತದಲ್ಲಿ 14ರಿಂದ 18 ಹಾಗೂ ಮಹಿಳೆಯರಲ್ಲಿ 12ರಿಂದ 16 ಗ್ರ್ಯಾಮ್ ಹಿಮೊಗ್ಲೋಬಿನ್ ಇರುತ್ತದೆ. ಈ ಹಿಮೊಗ್ಲೋಬಿನ್ ಅಂಶವು ವ್ಯಕ್ತಿಯ ವಯಸ್ಸು ಮತ್ತು ಲಿಂಗಕ್ಕೆ ಅನುಗುಣವಾಗಿ ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಾಗುವುದನ್ನು ರಕ್ತಹೀನತೆ ಎಂದು ಕರೆಯುತ್ತೇವೆ.

ಮುಖ್ಯ ಕಾರಣಗಳು

- ರಕ್ತಕಣಗಳ ಅಥವಾ ಹಿಮೊಗ್ಲೋಬಿನ್ ಅಣುವಿನಲ್ಲಿನ ನ್ಯೂನ್ಯತೆಗಳು.
- ದೇಹದ ಯಾವುದೇ ಭಾಗದಲ್ಲಿ ರಕ್ತಸ್ರಾವ.
- ಆಹಾರದಲ್ಲಿ ಪೌಷ್ಟಿಕಾಂಶಗಳ ಕೊರತೆ.
- ಅಸ್ಥಿಮಜ್ಜೆಯ / ಪಿತ್ತಜನಕಾಂಗದ / ಮೂತ್ರಪಿಂಡದ ಕಾಯಿಲೆಗಳು.

ಗುಣಲಕ್ಷಣಗಳು

- ಆಯಾಸ, ಸಣ್ಣಪುಟ್ಟ ಕೆಲಸಗಳನ್ನು ಮಾಡಿದ ನಂತರ, ಮೆಟ್ಟಿಲುಗಳನ್ನು ಏರಿದಾಗ ದಣಿವಾಗುವುದು.
- ತೀವ್ರತರವಾದ ಎದೆಬಡಿತ, ಎದೆನೋವು.
- ತಲೆನೋವು, ತಲೆ ಸುತ್ತುವಿಕೆ
- ಕಣ್ಣು ಕತ್ತಲು ಬಂದಂತಾಗುವುದು, ಕಿವಿಯಲ್ಲಿ ಒಂದು ಬಗೆಯ ಶಬ್ದ ಕೇಳಿದಂತಾಗುವುದು.
- ಕಣ್ಣುಗಳ ರೆಪ್ಪೆಯ ಒಳಗಿನ ಬಿಳಿ ಭಾಗ, ಚರ್ಮ, ನಾಲಿಗೆ, ಉಗುರು - ಇವು ಬಿಳಿಚಿಕೊಳ್ಳುವುದು.
- ಉಸಿರಾಡಲು ತೊಂದರೆ / ದಮ್ಮು / ಮೇಲುಸಿರು ಬಂದಂತಾಗುವುದು.
- ಯಾವುದೇ ಕಾರ್ಯದಲ್ಲಿ ಏಕಾಗ್ರತೆಗೆ ತೊಂದರೆಯೆನಿಸುವುದು.

ಈ ಮೇಲಿನ ಲಕ್ಷಣಗಳು ಕಂಡುಬಂದಲ್ಲಿ ನಿರ್ಲಕ್ಷಿಸದೆ ವೈದ್ಯರನ್ನು ಕಾಣಬೇಕು. ಸರಳವಾದ ರಕ್ತಪರೀಕ್ಷೆಯ ಸಹಾಯದಿಂದ ನಿಮ್ಮ ಹಿಮೊಗ್ಲೋಬಿನ್ ಹಾಗೂ ಸಂಬಂಧಿಸಿದ ಇತರ ಅಂಶಗಳ ಪ್ರಮಾಣವನ್ನು ಕಂಡುಕೊಳ್ಳಬಹುದು. ತೀವ್ರತೆಯನ್ನು ಹಾಗೂ ಮೂಲಕಾರಣವನ್ನು ಗಮನದಲ್ಲಿರಿಸಿ ವೈದ್ಯರು ಚಿಕಿತ್ಸೆಯನ್ನು ಸೂಚಿಸುತ್ತಾರೆ. ಹಿಮೊಗ್ಲೋಬಿನ್ ಅಂಶವು 5ಕ್ಕಿಂತ ಕಡಿಮೆಯಾಗಿದ್ದಾಗ ರಕ್ತವರ್ಗಾವಣೆಯ ಅವಶ್ಯಕತೆಯೂ ಇರಬಹುದು. ಕಬ್ಬಿಣಾಂಶ ಮತ್ತು ವಿಟಮಿನ್ ಬಿ-12 ಚುಚ್ಚುಮದ್ದುಗಳು ಹಾಗೂ ಗುಳಿಗೆಗಳೂ ಸಹಕಾರಿಯಾಗಬಲ್ಲವು.

ಪರಿಣಾಮಗಳು

- ವ್ಯಕ್ತಿಯ ರೋಗನಿರೋಧಕ ಶಕ್ತಿ ಕುಂಠಿತಗೊಳ್ಳುವುದು.
- ವಿವಿಧ ಬಗೆಯ ಸೋಂಕಿಗೆ ತುತ್ತಾಗಬಹುದು.
- ಹೃದಯದ ಕಾರ್ಯದಲ್ಲಿ ವೈಫಲ್ಯ.

❖

ಮುನ್ನೆಚ್ಚರಿಕೆಯ ಕ್ರಮಗಳು

ಆಹಾರಕ್ರಮವನ್ನು ಸರಿಪಡಿಸಿಕೊಳ್ಳಿರಿ: ಇತ್ತೀಚಿನ ದಿನಗಳಲ್ಲಿ ಹೆಚ್ಚು ಬಳಕೆಯಾಗುತ್ತಿರುವ ಸಿದ್ಧಪಡಿಸಿದ ಹಾಗೂ ಸಂಸ್ಕರಿಸಿದ ಆಹಾರಪದಾರ್ಥಗಳಲ್ಲಿ ಒಳ್ಳೆಯ ಪೋಷಕಾಂಶಗಳು ಇರುವುದಿಲ್ಲ. ಹಾಗಾಗಿಯೇ ಆದಷ್ಟು ನೈಸರ್ಗಿಕ ಆಹಾರವನ್ನು ಬಳಸುವುದಕ್ಕೆ ಒತ್ತು ಕೊಡಬೇಕು. ಕಬ್ಬಿಣಾಂಶ ಹೇರಳವಾಗಿರುವ ಆಹಾರಗಳಾದ ಬೆಲ್ಲ, ರಾಗಿ, ಹಸಿರು ಎಲೆಗಳುಳ್ಳ ತರಕಾರಿಗಳು, ಪಾಲಕ್ ಸೊಪ್ಪು, ಬೀಟ್‌ರೂಟ್, ನುಗ್ಗೇಸೊಪ್ಪು, ಬಟಾಣಿ, ಶೇಂಗಾ, ಸೋಯಾಕಾಳುಗಳು; ಒಣ ಹಣ್ಣುಗಳಾದ ಖರ್ಜೂರ, ಒಣದ್ರಾಕ್ಷಿ, ತಾಜಾಹಣ್ಣುಗಳಾದ ಸೇಬು, ದಾಳಿಂಬೆ; ಮೀನು, ಕೋಳಿಮಾಂಸ ಮುಂತಾದುವನ್ನು ನಿಯಮಿತವಾಗಿ ಸೇವಿಸಬೇಕು. ಅಂತೆಯೇ ವಿಟಮಿನ್ ಬಿ–12 ಹೇರಳವಾಗಿರುವ ಮೊಟ್ಟೆ, ಹಾಲು, ಮೊಸರು ಹಾಗೂ ಹಾಲಿನ ಇತರ ಉತ್ಪನ್ನಗಳು, ಫೋಲಿಕ್ ಆ್ಯಸಿಡ್ ಹೇರಳವಾಗಿರುವ ಎಲೆಕೋಸು, ಪಾಲಕ್ ಸೊಪ್ಪು, ಬೀನ್ಸ್‌ಕಾಳುಗಳು ನಮ್ಮ ನಿತ್ಯದ ಆಹಾರದಲ್ಲಿ ಇರುವಂತೆ ಗಮನ ವಹಿಸಬೇಕು. ಊಟ, ಉಪಹಾರದ ಬಳಿಕ ಚಹಾ ಅಥವಾ ಕಾಫಿಸೇವನೆಯೂ ಒಳ್ಳೆಯ ಅಭ್ಯಾಸವಲ್ಲ. ಇದು ಕರುಳುಗಳಲ್ಲಿ ಕಬ್ಬಿಣಾಂಶದ ಹೀರುವಿಕೆಗೆ ತೊಡಕನ್ನು ಉಂಟುಮಾಡಿದರೆ, ವಿಟಮಿನ್ ಸಿ ಸೇವನೆಯು ಕಬ್ಬಿಣಾಂಶದ ಹೀರುವಿಕೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಉಪಹಾರದ ಬಳಿಕ ಕಾಫಿ/ಚಹಾದ ಬದಲು ನಿಂಬೆಹಣ್ಣಿನ ರಸವನ್ನು ಕುಡಿಯುವುದು ಉತ್ತಮ.

- **ಜಂತುಹುಳುವಿನ ಬಾಧೆಯ ನಿಯಂತ್ರಣ:** ಕರುಳುಗಳಲ್ಲಿ ರಕ್ತವನ್ನು ಹೀರುವ ಜಂತುಹುಳುಗಳೂ ಒಮ್ಮೊಮ್ಮೆ ರಕ್ತಹೀನತೆಗೆ ಕಾರಣವಾಗಬಹುದು. ಆ ಕಾರಣಕ್ಕಾಗಿಯೇ, ಬರಿಗಾಲಿನಲ್ಲಿ ನಡೆಯದಿರುವುದು, ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು, ಕೈಕಾಲುಗಳ ಬೆರಳುಗಳ ಉಗುರುಗಳನ್ನು ಸಣ್ಣದಾಗಿ ಕತ್ತರಿಸಿಕೊಳ್ಳುವುದು, ಊಟದ ಮೊದಲು ಹಾಗೂ ಶೌಚಾಲಯಕ್ಕೆ ಹೋಗಿ ಬಂದ ನಂತರ ಕೈಕಾಲುಗಳನ್ನು ಸ್ವಚ್ಛಗೊಳಿಸಿಕೊಳ್ಳುವುದು ಹಾಗೂ ಪ್ರತಿ ಆರು ತಿಂಗಳಿಗೊಮ್ಮೆ ಜಂತುಹುಳುವಿಗಾಗಿ ಔಷಧ ತೆಗೆದುಕೊಳ್ಳುವುದನ್ನು ತಪ್ಪದೆ ರೂಢಿಸಿಕೊಳ್ಳಬೇಕು.
- ಯಾವುದೇ ರೀತಿಯ ರಕ್ತಸ್ರಾವದಿಂದ ಬಳಲುತ್ತಿದ್ದರೆ (ಉದಾಹರಣೆಗೆ, ಮೂಲವ್ಯಾಧಿ, ಮಹಿಳೆಯರಲ್ಲಿ ಹೆಚ್ಚಾದ ಋತುಸ್ರಾವ ಮೊದಲಾದುವು) ಅದಕ್ಕೆ ವೈದ್ಯರಿಂದ ಸೂಕ್ತ ಸಲಹೆಗಳನ್ನು ಪಡೆದು, ಚಿಕಿತ್ಸೆ ಮಾಡಿಕೊಳ್ಳುವುದು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಗಣಿತ

ಎಸ್ಸೆಸ್ಸೆಲ್ಸಿ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) $\tan\theta$ ಮತ್ತು $\cot\theta$ ಗಳ ಗುಣಲಬ್ಧವು

(ಎ) 0 (ಬಿ) 1

(ಸಿ) $\sin\theta$ (ಡಿ) –1

Ans : $\tan\theta \times \cot\theta$

$$= \tan\theta \times \frac{1}{\tan\theta} = 1$$

$\therefore$ (B) 1

2) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ ....

(A) $-\frac{5}{6}$ (B) $\frac{5}{6}$

(C) $-\frac{1}{6}$ (D) $\frac{1}{6}$

ಉತ್ತರ: (D)

3) (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳು

A) (3, 5) B) (7, 3)

C) (3, 4) D) (8, 3)

ಉತ್ತರ: (A) (3, 5)

4) ಚಿತ್ರದಲ್ಲಿ ತೋರಿಸಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು



(A) $x + y = 1$ ಮತ್ತು $2x - y = 1$

(B) $2x + y = 2$ ಮತ್ತು $x + y = 2$

(C) $2x - y = 2$ ಮತ್ತು $4x - y = 4$

(D) $y - x = 0$ ಮತ್ತು $x - y = 1$

ಉತ್ತರ:–(ಸಿ) $2x-y=2$ ಮತ್ತು $4x-y=4$

5) (3, -2) ಮತ್ತು (4, 5) ಬಿಂದುಗಳನ್ನು ಸೇರಿಸುವ ರೇಖೆಯ ಇಳಿಜಾರು

A) 3 B) 5

C) 7 D) 8

ಉತ್ತರ : (C) 7

6) ಕೊಟ್ಟಿರುವ ಚಿತ್ರದಲ್ಲಿ Sin θ ದ ಬೆಲೆಯು..........



(A) $\frac{1}{2}$ (B) $\frac{\sqrt{3}}{2}$

(C) $\sqrt{3}$ (D) $\frac{2}{\sqrt{3}}$

ಉತ್ತರ:– (ಎ) ½

7) ಈ ಕೆಳಗಿನ ದತ್ತಾಂಶಗಳ ಸರಾಸರಿಯು...................

ಅಂಕಗಳು	1	3	5	7

A) 16 B) 5

C) 1.6 D) 4

ಉತ್ತರ:– (ಡಿ)4

8) ದತ್ತ ವೃತ್ತಕ್ಕೆ ಹೊರಗಿನ ಬಿಂದು T ಯಿಂದ ಎರಡು ಸ್ಪರ್ಶಕಗಳನ್ನು ರಚಿಸುವಾಗ ಚಿತ್ರದಲ್ಲಿ ತೋರಿಸಿರುವ ರಚನೆಯ ಹಂತದ ಮುಂದಿನ ಹಂತವನ್ನು ಗುರುತಿಸಿ



ಉತ್ತರ:–ಎ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ರಸಾಯನವಿಜ್ಞಾನ

ಪಿಯುಸಿ

16) ಪಾಲಿಮರ್‌ಗಳ ವರ್ಗೀಕರಣದ ಬಗ್ಗೆ ಬರೆಯಿರಿ.

ಉತ್ತರ:- ಪಾಲಿಮರ್‌ಗಳ ವರ್ಗೀಕರಣದಲ್ಲಿ, ಕೆಲವು ವಿಶೇಷ ಪರಿಗಣನೆಯ ಆಧಾರದ ಮೇಲೆ ಹಲವಾರು ಬಗೆಗಳಿವೆ. ಅವುಗಳೆಂದರೆ

1) ಆಕರ (ಮೂಲ) ಆಧಾರಿತ ವರ್ಗೀಕರಣ

ಈ ವಿಧದ ವರ್ಗೀಕರಣದ ಅಡಿಯಲ್ಲಿ ಮೂರು ಉಪವರ್ಗಗಳಿವೆ.

1. ನೈಸರ್ಗಿಕ ಪಾಲಿಮರ್‌ಗಳು: ಈ ಪಾಲಿಮರ್‌ಗಳು ಸಸ್ಯ ಮತ್ತು ಪ್ರಾಣಿಗಳಲ್ಲಿ ಕಂಡುಬರುತ್ತದೆ. ಪ್ರೊಟೀನ್, ಸೆಲ್ಯೂಲೋಸ್, ಪಿಷ್ಟ, ಕೆಲವು ರಾಳ (ರೆಸಿನ್ಸ್) ಹಾಗೂ ರಬ್ಬರ್ ಇವುಗಳಿಗೆ ಉದಾಹರಣೆಗಳಾಗಿವೆ.

2. ಅರೆ ಸಂಶ್ಲೇಷಿತ ಪಾಲಿಮರ್‌ಗಳು: ಸೆಲ್ಯುಲೋಸನ್ ಉತ್ಪನ್ನಗಳಾದ ಸೆಲ್ಯುಲೋಸ್ ಅಸಿಟೇಟ್ (ರೇಯಾನ್) ಮತ್ತು ಸೆಲ್ಯುಲೋಸ್ ನೈಟ್ರೇಟ್ ಇತ್ಯಾದಿಗಳು ಈ ಉಪವರ್ಗದ ಸಾಮಾನ್ಯ ಉದಾಹರಣೆಗಳು.

3. ಸಂಶ್ಲೇಷಿತ ಪಾಲಿಮರ್‌ಗಳು: ದೈನಂದಿನ ಜೀವನ ಮತ್ತು ಉದ್ಯಮಗಳಲ್ಲಿ ವ್ಯಾಪಕವಾಗಿ ಬಳಸಲಾಗುವ ವಿವಿಧ ಸಂಶ್ಲೇಷಿತ ಪಾಲಿಮರ್‌ಗಳಾದ ಪ್ಲಾಸ್ಟಿಕ್ (ಪಾಲಿಥೀನ್), ಸಂಶ್ಲೇಷಿತ ಫೈಬರ್ (ನೈಲಾನ್ 6, 6) ಹಾಗೂ ಸಂಶ್ಲೇಷಿತ ರಬ್ಬರ್‌ಗಳು (ಬ್ಯೂನಾ S) ಮಾನವ ನಿರ್ಮಿತ ಪಾಲಿಮರ್‌ಗಳಿಗೆ ಉದಾಹರಣೆಗಳು.

2 ಪಾಲಿಮರ್‌ಗಳು ರಚನಾಧಾರಿತ ವರ್ಗೀಕರಣ

ಪಾಲಿಮರ್‌ಗಳ ರಚನೆಯ ಆಧಾರದ ಮೇಲೆ ಮೂರು ವಿಭಿನ್ನ ಪ್ರಕಾರಗಳಿವೆ.

1. ರೇಖೀಯ ಪಾಲಿಮರ್‌ಗಳು: ಇಂತಹ ಪಾಲಿಮರ್‌ಗಳು ಉದ್ದನೆಯ ಮತ್ತು ನೇರ ಸರಪಳಿಗಳನ್ನು ಒಳಗೊಂಡಿವೆ. ಹೆಚ್ಚಿನ ಸಾಂದ್ರತೆಯ ಪಾಲಿಥೀನ್, ಪಾಲಿವಿನೈಲ್ ಕ್ಲೋರೈಡ್ ಇತ್ಯಾದಿಗಳು ಇವುಗಳಿಗೆ ಉದಾಹರಣೆಗಳಾಗಿವೆ. ಇವುಗಳನ್ನು ಈ ಕೆಳಗಿನಂತೆ ಚಿತ್ರಿಸಲಾಗಿದೆ.



2. **ಕವಲೊಡೆದ ಸರಪಳಿ ಪಾಲಿಮರ್‌ಗಳು** ಇಂತಹ ಪಾಲಿಮರ್‌ಗಳು ರೇಖೀಯ ಸರಪಳಿಗಳೊಂದಿಗೆ ಕೆಲವು ಕವಲುಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗಾಗಿ ಕಡಿಮೆ ಸಾಂದ್ರತೆಯ ಪಾಲಿಥೀನ್. ಇವುಗಳನ್ನು ಈ ಕೆಳಗಿನಂತೆ ಚಿತ್ರಿಸಲಾಗಿದೆ.



3. **ಅಡ್ಡ ಸಂಪರ್ಕ ಅಥವಾ ಜಾಲಬಂಧ ಪಾಲಿಮರ್‌ಗಳು** ಇವುಗಳು ಸಾಮಾನ್ಯವಾಗಿ ದ್ವಿಕ್ರಿಯಾತ್ಮಕ ಮತ್ತು ತ್ರಿಕ್ರಿಯಾತ್ಮಕ ಮೊನೊಮರ್‌ಗಳಿಂದ ರಚಿಸಲ್ಪಟ್ಟಿದ್ದು ವಿವಿಧ ರೇಖೀಯ ಪಾಲಿಮರ್ ಸರಪಳಿಗಳ ನಡುವೆ ಬಲವಾದ ಸಹವೇಲೆನ್ಸೀಯ ಬಂಧಗಳನ್ನು ಹೊಂದಿರುತ್ತದೆ. ಉದಾಹರಣೆಗಳು: ಬೆಕಲೈಟ್, ಮೆಲಮೈನ್ ಇತ್ಯಾದಿ. ಈ ಪಾಲಿಮರ್‌ಗಳನ್ನು ಈ ಕೆಳಗಿನಂತೆ ಚಿತ್ರಿಸಲಾಗಿದೆ.



3 ಪಾಲಿಮರೀಕರಣದ ವಿಧಾನಾಧಾರಿತ ವರ್ಗೀಕರಣ

ಪಾಲಿಮರ್‌ಗಳನ್ನು ಪಾಲಿಮರೀಕರಣದ ವಿಧಾನದ ಆಧಾರದಲ್ಲಿಯೂ ಎರಡು ಉಪಗುಂಪುಗಳಾಗಿ ವಿಂಗಡಿಸಬಹುದಾಗಿದೆ.

1. ಸಂಕಲನ ಪಾಲಿಮರ್‌ಗಳು: ದ್ವಿಬಂಧ ಅಥವಾ ತ್ರಿಬಂಧ ಹೊಂದಿರುವ ಮೊನೊಮರ್ ಅಣುಗಳ ಪುನರಾವರ್ತಿತ ಸೇರ್ಪಡೆಯಿಂದ ಸಂಕಲನ ಪಾಲಿಮರ್‌ಗಳು ರೂಪುಗೊಳ್ಳುತ್ತವೆ. ಉದಾಹರಣೆ: ಈಥೀನ್ ನಿಂದ ಪಾಲಿಥೀನ್ ಹಾಗು ಪ್ರೊಪೀನ್‌ನಿಂದ ಪಾಲಿಪ್ರೊಪಿನ್‌ನ ಆಗುವಿಕೆ. ಆದಾಗ್ಯೂ, ಒಂದೇ ರೀತಿಯ ಮೊನೊಮರ್‌ಗಳ ಪಾಲಿಮರೀಕರಣದಿಂದ ರೂಪುಗೊಂಡ ಸಂಕಲನ ಪಾಲಿಮರ್‌ಗಳನ್ನು ಹೊಮೊಪಾಲಿಮರ್ ಎಂದು ಕರೆಯುತ್ತಾರೆ. ಉದಾಹರಣೆಗೆ ಪಾಲಿಥೀನ್ ಎರಡು ಬೇರೆ ಬೇರೆ ರೀತಿಯ ಮೊನೊಮರ್‌ಗಳು ಸಂಕಲನ ಪಾಲಿಮರೀಕರಣದಿಂದ ಉಂಟಾದ ಪಾಲಿಮರ್‌ಗಳನ್ನು ಸಹಪಾಲಿಮರ್ (ಕೋಪಾಲಿಮರ್‌ಗಳು) ಎಂದು ಕರೆಯಲಾಗುತ್ತದೆ. ಉದಾಹರಣೆಗೆ: ಬ್ಯೂನಾ - S, ಬ್ಯೂನಾ - ಓ, ಇತ್ಯಾದಿ.

2. ಸಾಂದ್ರೀಕರಣ ಪಾಲಿಮರ್‌ಗಳು ಎರಡು ವಿಭಿನ್ನ ದ್ವಿ-ಕ್ರಿಯಾತ್ಮಕ ಅಥವಾ ತ್ರಿ-ಕ್ರಿಯಾತ್ಮಕ ಮೊನೊಮೆರಿಕ್ ಘಟಕಗಳ ನಡುವೆ ನಡೆಯುವ ಪುನರಾವರ್ತಿತ ಸಾಂದ್ರೀಕರಣ ಪ್ರತಿಕ್ರಿಯೆಯಿಂದ ಸಾಂದ್ರೀಕರಣ ಪಾಲಿಮರ್‌ಗಳು ಉಂಟಾಗುತ್ತದೆ. ಇಂತಹ ಪಾಲಿಮರೀಕರಣ ಪ್ರತಿಕ್ರಿಯೆಗಳಲ್ಲಿ, ನೀರು, ಆಲ್ಕೋಹಾಲ್, ಹೈಡ್ರೋಜನ್ ಕ್ಲೋರೈಡ್ ಮುಂತಾದ ಸಣ್ಣ ಅಣುಗಳು ಹೊರಹಾಕಲ್ಪಡುತ್ತವೆ. ಉದಾಹರಣೆಗಳೆಂದರೆ ಟೆರಿಲೀನ್ (ಡೆಕ್ರೋನ್), ನೈಲಾನ್ 6, 6, ನೈಲಾನ್ 6, ಇತ್ಯಾದಿ. ಉದಾಹರಣೆಗೆ, ಅಡಿಪಿಕ ಆಮ್ಲದೊಂದಿಗೆ ಹೆಕ್ಸಾಮಿಥಲೀನ್ ಡೈ ಅಮೈನ್ಸ್ ಸಾಂದ್ರೀಕರಣದಿಂದ ನೈಲಾನ್ 6, 6 ಉಂಟಾಗುತ್ತದೆ.

4. ಆಣ್ವಿಕ ಬಲಗಳ ಆಧಾರಿತ ವರ್ಗೀಕರಣ

ವಿಭಿನ್ನ ಕ್ಷೇತ್ರಗಳಲ್ಲಿನ ಹೆಚ್ಚಿನ ಸಂಖ್ಯೆಯ ಪಾಲಿಮರ್‌ಗಳ ಅನ್ವಯಿಕೆಗಳು ತಮ್ಮ ವಿಶಿಷ್ಟವಾದ ಯಾಂತ್ರಿಕ ಗುಣಲಕ್ಷಣಗಳಾದ ಕರ್ಷಕ ಶಕ್ತಿ, ಸ್ಥಿತಿಸ್ಥಾಪಕತ್ವ, ಕಠಿಣತೆ ಇತ್ಯಾದಿಗಳ ಮೇಲೆ ಅವಲಂಬಿತವಾಗಿವೆ. ಪಾಲಿಮರ್‌ನಲ್ಲಿರುವ ಅಂತರಾಣ್ವಿಕ ಬಲಗಳಾದ ಉದಾಹರಣೆಗೆ, ವಾನ್ ಡರ್ ವಾಲ್ ಬಲ (Van der walls force) ಮತ್ತು ಹೈಡ್ರೋಜನ್ ಬಂಧಗಳು (Hydrogen Bond) ಈ ಯಾಂತ್ರಿಕ ಗುಣಲಕ್ಷಣಗಳನ್ನು ನಿರ್ಧರಿಸುತ್ತವೆ. ಈ ಬಲಗಳು ಪಾಲಿಮರ್ ಸರಪಳಿಗಳನ್ನೂ ಸಹ ಬಂಧಿಸುತ್ತವೆ. ಈ ವಿಭಾಗದ ಅಡಿಯಲ್ಲಿ, ಪಾಲಿಮರ್‌ನಲ್ಲಿನ ಆಣ್ವಿಕ ಶಕ್ತಿಗಳ ಪರಿಮಾಣದ ಆಧಾರದ ಮೇಲೆ ಈ ಕೆಳಗಿನ ನಾಲ್ಕು ಉಪ ಗುಂಪುಗಳಾಗಿ ವರ್ಗೀಕರಿಸಲಾಗಿದೆ.

1. ಇಲಾಸ್ಟೊಮರ್‌ಗಳು: ಇವುಗಳು ಸ್ಥಿತಿಸ್ಥಾಪಕ (ಇಲಾಸ್ಟಿಕ್) ಗುಣಲಕ್ಷಣಗಳನ್ನು ಹೊಂದಿರುವ ರಬ್ಬರ್‌ನಂತಹ ಘನವಸ್ತುಗಳಾಗಿವೆ. ಇಂತಹ ಎಲಾಸ್ಟೊಮೆರಿಕ್ ಪಾಲಿಮರ್‌ಗಳಲ್ಲಿ, ಪಾಲಿಮರ್ ಸರಪಳಿಗಳು ಅತೀ ದುರ್ಬಲ ಅಂತರಾಣ್ವಿಕ ಬಲಗಳಿಂದ ಪರಸ್ಪರ ಹಿಡಿಯಲ್ಪಟ್ಟಿರುತ್ತವೆ. ಈ ದುರ್ಬಲ ಬಂಧಿಸುವ ಬಲಗಳು ಪಾಲಿಮರ್ ಅನ್ನು ವಿಸ್ತರಿಸಲು ಸಹಕರಿಸುತ್ತವೆ. ವಲ್ಕನೀಕರಿಸಿದ ರಬ್ಬರಿನಲ್ಲಿರುವಂತೆ ಸರಪಳಿಗಳ ನಡುವೆ ಸೇರಿಸಿದ ಕೆಲವು ಅಡ್ಡ ಸಂಪರ್ಕಗಳು, ಬಲ ಬಿಡುಗಡೆಗೊಳಿಸಿದ ನಂತರ ಪಾಲಿಮರ್ ಅದರ ಮೂಲ ಸ್ಥಿತಿಗೆ ಮರಳಲು ಸಹಕರಿಸುತ್ತವೆ. ಉದಾಹರಣೆಗಳೆಂದರೆ ಬ್ಯೂನಾ-S, ಬ್ಯೂನಾ-ಓ, ನಿಯೋಪ್ರೀನ್, ಇತ್ಯಾದಿ.

2. ಫೈಬರ್‌ಗಳು

ಫೈಬರ್‌ಗಳು ಹೆಚ್ಚಿನ ಕರ್ಷಕ ಶಕ್ತಿ ಮತ್ತು ಹೆಚ್ಚಿನ ಮಾಡ್ಯುಲಸ್‌ಗಳನ್ನು ಹೊಂದಿರುವ, ಎಳೆಗಳನ್ನು ರೂಪಿಸುವ ಘನಗಳಾಗಿವೆ. ಹೈಡ್ರೋಜನ್ ಬಂಧಗಳಂತಹ ಪ್ರಬಲ ಅಂತರಾಣ್ವಿಕ ಬಲಗಳನ್ನು ಈ ಗುಣಲಕ್ಷಣಗಳಿಗೆ ಕಾರಣೀಕರಿಸಬಹುದಾಗಿದೆ. ಈ ಪ್ರಬಲವಾದ ಬಲಗಳು ಸರಪಳಿಗಳ ನಿಕಟ ಜೋಡಣೆಗೆ ಕಾರಣವಾಗಿದ್ದು, ಇದು ಇವುಗಳಿಗೆ ಸ್ಫಟಿಕೀಯ ಸ್ವಭಾವವನ್ನು ನೀಡುತ್ತವೆ. ಉದಾಹರಣೆಗಳೆಂದರೆ ಪಾಲಿಅಮೈಡ್‌ಗಳು (ನೈಲಾನ್ 6, 6), ಪಾಲಿಎಸ್ಟರ್ (ಟೆರಿಲೀನ್), ಇತ್ಯಾದಿ.

3. ಥರ್ಮೋಪ್ಲಾಸ್ಟಿಕ್ ಪಾಲಿಮರ್‌ಗಳು ಇವುಗಳು ಪುನರಾವರ್ತಿತವಾಗಿ ಬಿಸಿ ಮಾಡಿದಾಗ ಮೃದುಗೊಳ್ಳುವ ಮತ್ತು ತಂಪಾಗಿಸಿದಾಗ ಗಟ್ಟಿಯಾಗುವ ಸಾಮರ್ಥ್ಯವನ್ನು ಹೊಂದಿರುವ ರೇಖೀಯ ಅಥವಾ ಸ್ವಲ್ಪ ಕವಲೊಡೆದ ದೀರ್ಘ ಸರಪಳಿ ಅಣುಗಳಾಗಿವೆ. (ನಾಳೆಗೆ...)

ಪ್ರಜಾವಾಣಿ ನೋಡಿಯೊ

ಪಿಯುಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಸಿಸೋಡಿಯಾ ಬಂಧನ– ಕೇಂದ್ರದ ವಿರುದ್ಧ ಎಎಪಿ ವಾಗ್ದಾಳಿ • ವಿರೋಧ ಪಕ್ಷಗಳ ಆಕ್ರೋಶ

ಅದಾನಿ ಪ್ರಕರಣ ಮರೆಸುವ ತಂತ್ರ

ನವದೆಹಲಿ (ಪಿಟಿಐ): 'ಅದಾನಿ ಸಮೂಹವು ನಡೆಸಿದೆ ಎನ್ನಲಾದ ಷೇರು ಮೌಲ್ಯ ಇಳಿಕೆ ಅಥವಾ ಏರಿಕೆ ಪ್ರಕರಣದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಬಂಧಿಸಲಾಗಿದೆ' ಎಂದು ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ಸೋಮವಾರ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಅದಾನಿ ಸಂಸ್ಥೆಯ ಅವ್ಯವಹಾರಗಳ ಕುರಿತು ಜಂಟಿ ಸದನ ಸಮಿತಿ (ಜೆಪಿಸಿ) ರಚಿಸಿ, ತನಿಖೆ ನಡೆಸುವಂತೆ ಒತ್ತಾಯಿಸುತ್ತಿರುವ ನಾಯಕರು ಹಾಗೂ ಅವರ ಪಕ್ಷಗಳನ್ನು ಗುರಿಯಾಗಿಸಿ ಕೇಂದ್ರವು ಕಿರುಕುಳ ನೀಡುತ್ತಿದೆ' ಎಂದು ಸಂಜಯ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಕೋಟಿ ಕೋಟಿ ಅವ್ಯವಹಾರ ಮಾಡಿದ ಅದಾನಿ ಅವರು ಯಾವುದೇ ತನಿಖೆಯನ್ನು ಎದುರಿಸದೇ ಆರಾಮವಾಗಿ ತಿರುಗಾಡಿಕೊಂಡಿದ್ದಾರೆ. ಸಿಬಿಐ, ಸೆಬಿ, ಐಟಿ ಇಲಾಖೆಗಳು ಈಗ ನಿಷ್ಕ್ರಿಯವಾಗಿವೆ. ಆದರೆ, ತಮ್ಮನ್ನು ಸಮರ್ಪಿಸಿಕೊಂಡು ದುಡಿಯುತ್ತಿರುವ ನಾಯಕರನ್ನು ಬಂಧಿಸಲಾಗುತ್ತಿದೆ' ಎಂದರು.

ಪೊಲೀಸರ ವಶದಲ್ಲಿ ಶೇ 80ರಷ್ಟು ನಾಯಕರು- ಎಎಪಿ ಆರೋಪ: ದೆಹಲಿಯಲ್ಲಿರುವ ಆಮ್ ಆದ್ಮಿ ಪಕ್ಷದ ಕಚೇರಿಯ ಮುಂಭಾಗದಲ್ಲಿ ಸೋಮವಾರ ದೊಡ್ಡ ಸಂಖ್ಯೆಯಲ್ಲಿ ಪೊಲೀಸರು ಹಾಗೂ ಸಿಪಿಎಫ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಈ ವೇಳೆ 'ದೆಹಲಿ ಪೊಲೀಸರು ಎಎಪಿ ಕಚೇರಿಗೆ ನುಗ್ಗಿ ಹಲವು ಕಾರ್ಯಕರ್ತರು ಹಾಗೂ ನಾಯಕರನ್ನು ವಶಕ್ಕೆ ಪಡೆದುಕೊಂಡಿದ್ದಾರೆ' ಎಂದು ಪಕ್ಷ ಆರೋಪಿಸಿದೆ.

'ಭಾನುವಾರದಿಂದ ಈವರೆಗೆ ಆಮ್ ಆದ್ಮಿ ಪಕ್ಷದ ಶೇ 80ರಷ್ಟು ನಾಯಕರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಭಾನುವಾರ ಸಿಬಿಐ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ್ದ ಸಚಿವ ಗೋಪಾಲ್ ರಾಯ್ ಸೇರಿದಂತೆ ಹಲವು ನಾಯಕರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ' ಎಂದೂ ಎಎಪಿ ಆರೋಪಿಸಿದೆ.

'ಸಿಸೋಡಿಯಾ ಮಾತ್ರವಲ್ಲ ನಮ್ಮ ಪಕ್ಷದ ಶೇ 80ರಷ್ಟು ನಾಯಕರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಭಾನುವಾರದಿಂದ ಹೇಳುತ್ತಿದ್ದೇವೆ. ಆದರೆ, ಕೇಂದ್ರವು ಇದನ್ನು ನಿರಾಕರಿಸುತ್ತಿದೆ. ಎಎಪಿ ನಾಯಕನ್ನು ಬಂಧಿಸಿಲ್ಲ ವಶಕ್ಕೆ ಪಡೆಯಲಾಗಿದೆ ಎಂದು ಕೇಂದ್ರ ವಾದಿಸುತ್ತಿದೆ' ಎಂದು ಎಎಪಿ ವಕ್ತಾರ ಸೌರಭ್ ಭಾರದ್ವಾಜ್ ಹೇಳಿದ್ದಾರೆ.

'ಭಾನುವಾರ ವಶಕ್ಕೆ ಪಡೆದ ಎಎಪಿ ನಾಯಕರನ್ನು ಸೋಮವಾರ ಬಿಡುಗಡೆ ಮಾಡಲಾಗಿದೆ' ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.

'24 ತಾಸುಗಳಿಗೂ ಹೆಚ್ಚು ಕಾಲ ವ್ಯಕ್ತಿಯನ್ನು ವಶದಲ್ಲಿರಿಸಿಕೊಳ್ಳುವುದು ಕಾನೂನುಬಾಹಿರ. ಇಷ್ಟು ಹೊತ್ತಿಗಾಗಲೇ ನಾಯಕರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಿತ್ತು' ಎಂದು ಭಾರದ್ವಾಜ್ ದೂರಿದ್ದಾರೆ.

ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಬಂಧನವನ್ನು ಖಂಡಿಸಿ ದೆಹಲಿಯ ಎಎಪಿ ಕಚೇರಿ ಮುಂದೆ ಸೋಮವಾರ ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದರು —ಪಿಟಿಐ ಚಿತ್ರ

> ಸಿಬಿಐನ ಹಲವು ಅಧಿಕಾರಿಗಳು ಸಿಸೋಡಿಯಾ ಬಂಧನವನ್ನು ವಿರೋಧಿಸಿದ್ದರು. ಆದರೆ, 'ರಾಜಕೀಯ ಒತ್ತಡ'ದಿಂದ ಈ ಬಂಧನವಾಗಿದೆ
> **ಅರವಿಂದ ಕೇಜ್ರಿವಾಲ್** ದೆಹಲಿ ಸಿ.ಎಂ

> ಭ್ರಷ್ಟಾಚಾರದ ವಿರುದ್ಧ ಸಿಬಿಐ ಕಾನೂನಾತ್ಮಕವಾಗಿ ಕೆಲಸ ಮಾಡುತ್ತಿದೆ. ಆದರೆ, ಎಎಪಿಗೆ ಕಾನೂನು, ಸಂವಿಧಾನ ಹಾಗೂ ಜನರಲ್ಲಿ ನಂಬಿಕೆ ಇಲ್ಲ
> **ಬಿಜೆಪಿ**

> ಸಿಸೋಡಿಯಾ ಬಂಧನವನ್ನು ನಾವು ಖಂಡಿಸುತ್ತೇವೆ. ಅದಾನಿ–ಮೋದಿ ಸಂಬಂಧದಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಯತ್ನವಿದು
> **ಕೆ. ಚಂದ್ರಶೇಖರ ರಾವ್** ತೆಲಂಗಾಣ ಮುಖ್ಯಮಂತ್ರಿ

> ಆಮ್ ಆದ್ಮಿ ಪಕ್ಷವು ಹೋರಾಟದಿಂದ ಹುಟ್ಟಿದ ಪಕ್ಷವಾಗಿದೆ. ನಮ್ಮ ನಾಯಕರು ಜೈಲಿಗೆ ಹೋಗುವುದಕ್ಕೆ ಹೆದರುವುದಿಲ್ಲ
> **ಸಂಜಯ್ ಸಿಂಗ್,** ಎಎಪಿ ಸಂಸದ

ಹಳೆಯದನ್ನೆಲ್ಲಾ ಕೆದಕಿ ಸಾಮರಸ್ಯ ಕದಡದಿರಿ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಳೆಯದನ್ನೆಲ್ಲಾ ಕೆದಕಬೇಡಿ. ಅದರಿಂದ ಸಾಮರಸ್ಯ ಹಾಳಾಗುತ್ತದೆಯೇ ಹೊರತು ಇನ್ನಾವ ಪ್ರಯೋಜನವೂ ಇಲ್ಲ. ಈ ದೇಶವು ದ್ವೇಷದ ಜ್ವಾಲೆಯಲ್ಲಿ ಕುದಿಯುವುದಕ್ಕೆ ನಾವು ಅವಕಾಶ ನೀಡುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಸೋಮವಾರ ವಕೀಲ ಅಶ್ವಿನಿಕುಮಾರ್ ಉಪಾಧ್ಯಾಯ ಅವರನ್ನು ತರಾಟೆಗೆ ತೆಗೆದುಕೊಂಡಿದೆ.

'ದೇಶದಲ್ಲಿ ಆಳ್ವಿಕೆ ನಡೆಸಿದ್ದ ಆಕ್ರಮಣಕಾರರು ಹೆಸರು ಬದಲಿಸಿರುವ ಪುರಾತನ, ಸಾಂಸ್ಕೃತಿಕ, ಧಾರ್ಮಿಕ ಸ್ಥಳಗಳಿಗೆ ಹಳೆಯ ಹೆಸರುಗಳನ್ನೇ ಇಡಲು 'ಮರುನಾಮಕರಣ ಆಯೋಗ' ರಚಿಸಬೇಕು' ಎಂದು ಕೋರಿ ಉಪಾಧ್ಯಾಯ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ.ನಾಗರತ್ನ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಇದನ್ನು ವಜಾಗೊಳಿಸಿತು.

'ಭಾರತವು ಜಾತ್ಯತೀತ ರಾಷ್ಟ್ರ. ನಾವು ಈ ದೇಶದ ಸಂವಿಧಾನ ಹಾಗೂ ಎಲ್ಲಾ ವರ್ಗಗಳನ್ನೂ ರಕ್ಷಿಸಬೇಕು. ಹಿಂದುತ್ವವು ಕೇವಲ ಧರ್ಮವಲ್ಲ. ಅದೊಂದು ಜೀವನ ಕ್ರಮ. ಈ ವಿಚಾರದಲ್ಲಿ ಯಾವುದೇ ಧರ್ಮಾಂಧತೆ ಬೇಡ. ನಾವು ಎಲ್ಲಾ ಬಗೆಯ ಸಂಸ್ಕೃತಿಯನ್ನೂ ಮೈಗೂಡಿಸಿಕೊಂಡಿದ್ದೇವೆ. ಇಂತಹ ಅರ್ಜಿಗಳ ಮೂಲಕ ಸಹಬಾಳ್ವೆಯನ್ನು ನಾಶಪಡಿಸಬೇಡಿ. ಧರ್ಮವನ್ನಷ್ಟೇ ಅಲ್ಲ. ಈ ದೇಶವನ್ನೂ ಗಮನದಲ್ಲಿಟ್ಟುಕೊಳ್ಳಿ' ಎಂದು ಕಿಡಿಕಾರಿತು.

'ನೀವು ಅಥವಾ ಈ ನ್ಯಾಯಾಲಯವು ವಿನಾಶ ಸೃಷ್ಟಿಸುವ ಸಾಧನವಾಗಬಾರದು. ಈ ದೇಶದಲ್ಲಿ ಸಮಾಜದ ಎಲ್ಲಾ ಸ್ತರದ ಜನರೂ ಒಗ್ಗೂಡಿ ಬಾಳಬೇಕು' ಎಂದು ನ್ಯಾಯಪೀಠವು ಅರ್ಜಿದಾರರಿಗೆ ಹೇಳಿತು.

'ಇಂತಹ ಅರ್ಜಿಗಳ ಮೂಲಕ ನೀವು ಏನನ್ನು ಸಾಧಿಸಲು ಹೊರಟಿದ್ದೀರಿ. ದೇಶವು ಹಲವು ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳನ್ನು ಮೆಟ್ಟಿನಿಲ್ಲುವ ಹಾದಿಯಲ್ಲಿ ಸಾಗುತ್ತಿದೆ. ಹೀಗಿರುವಾಗ ನೀವು 'ಮರುನಾಮಕರಣ ಆಯೋಗ' ರಚಿಸಲು ಕೇಂದ್ರ ಗೃಹ ಸಚಿವಾಲಯಕ್ಕೆ ನಿರ್ದೇಶನ ನೀಡುವಂತೆ ಕೋರುತ್ತಿದ್ದೀರಿ. ವಿದೇಶಿಯರು ನಮ್ಮ ಮೇಲೆ ಆಕ್ರಮಣ ಮಾಡಿ, ಆಳಿದ್ದರು ಎಂಬುದು ವಾಸ್ತವಾಂಶ' ಎಂದೂ ನ್ಯಾಯಪೀಠ ತಿಳಿಸಿತು.

ಪೊಲೀಸ್ ವರಿಷ್ಠರ ನೇಮಕ: ಸೂಕ್ತ ನಿಲುವು– ಸುಪ್ರೀಂ

ನವದೆಹಲಿ (ಪಿಟಿಐ): 'ರಾಜ್ಯಗಳಲ್ಲಿನ ಪೊಲೀಸ್ ಮಹಾ ನಿರ್ದೇಶಕರ (ಡಿಜಿಪಿ) ನೇಮಕಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ತೀರ್ಪಿನಲ್ಲಿ ಉಲ್ಲೇಖಿಸಿದ್ದ ಕಾರ್ಯವಿಧಾನಗಳು ದೆಹಲಿ ಹಾಗೂ ಇತರ ನಗರಗಳ ಪೊಲೀಸ್ ಆಯುಕ್ತರ ನೇಮಕಕ್ಕೂ ಅನ್ವಯಿಸುತ್ತದೆಯೇ ಇಲ್ಲವೇ ಎಂಬುದನ್ನು ತಾನು ನಿರ್ಧರಿಸುತ್ತೇನೆ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಹಿರಿಯ ಐಪಿಎಸ್ ಅಧಿಕಾರಿ ರಾಕೇಶ್ ಅಸ್ಥಾನಾ ಅವರನ್ನು ದೆಹಲಿ ಪೊಲೀಸ್ ಆಯುಕ್ತರನ್ನಾಗಿ ನೇಮಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, 'ಅಸ್ಥಾನಾ ಅವರು ಈಗಾಗಲೇ ನಿವೃತ್ತಿ ಹೊಂದಿದ್ದಾರೆ. ಹೀಗಾಗಿ ಅವರ ನೇಮಕ ಪ್ರಶ್ನಿಸಿರುವ ಈ ಅರ್ಜಿಗಳು ನಿರರ್ಥಕವಾಗಿವೆ' ಎಂದು ತಿಳಿಸಿತು.

'2006ರಲ್ಲಿ ಪ್ರಕಾಶ್ ಸಿಂಗ್ ಅವರ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಡಿಜಿಪಿಗಳನ್ನು ನೇಮಿಸುವ ಅಧಿಕಾರ ಆಯಾ ರಾಜ್ಯ ಸರ್ಕಾರಗಳಿಗೆ ಇದೆ ಎಂದು ಹೇಳಿತ್ತು. ಜೊತೆಗೆ ನೇಮಕಾತಿ ವಿಚಾರವಾಗಿ ಕೆಲ ಕಾರ್ಯವಿಧಾನಗಳನ್ನೂ ಸೂಚಿಸಿತ್ತು.ಅಸ್ಥಾನ ನೇಮಕ ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆ ವೇಳೆ ದೆಹಲಿ ಹೈಕೋರ್ಟ್, ಸುಪ್ರೀಂ ಕೋರ್ಟ್‌ನ ಈ ತೀರ್ಪು ಡಿಜಿಪಿಗಳ ನೇಮಕಕ್ಕೆ ಮಾತ್ರ ಅನ್ವಯಿಸುತ್ತದೆ. ದೆಹಲಿ ಸೇರಿದಂತೆ ಇತರೆ ನಗರಗಳ ಪೊಲೀಸ್ ಕಮಿಷನರ್‌ಗಳ ಆಯ್ಕೆಗೆ ಇದನ್ನು ಪರಿಗಣಿಸಲಾಗುವುದಿಲ್ಲ ಎಂದು ಹೇಳಿದೆ. ಹೈಕೋರ್ಟ್‌ನ ಈ ತೀರ್ಪು ಪುನರಾವರ್ತಿತ ಪರಿಣಾಮ ಉಂಟು ಮಾಡುವ ಸಾಧ್ಯತೆ ಇದೆ. ಈ ಸಂಬಂಧ ನಾವು ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ಪೀಠವು ಹೇಳಿದೆ.

ಏಪ್ರಿಲ್‌ನಲ್ಲಿ ಈ ಕುರಿತ ವಿಚಾರಣೆ ನಡೆಸಿ ಸಮಸ್ಯೆ ಬಗೆಹರಿಸುವುದಾಗಿಯೂ ನ್ಯಾಯಪೀಠ ತಿಳಿಸಿದೆ.

ನಿವೃತ್ತ ಸೈನಿಕರ ಪಿಂಚಣಿ ಪಾವತಿ ಗಡುವು ವಿಸ್ತರಣೆ: ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ಒಂದನೇ ಪುಟದಿಂದ...

ಬಾಕಿ ಮೊತ್ತ ಪಾವತಿಸಲು ಮಾರ್ಚ್ 15ರವರೆಗೂ ಕಾಲಾವಕಾಶ ನೀಡುವಂತೆ ಸಚಿವಾಲಯವು ನ್ಯಾಯಾಲಯಕ್ಕೆ ಮನವಿ ಮಾಡಿತ್ತು. ಈ ವರ್ಷದ ಜನವರಿ 9ರಂದು ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯ ಸಚಿವಾಲಯದ ಮನವಿ ಪುರಸ್ಕರಿಸಿತ್ತು. ಆದರೆ ಜನವರಿ 20ರಂದು ಸುತ್ತೋಲೆಯೊಂದನ್ನು ಹೊರಡಿಸಿದ್ದ ಸಚಿವಾಲಯವು ಪಿಂಚಣಿದಾರರಿಗೆ ನೀಡಬೇಕಿರುವ ಬಾಕಿ ಮೊತ್ತವನ್ನು ನಾಲ್ಕು ಕಂತುಗಳಲ್ಲಿ ಪಾವತಿ ಮಾಡುವುದಾಗಿ ತಿಳಿಸಿತ್ತು.

'ಬಾಕಿ ಮೊತ್ತ ಪಾವತಿಸಲು ನಾವು ನಿಮಗೆ ಮಾರ್ಚ್ 15ರವರೆಗೂ ಗಡುವು ನೀಡಿದ್ದೆವು. ಹೀಗಿದ್ದ ಮೇಲೂ ನಾಲ್ಕು ಕಂತುಗಳಲ್ಲಿ ಬಾಕಿ ಮೊತ್ತ ಪಾವತಿಸುವುದಾಗಿ ನೀವು ಹೇಗೆ ಸುತ್ತೋಲೆ ಹೊರಡಿಸಿದಿರಿ. ನಿಮ್ಮ ಕಾರ್ಯದರ್ಶಿ ವಿರುದ್ಧ ನಾವು ಏಕೆ ಕ್ರಮ ಕೈಗೊಳ್ಳಬಾರದು' ಎಂದು ನ್ಯಾಯಪೀಠವು ಪ್ರಶ್ನಿಸಿತು ಎಂದು 'ಪಿಟಿಐ' ವರದಿ ಮಾಡಿದೆ.

'ಸುತ್ತೋಲೆ ಹೊರಡಿಸಿದ್ದಕ್ಕಾಗಿ ನಿಮ್ಮ ಕಾರ್ಯದರ್ಶಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಅವರಿಗೆ ಹೇಳಿ. ಯಾರೇ ಆದರೂ ಸರಿ ನ್ಯಾಯಾಲಯದ ಪ್ರಕ್ರಿಯೆಯ ಪಾವಿತ್ರ್ಯತೆ ಕಾಪಾಡಬೇಕು. ನಿಮ್ಮ ಕಾರ್ಯದರ್ಶಿ ಸುತ್ತೋಲೆ ಹಿಂದಕ್ಕೆ ಪಡೆಯುತ್ತಾರೋ ಅಥವಾ ನಾವು ರಕ್ಷಣಾ ಸಚಿವಾಲಯಕ್ಕೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿಗೊಳಿಸಬೇಕೊ? ಕಾನೂನು ಕೈಗೆತ್ತಿಕೊಳ್ಳುವ ಯಾವ ಅಧಿಕಾರವೂ ಸಚಿವಾಲಯಕ್ಕೆ ಇಲ್ಲ. ಮಾರ್ಚ್ 15ರೊಳಗೆ ಪಿಂಚಣಿ ಮೊತ್ತ ಪಾವತಿಸುವಂತೆ ನಾವು ಹೇಳಿಯಾಗಿದೆ. ಹೀಗಿದ್ದರೂ ಸುತ್ತೋಲೆ ಹೊರಡಿಸಿದ್ದು ಏಕೆ? ನೀವು ಇಲ್ಲಿ ಯುದ್ಧ ಮಾಡುತ್ತಿಲ್ಲ. ಕಾನೂನಿನ ನಿಯಮದ ವಿರುದ್ಧ ಹೋರಾಡುತ್ತಿದ್ದೀರಿ' ಎಂದು ಕಿಡಿಕಾರಿದೆ.

'22 ಲಕ್ಷ ಪಿಂಚಣಿದಾರರ ಪೈಕಿ ಈಗಾಗಲೇ ಎಂಟು ಲಕ್ಷ ಮಂದಿಗೆ ಸರ್ಕಾರವು ಪಿಂಚಣಿ ಮೊತ್ತ ಪಾವತಿಸಿದೆ. ನ್ಯಾಯಾಲಯದ ಆದೇಶದ ಅನುಸಾರ ಪ್ರಕ್ರಿಯೆ ನಡೆಸಲು ಸಚಿವಾಲಯಕ್ಕೆ ಇನ್ನಷ್ಟು ಕಾಲಾವಕಾಶ ನೀಡಬೇಕು. ಏಪ್ರಿಲ್ ಎರಡನೇ ಅಥವಾ ಮೂರನೇ ವಾರದಲ್ಲಿ ಅರ್ಜಿಯ ವಿಚಾರಣೆ ನಿಗದಿಪಡಿಸಿದರೆ ಉತ್ತಮ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್.ವೆಂಕಟರಮಣಿ ಅವರು ನ್ಯಾಯಪೀಠಕ್ಕೆ ಕೋರಿದರು.

'ನಿಗದಿಯಂತೆ ಮಾರ್ಚ್ 15ರೊಳಗೇ ಪಿಂಚಣಿ ಮೊತ್ತ ಪಾವತಿಸಬೇಕು. ತಪ್ಪಿದಲ್ಲಿ ಶೇ 9ರಷ್ಟು ಬಡ್ಡಿ ವಿಧಿಸಬೇಕಾಗುತ್ತದೆ' ಎಂದು ನ್ಯಾಯಪೀಠವು ವೆಂಕಟರಮಣಿ ಅವರಿಗೆ ಎಚ್ಚರಿಕೆ ನೀಡಿತು. ಹೋಳಿ ಹಬ್ಬದ ರಜೆಯ ಬಳಿಕ ಅರ್ಜಿಯ ವಿಚಾರಣೆ ನಡೆಸುವುದಾಗಿಯೂ ತಿಳಿಸಿತು.

ನಾಗಾಲ್ಯಾಂಡ್, ಮೇಘಾಲಯ: ಶಾಂತಿಯುತ ಮತದಾನ

ಗುವಾಹಟಿ: ನಾಗಾಲ್ಯಾಂಡ್ ಮತ್ತು ಮೇಘಾಲಯ ವಿಧಾನಸಭೆಗೆ ಸೋಮವಾರ ನಡೆದ ಚುನಾವಣೆಯಲ್ಲಿ ಪ್ರಾಥಮಿಕ ಮಾಹಿತಿ ಪ್ರಕಾರ ಕ್ರಮವಾಗಿ ಶೇ 85.35 ಮತ್ತು 77.55ರಷ್ಟು ಮತದಾನವಾಗಿದೆ.

ಹಲವು ಮತದಾನ ಕೇಂದ್ರಗಳಿಂದ ಅಂಕಿಅಂಶಗಳು ಇನ್ನೂ ಬರಬೇಕಿರುವುದರಿಂದ ಒಟ್ಟು ಮತದಾನ ಪ್ರಮಾಣವು ಏರಿಕೆಯಾಗುವ ಸಾಧ್ಯತೆ ಇದೆ.

ನಾಗಾಲ್ಯಾಂಡ್‌ನಲ್ಲಿ ಚುನಾವಣೆ ವೇಳೆ ಮೂರು ಕಡೆ ಹಿಂಸಾತ್ಮಕ ಘಟನೆಗಳು ನಡೆದ ಬಗ್ಗೆ ವರದಿಯಾಗಿದೆ. ಎರಡು ಪ್ರತ್ಯೇಕ ಘಟನೆಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಮತ್ತು ಇಬ್ಬರು ನಾಗರಿಕರು ಗಾಯಗೊಂಡಿದ್ದಾರೆ. ವೋಖಾ ಜಿಲ್ಲೆಯ ಭಂಡಾರಿ ವಿಧಾನಸಭಾ ಕ್ಷೇತ್ರದ ಮತದಾನ ಕೇಂದ್ರದಲ್ಲಿ ನಡೆದ ಸಂಘರ್ಷವನ್ನು ನಿಯಂತ್ರಣಕ್ಕೆ ತರಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು ಎಂದು ನಾಗಾಲ್ಯಾಂಡ್‌ನ ಮುಖ್ಯ ಚುನಾವಣಾ ಅಧಿಕಾರಿ ಶಶಾಂಕ್ ಶೇಖರ್ ತಿಳಿಸಿದರು.

ಉಭಯ ರಾಜ್ಯಗಳ ತಲಾ 60 ವಿಧಾನಸಭಾ ಕ್ಷೇತ್ರಗಳ ಪೈಕಿ ತಲಾ 59 ಕ್ಷೇತ್ರಗಳಲ್ಲಿ ಒಂದೇ ಬಾರಿ ಸೋಮವಾರ ಮತದಾನ ನಡೆದಿದೆ. ನಾಗಾಲ್ಯಾಂಡ್‌ನಲ್ಲಿ ಬಿಜೆಪಿ ಅಭ್ಯರ್ಥಿಯೊಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮೇಘಾಲಯದ ಸೊಹಿಯಾಂಗ್ ಕ್ಷೇತ್ರದಲ್ಲಿ ಯುಡಿಪಿ ಪಕ್ಷದ ಅಭ್ಯರ್ಥಿ ಮೃತಪಟ್ಟ ಹಿನ್ನೆಲೆಯಲ್ಲಿ ಚುನಾವಣೆಯನ್ನು ಮುಂದೂಡಲಾಗಿದೆ. 2018ರ ಚುನಾವಣೆಯಲ್ಲಿ ಎರಡೂ ರಾಜ್ಯಗಳಲ್ಲಿ ಶೇ 85ರಷ್ಟು ಮತದಾನವಾಗಿತ್ತು.

ಕಾಂಗ್ರೆಸ್: ಬೊಕ್ಕಸ ಭರ್ತಿಗೆ ಹಲವು ಯೋಜನೆ

ರಾಯಪುರ: ಕಾಂಗ್ರೆಸ್ ತನ್ನ ಬೊಕ್ಕಸವನ್ನು ಭರ್ತಿ ಮಾಡಿಕೊಳ್ಳಲು ಹಲವು ಯೋಜನೆಗಳನ್ನು ರೂಪಿಸಿದ್ದು, ಇದಕ್ಕಾಗಿ ಇತ್ತೀಚೆಗೆ ಇಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಪಕ್ಷದ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರಲಾಗಿದೆ.

ಮನೆ ಮನೆ ದೇಣಿಗೆ ಸಂಗ್ರಹ, ಆನ್‌ಲೈನ್ ದೇಣಿಗೆ ಸಂಗ್ರಹ ಅಭಿಯಾನವನ್ನು ಉದ್ದೇಶಿಸಲಾಗಿದೆ. ಜೊತೆಗೆ ಪಕ್ಷದ ಸಂಸದರು, ಶಾಸಕರು ಹಾಗೂ ಎಂಎಲ್‌ಸಿಗಳು ಪ್ರತಿ ವರ್ಷವೂ ತಮ್ಮ ಒಂದು ತಿಂಗಳ ಸಂಬಳವನ್ನು ದೇಣಿಗೆ ನೀಡಬೇಕು ಎಂದು ಪಕ್ಷ ಕಡ್ಡಾಯ ಮಾಡಿದೆ.

ಆದಾಯ ತೆರಿಗೆ ಪಾವತಿಸುವ ಪ್ರತಿಯೊಬ್ಬ ಸದಸ್ಯರೂ ಪಕ್ಷಕ್ಕೆ ಪ್ರತಿ ವರ್ಷ ₹1 ಸಾವಿರ ನೀಡಬೇಕು. ಗ್ರಾಮ ಪಂಚಾಯಿತಿ ಅಧ್ಯಕ್ಷ, ಬ್ಲಾಕ್ ಹಾಗೂ ಜಿಲ್ಲಾ ಪಂಚಾಯಿತಿ ಅಧ್ಯಕ್ಷರೂ ಪ್ರತಿ ವರ್ಷ ತಮ್ಮ ಒಂದು ಬಾರಿಯ ಗೌರವಧನವನ್ನು ನೀಡಬೇಕು. ಕಾರ್ಯಕರ್ತನ ತಿಂಗಳ ಆದಾಯವು ₹500ರಷ್ಟಿದ್ದರೆ, ತಿಂಗಳಿಗೆ ಒಂದು ರೂಪಾಯಿ ದೇಣಿಗೆ ನೀಡಬೇಕು. ಒಂದು ವೇಳೆ ಸದಸ್ಯನ ತಿಂಗಳ ಆದಾಯವು ₹500ಕ್ಕಿಂತ ಹೆಚ್ಚಿದ್ದರೆ, ತನ್ನ ಆದಾಯದ ಶೇ 1ರಷ್ಟನ್ನು ಪ್ರತಿ ವರ್ಷ ಪಕ್ಷಕ್ಕೆ ನೀಡಬೇಕು ಎಂಬುದು ಈ ಹಿಂದೆ ಕಡ್ಡಾಯವಾಗಿತ್ತು.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ (ಬಿಎಸ್‌ಡಬ್ಲ್ಯೂಎಂಎಲ್)
2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು–560052.

ಸಂ: ಉಪ್ರವ್ಯ–2/ಬೆಂಘತ್ಯಾನಿನಿ/ತಿದ್ದುಪಡಿ–19/22–23 ದಿನಾಂಕ: 27.02.2023

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿ ವಿಸ್ತರಣೆ
ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ: DGM-2/BSWML/TEND/19/2022-23 ದಿನಾಂಕ: 20.02.2023

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ. ಟೆಂಡರ್ ವೇಳಾಪಟ್ಟಿಯ ಬದಲಾವಣೆಯನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಡೇಟ್ ಮಾಡಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in**ಗೆ ಭೇಟಿ ನೀಡಬಹುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2,
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾಪ್ರ/4963/ಎಎಎ/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:38/2022–23/2452ದಿ: 24–02–2023

ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

NRDWP JJM ಯೋಜನೆಯಡಿ ಬ್ಯಾಡಗಿ ಮತ್ತು ಹಿರೇಕೆರೂರ ತಾಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.
(1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : **06–03–2023** ರ 17:30 ಗಂಟೆವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ)ದಿನಾಂಕ:**07–03–2023** ರ 17:31 ಗಂಟೆ ನಂತರ (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : **09–03–2023**ರ 10:00 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. : ದಿನಾಂಕ : **02–03–2023** ರಂದು ಬೆಳಿಗ್ಗೆ 11:00 ಗಂಟೆಗೆ
ಇಂಡೆಂಟ್ ನಂ :– (1) 55869 (2) 57553 (3) 57567 (4) 57381 (5) 56348 (6) 56346 (7) 57440.

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್(ಪ್ರಭಾರ),
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/571/2022–23

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ ಕ್ಯಾಂಪಸ್, ಬೆಂಗಳೂರು–560065.

ಸಂಖ್ಯೆ: ಆಅ/ಟಿ.ಎನ್/494/2022-23 ದಿನಾಂಕ: 11–02–2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಲೆಕ್ಕ ಪರಿಶೋಧನಾ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ–5 ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ನೋಂದಣಿ ಪಡೆದ ನುರಿತ ಮತ್ತು ಪರಿಣಿತವುಳ್ಳ ಚಾರ್ಟೆಡ್ ಅಕೌಂಟೆಂಟ್ಸ್‌ರವರಿಂದ **ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (1) ವಿವಿಧ ಏಜೆನ್ಸಿಗಳಿಂದ ಪ್ರಾಯೋಜಿಸಲ್ಪಟ್ಟ ಯೋಜನೆ/ ಎಲ್ಲಾ ಯೋಜನೆಗಳ ಲೆಕ್ಕ ಪರಿಶೋಧನೆ (2) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ (ವೇತನ ವಿಭಾಗ, ಕೆಲಸಗಳು, ತುರ್ತುಸಂದರ್ಭ ಮತ್ತು ಬಜೆಟ್ ವಿಭಾಗ) ಟಿ.ಡಿ.ಎಸ್ ನ ಇ–ಫೈಲಿಂಗ್‌ಗಳನ್ನು ದಿನಾಂಕ: 01.04.2023ರಿಂದ 31.03.2025 ರವರೆಗೆ ಎರಡು ವರ್ಷಗಳ ಅವಧಿಗೆ ನಿರ್ವಹಿಸಲು ಟೆಂಡರ್ ಕರೆಯಲಾಗಿದೆ.** ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕೆಲಸದ ವಿವರಗಳು ವೆಬ್‌ಸೈಟ್: **www.eproc.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿ. ರೂ.20,000/– ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಈ ಟೆಂಡರ್ ದ್ವಿಲಕೋಟೆ ಪದ್ಧತಿಯಲ್ಲಿದ್ದು, ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡನ್ನು ಒಳಗೊಂಡಿರುತ್ತದೆ. ಲೆಕ್ಕ ಪರಿಶೋಧನಾ ಸಂಸ್ಥೆಯವರು ಮುಂದೆ ತಿಳಿಸಿದ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಬೇಕಾಗುತ್ತದೆ. (1) ಕಂಪನಿ ನೋಂದಣಿ ಪ್ರಮಾಣ ಪತ್ರ, (2) ಜಿ.ಎಸ್.ಟಿ. ಪ್ರಮಾಣ ಪತ್ರ, (3) ವೃತ್ತಿ ಅನುಭವದ ಪ್ರಮಾಣ ಪತ್ರ, (4) ಇದೇ ರೀತಿಯ ಕೆಲಸಗಳನ್ನು ನಿರ್ವಹಿಸಿರುವ ಬಗ್ಗೆ ಪ್ರಮಾಣ ಪತ್ರ, (5) 3 ವರ್ಷಗಳ ವಹಿವಾಟಿನ ಪ್ರಮಾಣ ಪತ್ರ, (6) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.eproc.karnataka.gov.in** ಇಂದ ಪಡೆಯಬಹುದು. **ಪ್ರಿ–ಬಿಡ್ ಮೀಟಿಂಗ್ ದಿನಾಂಕ: 08.03.2023ರಂದು ಪೂರ್ವಾಹ್ನ 10.30 ಗಂಟೆಗೆ** ಆಗಿರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 13.03.2023 ಅಪರಾಹ್ನ 4.00** ಗಂಟೆಯವರೆಗೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 15.03.2023ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹಣಕಾಸಿನ ಬಿಡ್ಡನ್ನು **ದಿನಾಂಕ: 20.03.2023ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. 080–23332765 ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: **support@eprochelpdesk.com** ಅಥವಾ 8046010000/8068948777.

ಸಹಿ/–
ಆಸ್ತಿ ಅಧಿಕಾರಿಗಳು

ವಾಸಾಸಂಇ/ವಾಪ್ರ/4965/ಎಎಎ/2022–23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ–582101 ಜಿಲ್ಲಾ : ಗದಗ, ರಾಜ್ಯ : ಕರ್ನಾಟಕ
Email : apmcgadag4@gmail.com ☎: 08372-238354 ಫ್ಯಾಕ್ಸ : 08372-237897
ಸಂ:ಕೃಉಮಾಸ:ಗ:ನಿಹ/846/2022–23 ದಿನಾಂಕ : 23–02–2023

ಪ್ರಕಟಣೆ

ಗದಗ A.P.M.C ಯಿಂದ ಅಧಿಕೃತ ದಲ್ಲಾಲಿ ಲೈಸೆನ್ಸ್ ಹೊಂದಿರುವ ಹಾಗೂ ಕೃಷಿ ಮಾರಾಟ ಇಲಾಖೆಯ ಜಿಲ್ಲಾ ಉಪ/ಸಹಾಯಕ ನಿರ್ದೇಶಕರಿಂದ ವರ್ತಕರ ಲೈಸೆನ್ಸ್ ಪಡೆದು ಗದಗ A.P.M.C ಯ ಪ್ರಾಂಗಣದಲ್ಲಿ ವ್ಯವಹರಿಸುತ್ತಿರುವ ಮತ್ತು ಪ್ರಾಂಗಣದಲ್ಲಿ ಸ್ವಂತ ಅಂಗಡಿ / ಅಂಗಡಿ–ವ–ಗೋದಾಮು/ನಿವೇಶನ ಹೊಂದಿಲ್ಲದವರಿಗೆ ಗದಗ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವಿವಿಧ ಅಳತೆಯ ಈ ಕೆಳಕಂಡ ನಿವೇಶನಗಳನ್ನು ಮಾನ್ಯ ನಿರ್ದೇಶಕರು, ನಿಗದಿಪಡಿಸಿರುವ ನಿವೇಶನ ದರ ಪ್ರತಿ ಚದುರಡಿಗೆ ರೂ. **500/–** ರಂತೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ಅಧಿನಿಯಮ 1966 ಮತ್ತು ನಿಯಮಗಳು 1968, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ಮತ್ತು ಸಮಿತಿಯು ವಿಧಿಸುವ ಷರತ್ತು–ವ–ನಿಬಂಧನೆಗಳನ್ವಯ 10 ವರ್ಷಗಳ ಲೀಸ್–ಕಂ–ಸೇಲ್ ಆಧಾರದ ಮೇಲೆ ಹಂಚಿಕೆಗಾಗಿ ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೋಷ್ಟಕ–I
ಕಾಳುಕಡಿ ದಲ್ಲಾಲರು / ಖರೀದಿದಾರರು

ಕ್ರ. ಸಂ	ನಿವೇಶನಗಳ ಸಂಖ್ಯೆ	ನಿವೇಶನಗಳ ಪ್ರತಿಯೊಂದರ ಕ್ಷೇತ್ರ (ಚದುರ ಅಡಿಗಳಲ್ಲಿ)	ನಿವೇಶನದ ಮೌಲ್ಯ (ರೂ.ಗಳಲ್ಲಿ)	ನಿವೇಶನದ ಬೆಲೆಯ 25% ರಷ್ಟು ಭರಿಸಬೇಕಾದ ಮೊತ್ತ (ರೂ.ಗಳಲ್ಲಿ)	ಮಿಸಲಾತಿ ವಿವರ
1	2	3	4	5	6
1	42	60 X 135=8100	40,50,000/–	10,12,500/–	
2	42ಎ	60 X 130=7800	39,00,000/–	9,75,000/–	
3	42ಬಿ	60 X 130=7800	39,00,000/–	9,75,000/–	
4	43	60 X 130=7800	39,00,000/–	9,75,000/–	
5	43ಎ	60 X 130=7800	39,00,000/–	9,75,000/–	
6	150	80 X 180=14400	72,00,000/–	18,00,000/–	ಪರಿಶಿಷ್ಟ ಜಾತಿ
7	154	80 X 180=14400	72,00,000/–	18,00,000/–	
8	155	80 X 180=14400	72,00,000/–	18,00,000/–	
9	156	80 X 180=14400	72,00,000/–	18,00,000/–	
10	157	80 X 180=14400	72,00,000/–	18,00,000/–	ಎಫ್.ಪಿ.ಓ
11	158	80 X 180=14400	72,00,000/–	18,00,000/–	
12	159	ಅಸಮ ಅಳತೆ (29.52+42.64/2*180=6494)	32,47,000/–	8,11,750/–	ಪರಿಶಿಷ್ಟ ಜಾತಿ
13	256/ಎ	50X70=3500	17,50,000/–	4,37,500/–	
14	236/ಎ	50X60=3000	15,00,000/–	3,75,000/–	ಸಾಮಾನ್ಯ ಮಹಿಳೆ
15	229/ಎ	50X60=3000	15,00,000/–	3,75,000/–	ಪರಿಶಿಷ್ಟ ಪಂಗಡ
16	219/ಎ	60X125=7500	37,50,000/–	9,37,500/–	
17	198/ಎ	55X50=2750	13,75,000/–	3,43,750/–	
18	195/ಬಿ	55X50=2750	13,75,000/–	3,43,750/–	ಪರಿಶಿಷ್ಟ ಜಾತಿ
19	206	60X120=7200	36,00,000/–	9,00,000/–	
20	278	60X112.6=6756	33,78,000/–	8,44,500/–	ಎಫ್.ಪಿ.ಓ
21	281	60X112.6=6756	33,78,000/–	8,44,500/–	
22	287	50 X 112.6=5630	28,15,000/–	7,03,750/–	
23	287 ಎ	50 X 112.6=5630	28,15,000/–	7,03,750/–	
24	288	50 X 112.6=5630	28,15,000/–	7,03,750/–	ಪರಿಶಿಷ್ಟ ಜಾತಿ

ಕೋಷ್ಟಕ–II
ಒಣಮೆಣಸಿನಕಾಯಿ ದಲ್ಲಾಲರು / ಖರೀದಿದಾರರು

1	2	3	4	5	6
25	363	127.6+141/2 X50+51.6/2=6822	34,11,000/–	8,52,750/–	
26	364	141+154.6/2 X50+51.6/2=7508	37,54,000/–	9,38,500/–	
27	365	154.6+168/2 X50+51.6/2=8194	40,97,000/–	10,24,250/–	
28	366	168+181/2 X50+52/2=8900	44,50,000/–	11,12,500/–	ವಿಕಲಚೇತನ
29	340	45X120=5400	27,00,000/–	6,75,000/–	ಪರಿಶಿಷ್ಟ ಪಂಗಡ
30	341	45X120=5400	27,00,000/–	6,75,000/–	ಪರಿಶಿಷ್ಟ ಜಾತಿ
31	342	45X120=5400	27,00,000/–	6,75,000/–	ಎಫ್.ಪಿ.ಓ
32	342ಎ	45X120=5400	27,00,000/–	6,75,000/–	ಸಾಮಾನ್ಯ ಮಹಿಳೆ
33	350	65X120=7800	39,00,000/–	9,75,000/–	
34	323ಎ	40X120=4800	24,00,000/–	6,00,000/–	
35	324	40X120=4800	24,00,000/–	6,00,000/–	
36	324ಎ	40X120=4800	24,00,000/–	6,00,000/–	ಪರಿಶಿಷ್ಟ ಜಾತಿ
37	325	40X120=4800	24,00,000/–	6,00,000/–	
38	325ಎ	40X120=4800	24,00,000/–	6,00,000/–	
39	326	40X120=4800	24,00,000/–	6,00,000/–	
40	326ಎ	40X120=4800	24,00,000/–	6,00,000/–	ಎಫ್.ಪಿ.ಓ
41	327	40X120=4800	24,00,000/–	6,00,000/–	
42	327ಎ	40X120=4800	24,00,000/–	6,00,000/–	ಪರಿಶಿಷ್ಟ ಜಾತಿ
43	328	40X120=4800	24,00,000/–	6,00,000/–	
44	329	40X120=4800	24,00,000/–	6,00,000/–	ಸಾಮಾನ್ಯ ಮಹಿಳೆ
45	330	40X120=4800	24,00,000/–	6,00,000/–	ಪರಿಶಿಷ್ಟ ಪಂಗಡ
46	331	40X120=4800	24,00,000/–	6,00,000/–	

ಕೋಷ್ಟಕ–III
ಹಣ್ಣಿನ ಮಾರಾಟದ ದಲ್ಲಾಲರು / ಖರೀದಿದಾರರು

1	2	3	4	5	6
47	01	24X50= 1500	7,50,000/–	1,87,500/–	
48	02	30X50= 1500	7,50,000/–	1,87,500/–	ಪರಿಶಿಷ್ಟ ಜಾತಿ
49	03	30X50= 1500	7,50,000/–	1,87,500/–	
50	04	30X50= 1500	7,50,000/–	1,87,500/–	ಎಫ್.ಪಿ.ಓ
51	05	30X50= 1500	7,50,000/–	1,87,500/–	
52	06	25+26.6/2*69.8=1800	9,00,000/–	2,25,000/–	
53	07	26.6+27.8/2*45.5=1238	6,19,000/–	1,54,750/–	
54	08	29.3+27.6/2*70.1+69.8/2=1979	9,89,500/–	2,47,375/–	ಪರಿಶಿಷ್ಟ ಜಾತಿ
55	09	30*50.5+51.6/2=1532	7,66,000/–	1,91,500/–	
56	10	30*51.6+52.9/2=1568	7,84,000/–	1,96,000/–	
57	11	30*52.9+54.4/2=1610	8,05,000/–	2,01,250/–	ಮಾಜಿ ಸೈನಿಕ
58	12	30*54.4+56/2=1656	8,28,000/–	2,07,000/–	ಸಾಮಾನ್ಯ ಮಹಿಳೆ
59	13	30*56+57.6/2=1704	8,52,000/–	2,13,000/–	ಪರಿಶಿಷ್ಟ ಪಂಗಡ ಮಹಿಳಾ
60	14	30*57.6+59/2=1749	8,74,,500/–	2,18,625/–	ಪರಿಶಿಷ್ಟ ಜಾತಿ ಮಹಿಳಾ
61	15	18.8+27.3/2*59+60.6/2=1677	8,38,500/–	2,09,625/–	ಎಫ್.ಪಿ.ಓಮಹಿಳಾ

ಷರತ್ತು ಹಾಗೂ ನಿಬಂಧನೆಗಳು : (1) ನಿವೇಶನಗಳನ್ನು ಹಂಚಿಕೆ ಪಡೆಯಲು ಇಚ್ಛಿಸುವವರು ಈ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲು ಇಲಾಖೆ / ಸಮಿತಿಯಿಂದ ನೀಡಲಾದ ಲೈಸನ್ಸ್ ಹೊಂದಿರತಕದ್ದು ಹಾಗೂ ನಿಯಮ 6 ರನ್ವಯ ಹಿಂದಿರುಗಿಸಲಾಗದ ನೋಂದಣಿ ಶುಲ್ಕ ರೂ. 500/– ನ್ನು ಪಾವತಿಸಿ ನೋಂದಣಿ ಪಡೆದ ನಂತರ ಹಿಂದಿರುಗಿಸಲಾಗದ ನಿಗಧಿತ ಅರ್ಜಿ ಶುಲ್ಕ ರೂ. **2360=00** ಗಳನ್ನು (ಶೇ.18ರಷ್ಟು ಜಿ.ಎಸ್.ಟಿ.ಸೇರಿ) ಪಾವತಿಸಿ ಅರ್ಜಿ ನಮೂನೆ 3 ನ್ನು ಮತ್ತು ಷರತ್ತುಗಳ ವಿವರಗಳನ್ನು ಪಡೆಯತಕ್ಕದ್ದು. (2) ಮೇಲಿನ ಕೋಷ್ಟಕದಲ್ಲಿರುವಂತೆ ನಿವೇಶನ ಮೌಲ್ಯದ ಶೇ.25 ಆರಂಭಿಕ ಠೇವಣಿಯನ್ನು ಕಾರ್ಯದರ್ಶಿ. ಎ.ಪಿ.ಎಮ್.ಸಿ. ಗದಗ ಇವರ ಹೆಸರಿಗೆ ಡಿ.ಡಿ. ಪಡೆದು ನಮೂನೆ–3 ರ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು. (3) ಆಸ್ತಿ ಹಂಚಿಕೆ ನಿಯಮಗಳು 2004 ರ ನಿಯಮ 17 ರನ್ವಯ ಮೀಸಲಾತಿ ಕಲ್ಪಿಸಲಾಗಿರುತ್ತದೆ. ಮೀಸಲಾತಿಯಡಿ ಅರ್ಜಿ ಸಲ್ಲಿಸಿರುವವರು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಜಾತಿ ಪ್ರಮಾಣ ಪತ್ರ ಲಗತ್ತಿಸುವುದು. ಎಫ್.ಪಿ.ಓ ಮೀಸಲಾತಿಯಡಿ ಅರ್ಜಿ ಸಲ್ಲಿಸಿರುವವರು ಕಂಪನಿ ಆಕ್ಟ ಅಡಿಯಲ್ಲಿ ನೊಂದಣಿ ಪಡೆದಿರುವ ದಾಖಲಾತಿಗಳನ್ನು ಸಲ್ಲಿಸುವುದು. ಎಫ್.ಪಿ.ಓ ಸಂಸ್ಥೆಗೆ ನಿಯಮ 17(2)(ಬಿ)ರನ್ವಯ ನಿವೇನ ಮೌಲ್ಯದಲ್ಲಿ ಶೇ. 50 ರಷ್ಟು ರೀಯಾಯತಿ ಪಡೆಯಲು ಅರ್ಹರಿರುತ್ತಾರೆ. ಎಫ್.ಪಿ.ಓ ಮಹಿಳೆ, ಸಾಮಾನ್ಯ ಮಹಿಳೆ ಮೀಸಲಾತಿಯಡಿ ಅರ್ಜಿ ಸಲ್ಲಿಸುವವರು ಸಂಸ್ಥೆಯಲ್ಲಿನ ಎಲ್ಲಾ ಸದಸ್ಯರು ಕಡ್ಡಾಯವಾಗಿ ಮಹಿಳೆಯರೆ ಆಗಿರತಕ್ಕದ್ದು. ಮೀಸಲಾತಿಯಡಿಯಲ್ಲಿ ನಿವೇಶನ ಹಂಚಿಕೆ ಕೋರಿ ಯಾವುದೇ ಅರ್ಜಿಗಳು ಬಾರದಿದ್ದಲ್ಲಿ ಸರಿ ನಿವೇಶನಗಳನ್ನು ಸಾಮಾನ್ಯ ವರ್ಗದವರಿಗೆ ಹಂಚಿಕೆ ಮಾಡಲು ನಿಯಮ 17 ರನ್ವಯ ಕ್ರಮ ಕೈಗೊಳ್ಳಲು ಅವಕಾಶವಿರುವುದರಿಂದ ಸಾಮಾನ್ಯ ವರ್ಗದವರೂ ಕೂಡ ಮೀಸಲಿಟ್ಟಿರುವ ನಿವೇಶನಗಳಿಗೂ ಅರ್ಜಿ ಸಲ್ಲಿಸಬಹುದಾಗಿದೆ. (4) ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ : **14–03–2023** ರಂದು ಸಂಜೆ 4–30 ಗಂಟೆಯವರೆಗೆ ಸ್ವೀಕರಿಸಲಾಗುವುದು. ನಂತರ ಬರುವ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. (5) ಈಗಾಗಲೇ ಸಮಿತಿಯ ಪ್ರಾಂಗಣದಲ್ಲಿ ನಿವೇಶನ / ಕಟ್ಟಡ ಹೊಂದಿರುವವರು ಹಂಚಿಕೆಗೆ ಅರ್ಹರಾಗಿರುವುದಿಲ್ಲ. (6) ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತೀರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದ್ದು, ಸಮಿತಿಯ ತೀರ್ಮಾನವೇ ಅಂತಿವಾಗಿರುತ್ತದೆ. (7) ನಿವೇಶನ ಹಂಚಿಕೆಯು ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರ ಅನುಮೋದನೆಗೆ ಒಳಪಟ್ಟಿದ್ದು ಇಲಾಖಾ ಅಭಿಯಂತರರು, ಅಳತೆ ಮಾಡಿ ನೀಡುವ ಅಳತೆಯೇ ಅಂತಿಮವಾಗಿರುತ್ತದೆ ಹಾಗೂ ಇದಕ್ಕೆ ತಕ್ಕಂತೆ ಮೌಲ್ಯವನ್ನು ಪಾವತಿಸಿಕೊಳ್ಳಲಾಗುವುದು. (8) ಅರ್ಜಿದಾರರು ಸಮಿತಿಗೆ ಸಲ್ಲಿಸಲಾದ ಎಲ್ಲ ಮಾಹಿತಿಯು ಸತ್ಯವೆಂದು ನೋಟರಿ ಸಮ್ಮುಖದಲ್ಲಿ ಪ್ರಮಾಣಿಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. (9) ನಿವೇಶನ ಹಂಚಿಕೆ ಕೋರಿ ಅರ್ಜಿ ಸಲ್ಲಿಸುವ ಪೇಟೆ ಕಾರ್ಯಕರ್ತರು ನಿಗದಿತ ಅರ್ಜಿಯ ನಮೂನೆಗಳಲ್ಲಿ ಸತ್ಯಾಂಶವುಳ್ಳ ಸರಿಯಾದ ಹಾಗೂ ನಿಖರವಾದ ಮಾಹಿತಿಯನ್ನು ನೀಡತಕ್ಕದ್ದು. ನೀಡಲಾದ ಮಾಹಿತಿಯು ತಪ್ಪೆಂದು ಸಮಿತಿಗೆ ತಿಳಿದುಬಂದಲ್ಲಿ ಸದರಿಯವರ ಅರ್ಜಿಯನ್ನು ನಿಯಮಾನುಸಾರ ತೀರಸ್ಕರಿಸಲಾಗುವುದು. (10) ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನಿವೇಶನಗಳ ಆದ್ಯತೆ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಿದಲ್ಲಿ ಅತೀ ಹೆಚ್ಚಿನ ವಿಸ್ತೀರ್ಣದ ನಿವೇಶನಕ್ಕೆ ನಿಗದಿಪಡಿಸಲಾದ ಲೀಜ್–ಕಂ–ಸೇಲ್‌ನ ಠೇವಣಿ ಮೊತ್ತವನ್ನು ಪಾವತಿಸತಕ್ಕದ್ದು. (11) ಯಾವುದೇ ಕಾರಣ ನೀಡದೇ ಈ ಪ್ರಕಟಣೆಗೆ ಅನುಸಾರವಾಗಿ ಬರುವ ಅರ್ಜಿಗಳನ್ನು ಷರತ್ತುಗಳನ್ನು ಅಥವಾ ಪ್ರಕಟಣೆಯಲ್ಲಿನ ವಿವರಗಳನ್ನು ಕಾರಣವಿಲ್ಲದೇ ಅಂಗೀಕರಿಸುವ / ತಿರಸ್ಕರಿಸುವ ಅಥವಾ ಮಾರ್ಪಡಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. (12) ಹೆಚ್ಚಿನ ವಿವರ ಹಾಗೂ ಷರತ್ತು–ವ–ನಿಬಂಧನೆಗಳ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ

ಸಹಿ/– ಜಿಲ್ಲಾಧಿಕಾರಿಗಳು ಗದಗ ಹಾಗೂ ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/693/2022–23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ಪರಿಪೂರ್ಣತೆಯ ಬೆನ್ನುಹತ್ತದಿರಿ. ಹಾಗೆ ಮಾಡಿದರೆ, ನೀವು ಎಂದಿಗೂ ಗುರಿ ಮುಟ್ಟಲಾರಿರಿ.
ಮೇರಿ ಕ್ಯೂರಿ

ಶರಾವತಿ ಯೋಜನೆ ಸಂತ್ರಸ್ತರನ್ನು ಅಭದ್ರತೆಯಿಂದ ರಕ್ಷಿಸಿ

ಸಾರ್ವಜನಿಕ ಬಳಕೆಯ ಉದ್ದೇಶ ಹಾಗೂ ಸರ್ಕಾರದ ವಿವಿಧ ಯೋಜನೆಗಳಿಂದ ಜಮೀನು, ನೆಲೆ ಕಳೆದುಕೊಂಡು ಸಂತ್ರಸ್ತರಾದವರ ಪುನರ್ವಸತಿಗಾಗಿ ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಗಳಿಗೆ ಬಳಕೆ ಮಾಡಲು ಡಿನೋಟಿಫೈ ಮಾಡಿ 1994ರಿಂದ 2017ರವರೆಗೆ ಹೊರಡಿಸಿದ್ದ 56 ಅಧಿಸೂಚನೆಗಳನ್ನು ಅರಣ್ಯ ಇಲಾಖೆಯು ರದ್ದುಗೊಳಿಸಿದೆ. ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು ಮತ್ತು ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಅರಣ್ಯ ಜಮೀನನ್ನು ಕರ್ನಾಟಕ ಅರಣ್ಯ ಕಾಯ್ದೆ-1963ರ ಸೆಕ್ಷನ್ 28ರ ಅಡಿಯಲ್ಲಿ ಡಿನೋಟಿಫೈ ಮಾಡಿ ಆದೇಶ ಹೊರಡಿಸಲಾಗಿತ್ತು. ಅಂತಹ ಎಲ್ಲ ಆದೇಶಗಳನ್ನು ರದ್ದುಗೊಳಿಸಿರುವ ಅರಣ್ಯ ಇಲಾಖೆಯು ಹತ್ತಾರು ಸಾವಿರ ಎಕರೆ ಜಮೀನನ್ನು ಅರಣ್ಯ ಪ್ರದೇಶ ಎಂಬುದಾಗಿ ಪುನಃ ಘೋಷಿಸಿದೆ. ಈ ಆದೇಶವು ಪರಿಸರವಾದಿಗಳಿಗೆ ಖುಷಿ ತಂದಿರಬಹುದು. ಆದರೆ, 1960ರ ದಶಕದಲ್ಲಿ ಶರಾವತಿ ಜಲ ವಿದ್ಯುತ್ ಯೋಜನೆಗಾಗಿ ಮನೆ, ಜಮೀನು ಎಲ್ಲವನ್ನೂ ಕಳೆದುಕೊಂಡು ಸಂತ್ರಸ್ತರಾದ ಮೂರು ಸಾವಿರಕ್ಕೂ ಹೆಚ್ಚು ಕುಟುಂಬಗಳನ್ನು ಇದೇ ಆದೇಶವು ಆತಂಕಕ್ಕೆ ತಳ್ಳಿದೆ.

ಶರಾವತಿ ಜಲ ವಿದ್ಯುತ್ ಯೋಜನೆಗಾಗಿ ಸರ್ವಸ್ವವನ್ನೂ ಕಳೆದುಕೊಂಡ ಸಂತ್ರಸ್ತರಾದ ಕುಟುಂಬಗಳಿಗೆ ಸರಿಯಾದ ರೀತಿಯಲ್ಲಿ ಪುನರ್ವಸತಿ ಕಲ್ಪಿಸುವುದೂ ಮುಖ್ಯ

ಡಿನೋಟಿಫಿಕೇಶನ್ ಆದೇಶಗಳನ್ನು ರದ್ದುಪಡಿಸಿ ಪುನಃ ಅರಣ್ಯ ಪ್ರದೇಶ ಎಂದು ಘೋಷಿಸಲಾಗಿರುವ ಜಮೀನಿನಲ್ಲಿ ಸುಮಾರು 10,000 ಎಕರೆಯಷ್ಟು ಪ್ರದೇಶವು ಶರಾವತಿ ಜಲ ವಿದ್ಯುತ್ ಯೋಜನೆಯಿಂದ ಸಂತ್ರಸ್ತವಾದ ಕುಟುಂಬಗಳ ಪುನರ್ವಸತಿಗೆ ಬಳಕೆಯಾಗಿತ್ತು. ಅರಣ್ಯ ಜಮೀನನ್ನು ಡಿನೋಟಿಫೈ ಮಾಡಿದ್ದ 56 ಅಧಿಸೂಚನೆಗಳನ್ನು ರದ್ದುಗೊಳಿಸಿ 2022ರ ಸೆಪ್ಟೆಂಬರ್ 28ರಂದು ಅರಣ್ಯ ಇಲಾಖೆ ಆದೇಶ ಹೊರಡಿಸಿತ್ತು. ಇದೇ ಫೆಬ್ರುವರಿ 16ರಂದು ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. 1920 ಮತ್ತು 1926ರಲ್ಲಿ 'ರಾಜ್ಯ ಅರಣ್ಯ' ಎಂದು ಅಧಿಸೂಚನೆ ಹೊರಡಿಸಿದ್ದ ಎಂಟು ಪ್ರದೇಶಗಳನ್ನು ಶರಾವತಿ ಸಂತ್ರಸ್ತರ ಪುನರ್ವಸತಿಗಾಗಿ ಡಿನೋಟಿಫೈ ಮಾಡಿ 2017ರಲ್ಲಿ ಹೊರಡಿಸಿದ್ದ ಆದೇಶವೊಂದನ್ನು ಪ್ರಶ್ನಿಸಿ ಗಿರೀಶ್ ಆಚಾರ್ ಎಂಬ ಪರಿಸರವಾದಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಕರ್ನಾಟಕ ಅರಣ್ಯ ಕಾಯ್ದೆ-1963ರ ಸೆಕ್ಷನ್ 28ರ ಅಡಿಯಲ್ಲಿ ಅರಣ್ಯ ಜಮೀನನ್ನು ಡಿನೋಟಿಫೈ ಮಾಡುವ ಮೊದಲು ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಸೆಕ್ಷನ್-2ರ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಎಂದು ಹೈಕೋರ್ಟ್ ವಿಭಾಗೀಯ ಪೀಠ 2021ರಲ್ಲಿ ತೀರ್ಪು ನೀಡಿತ್ತು. [illegible]

[illegible] ದುರದೃಷ್ಟಕರ. ಇಂತಹ ದುಃಸ್ಥಿತಿ ಇನ್ನೂ ಮುಂದುವರಿಯಲು ಬಿಡಬಾರದು. ಸಂತ್ರಸ್ತರ ಪುನರ್ವಸತಿಗಾಗಿ ಮೀಸಲಿಟ್ಟಿದ್ದ ಕಂದಾಯ ಜಮೀನಿನ ಒತ್ತುವರಿ ಪತ್ತೆಮಾಡಿ ತೆರವುಗೊಳಿಸಬೇಕು. ಈಗಾಗಲೇ ಸಂತ್ರಸ್ತ ಕುಟುಂಬಗಳ ಸ್ವಾಧೀನದಲ್ಲಿರುವ ಅರಣ್ಯ ಜಮೀನನ್ನು ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಅಡಿಯಲ್ಲಿ ಕೇಂದ್ರದ ಅನುಮತಿ ಪಡೆದು ಪುನರ್ವಸತಿ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆ ಮೂಲಕ ಮೂರು ಸಾವಿರಕ್ಕೂ ಹೆಚ್ಚು ಕುಟುಂಬಗಳ ಭವಿಷ್ಯದ ಮೇಲೆ ಕವಿದಿರುವ ಆತಂಕದ ಕಾರ್ಮೋಡವನ್ನು ಸರಿಸುವ ಕೆಲಸವನ್ನು ರಾಜ್ಯ ಸರ್ಕಾರ ಬದ್ಧತೆಯಿಂದ ಮಾಡಬೇಕು.

ದಿನದ ಟ್ವೀಟ್

ಮಾತನಾಡುವುದು ಯಾವಾಗ?

ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿದ್ದ ಗೌತಮ್ ಅದಾನಿ ಕೆಲವು ವಾರಗಳಿಗೂ ಕಡಿಮೆ ಅವಧಿಯಲ್ಲಿ ಈಗ 38ನೆಯ ಸ್ಥಾನಕ್ಕೆ ಇಳಿದಿದ್ದಾರೆ. ಅವರ ಒಟ್ಟು ಆಸ್ತಿಯ ಮೌಲ್ಯವು 154 ಬಿಲಿಯನ್ ಡಾಲರ್ (₹12.73 ಲಕ್ಷ ಕೋಟಿ) ಇದ್ದಿದ್ದು 33.3 ಬಿಲಿಯನ್ ಡಾಲರ್‌ಗೆ (₹ 2.75 ಲಕ್ಷ ಕೋಟಿ) ಇಳಿಕೆಯಾಗಿದೆ. ಇದು ಹಿಂದೆಂದೂ ಆಗಿರಲಿಲ್ಲ. ಬಂಡವಾಳ ಮಾರುಕಟ್ಟೆಗಳು ಮಾತನಾಡಿವೆ. ಪ್ರಧಾನಿಯವರು ಮಾತನಾಡುವುದು ಯಾವಾಗ?

ಸಂಜಯ್ ಝಾ, ಲೇಖಕ, ರಾಜಕಾರಣಿ

ಕಿಡಿನುಡಿ

ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ, ರಾಜ್ಯ ಸರ್ಕಾರವು ಎರಡು ತಿಂಗಳ ಅವಧಿಯಲ್ಲಿ 7,361 ಜನರ ಹೆಸರನ್ನು ರೌಡಿ ಪಟ್ಟಿಯಿಂದ ಕೈಬಿಟ್ಟಿದೆ. ಹಿಂದಿನ ಇಡೀ ವರ್ಷದಲ್ಲಿ ಹೆಸರು ಕೈಬಿಟ್ಟ ಸಂಖ್ಯೆಗಿಂತ ಇದು ಎರಡುಪಟ್ಟು ಹೆಚ್ಚು. ಚುನಾವಣೆಗಳಲ್ಲಿ ರೌಡಿಗಳ ಪಾತ್ರ ಮಹತ್ವದ್ದು. ಈಗ ಹೀಗೆ ಸಾಮೂಹಿಕವಾಗಿ ಹೆಸರು ಕೈಬಿಟ್ಟಿರುವುದು ಆಶ್ಚರ್ಯ ತರುವಂಥದ್ದೇನೂ ಅಲ್ಲ.

ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ
ಶನಿವಾರ 28-2-1998

● **ರಮೇಶ್, ಶಿಲ್ಪಾಗೆ ಅತ್ಯುತ್ತಮ ನಟ-ನಟಿ ಪ್ರಶಸ್ತಿ**

ಮಡಿಕೇರಿ, ಫೆ. 27– ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೆರಿಕಾ ಅಮೆರಿಕಾ' ಮತ್ತು ಟಿ.ಎಸ್.ನಾಗಾಭರಣ ನಿರ್ದೇಶನದ 'ನಾಗಮಂಡಲ' ಕನ್ನಡ ಚಿತ್ರಗಳು 1996–97ನೇ ಸಾಲಿನ ರಾಜ್ಯಮಟ್ಟದ ಮೊದಲ ಮತ್ತು ಎರಡನೇ 'ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ'ಗೆ ಪಾತ್ರವಾಗಿವೆ.

'ಅಮೆರಿಕಾ ಅಮೆರಿಕಾ' ಚಿತ್ರದ 'ಸೂರ್ಯ' ಪಾತ್ರಧಾರಿ ರಮೇಶ್ ಮತ್ತು 'ಜನುಮದ ಜೋಡಿ' ಚಿತ್ರದ 'ಕನಕ' ಶಿಲ್ಪಾ ಈ ಸಾಲಿನ ಅತ್ಯುತ್ತಮ ನಟ– ನಟಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

● **ಕೊಜೆಂಟ್ರಿಕ್ಸ್: ಸಿಬಿಐ ತನಿಖೆಗೆ ಕೋರ್ಟ್ ಆದೇಶ**

ಬೆಂಗಳೂರು, ಫೆ. 27– ಮಂಗಳೂರು ಬಳಿಯ ನಂದಿಕೂರ್‌ನಲ್ಲಿ 1000 ಮೆಗಾವಾಟ್ ವಿದ್ಯುತ್ ಉತ್ಪಾದನೆ ಘಟಕವನ್ನು ಅಮೆರಿಕದ ಕೊಜೆಂಟ್ರಿಕ್ಸ್ ಕಂಪನಿಗೆ ಕಾಂಟ್ರಾಕ್ಟ್ ಕೊಟ್ಟಿರುವಲ್ಲಿ ಕಮಿಷನ್ ರೂಪದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಇರುವ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದು ಹೈಕೋರ್ಟ್ ಇಂದು ಆದೇಶಿಸಿತು.

50 ವರ್ಷಗಳ ಹಿಂದೆ
ಬುಧವಾರ, 28-2-1973

● **ಪಾಕ್ ಯುದ್ಧ ಕೈದಿಗಳ ಏಕಪಕ್ಷೀಯ ಬಿಡುಗಡೆ ಸಲಹೆ ತರ್ಕಶೂನ್ಯ: ಇಂದಿರಾ**

ನವದೆಹಲಿ, ಫೆ. 27– ಬಾಂಗ್ಲಾದೇಶದ ಒಪ್ಪಿಗೆ ಇಲ್ಲದೆ ಪಾಕಿಸ್ತಾನಿ ಯುದ್ಧ ಬಂದಿಗಳನ್ನು ಭಾರತ ಬಿಡುಗಡೆ ಮಾಡುವುದಿಲ್ಲ ಎಂದು ಇಂದು ಸ್ಪಷ್ಟಪಡಿಸಿದ ಪ್ರಧಾನಿ ಇಂದಿರಾ ಅವರು, ಬಂದಿಗಳನ್ನು ಭಾರತವೇ ಏಕಪಕ್ಷೀಯವಾಗಿ ವಾಪಸು ಕಳುಹಿಸಬೇಕೆಂಬ ಸಲಹೆಯನ್ನು 'ತರ್ಕರಹಿತ ಹಾಗೂ ಅವಾಸ್ತವಿಕ' ಎಂದು ತಳ್ಳಿಹಾಕಿದರು.

ಅಂತರರಾಷ್ಟ್ರೀಯ ವಾಸ್ತವಾಂಶಗಳನ್ನು ಕಡೆಗಣಿಸುವುದು ಸಾಧ್ಯವಿಲ್ಲ; ಬಾಂಗ್ಲಾದೇಶ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಿದೆ; ಅದಕ್ಕೆ ತಕ್ಕ ಮರ್ಯಾದೆ ಸಲ್ಲಲೇಬೇಕು ಎಂದರು.

ವಿಜ್ಞಾನದ ವಿಶ್ವಾತ್ಮಕ ಭಾಷೆಯೊಂದನ್ನು ನಾವೆಲ್ಲ ಕಲಿಯಬೇಕಾಗಿದೆ

ವಿಜ್ಞಾನ ಕಲಿಸೀತೆ ವಿವೇಕಪೂರ್ಣ ನಡೆ?

ವಿಶ್ಲೇಷಣೆ

ಡಾ. ಗೀತಾ ವಸಂತ

ವಿಜ್ಞಾನದ ಕಲಿಕೆಯು ಜಗತ್ತಿನ ಬಗೆಗಿನ ಮೂಲಭೂತ ಅರಿವನ್ನು ಎಚ್ಚರಿಸುವ ಪ್ರಕ್ರಿಯೆ. ಕಣ್ಣಿಗೆ ಕಾಣುವ ಜಗತ್ತಿನ ಹಿಂದಿರುವ ಕಾಣದ ತತ್ವವನ್ನು ಅನ್ವೇಷಿಸುವ ಮಹಾಯಾನವಿದು. ಇಂಥ ಶೋಧಕ್ಕೆ ಬಹು ದೀರ್ಘ ಚರಿತ್ರೆಯೇ ಇದೆ. ಕಾಲಕ್ರಮದಲ್ಲಿ ವಿಜ್ಞಾನವು ನಮ್ಮ ನೋಟಕ್ರಮಗಳನ್ನು ಬದಲಿಸಿದೆ. ನಮ್ಮ ತಿಳಿವುಗಳನ್ನು ಪುನರ್‌ರಚಿಸಿಕೊಳ್ಳುತ್ತಲೇ ಇರುವುದನ್ನು ಕಲಿಸಲು ವಿಜ್ಞಾನದಂಥ ಜ್ಞಾನಮಾರ್ಗ ಇನ್ನೊಂದಿಲ್ಲ.

'ವಿಜ್ಞಾನವು ಸತ್ಯದ ಬಗೆಗಿನ ಸಾಹಿತ್ಯ' ಎಂಬ ಮಾತನ್ನು ಕೇಳಿ ಚಕಿತಳಾದೆ. ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಋಷಿಗಳು ಅದನ್ನು ಅನುಭಾವದ ದರ್ಶನವಾಗಿಸಿಕೊಂಡರೆ, ಆಧುನಿಕ ವಿಜ್ಞಾನ ಅದನ್ನು ಲೋಕದ ಬಗೆಗಿನ ವಿವರಣೆಯಾಗಿ ತತ್ವೀಕರಿಸಿದೆ. ವೈಜ್ಞಾನಿಕ ಮನೋಭಾವವನ್ನು ಸಂಶೋಧನೆಯ ಪ್ರಾಯೋಗಿಕ ಮಾರ್ಗವಾಗಿ ರೂಪಿಸಿಕೊಂಡಿದೆ. ಮುಂದುವರಿದು, ವಾಸ್ತವ ಬದುಕಿನ ಅನೇಕ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ ವಿಜ್ಞಾನವನ್ನು ನಾವಿಂದು ಬಳಸಿಕೊಳ್ಳುತ್ತಿದ್ದೇವೆ. ಅದನ್ನು ತಂತ್ರಜ್ಞಾನವಾಗಿ ರೂಪಿಸಿಕೊಂಡು ಇಂದಿನ ಸರಕು ಜಗತ್ತಿನ ಎಲ್ಲ ಪ್ರಲೋಭನೆಗಳ ಹಿಂದಿನ ತಂತ್ರವಾಗಿಯೂ ಮಾಡಿಕೊಂಡಿದ್ದೇವೆ. ಹಾಗಾದರೆ ಇಂದು ತರಗತಿಗಳಲ್ಲಿ ವಿಜ್ಞಾನ ಬೋಧನೆ ಯಾವ ದಿಕ್ಕಿನಲ್ಲಿದೆ ಎಂಬ ಜಿಜ್ಞಾಸೆ ಮೂಡುತ್ತದೆ.

ವಿದ್ಯಾರ್ಥಿಗಳಿಗೆ ಸತ್ಯಕ್ಕಿರುವ ಬಹು ಆಯಾಮಗಳನ್ನು ದರ್ಶನ ಮಾಡಿಸುವಲ್ಲಿ, ವಿಜ್ಞಾನವನ್ನು ಒಂದು ಫಿಲಾಸಫಿಯಾಗಿ ಬದುಕುವಂತೆ ಮಾಡುವಲ್ಲಿ ನಾವೇನಾದರೂ ತೊಡಗಿದ್ದೇವೆಯೇ? ವಿಜ್ಞಾನವನ್ನೂ ಸೃಜನಶೀಲ ಕಲಿಕೆಯಾಗಿ ಮಾರ್ಪಡಿಸುವ, ಅನಂತಕ್ಕೆ ತೆಕ್ಕೆ ಹಾಯುವ ಕನಸನ್ನಾಗಿ ಮಾರ್ಪಡಿಸುವ ಸಾಮರ್ಥ್ಯ ನಮ್ಮಲ್ಲಿದೆಯೇ ಎಂದು ಪರೀಕ್ಷಿಸಿಕೊಳ್ಳುವುದು ವಿಜ್ಞಾನ ದಿನದಂದು (ಫೆ. 28) ನಮ್ಮ ಮುಂದಿರುವ ಸವಾಲು.

ನಮ್ಮ ಬ್ರಹ್ಮಾಂಡವು ಹೇಗೆ ಸದಾ ಆಗುತ್ತಿರುವ ಪ್ರಕ್ರಿಯೆಯೋ ಹಾಗೆಯೇ ನಮ್ಮ ಗ್ರಹಿಕೆಗಳೂ ಸದಾ ಆಗುತ್ತಿರುವ ಪ್ರಕ್ರಿಯೆಗಳೇ. ಶಿಕ್ಷಣ ಕೂಡ ಈ ಚಲನಶೀಲತೆಯನ್ನು ಗ್ರಹಿಸಲು ತನ್ನನ್ನು ಸನ್ನದ್ಧವಾಗಿ ಇರಿಸಿಕೊಳ್ಳಬೇಕು. ಇಲ್ಲವಾದರೆ ಅದು ಒಮ್ಮೆ ಗ್ರಹಿಸಿದ್ದನ್ನು ನಂಬಿಕೆಯಾಗಿ ಸ್ಥಿರೀಕರಿಸಿಕೊಂಡು ಸ್ಥಾಪಿಸುವ ಜಡ ವ್ಯವಸ್ಥೆಯಾಗಿ ಬಿಡುತ್ತದೆ. ತನ್ನ ಸಿದ್ಧಸೂತ್ರಗಳನ್ನು ಮತ್ತೆಮತ್ತೆ ಪುನರುಚ್ಚರಿಸುವ ಯಾಂತ್ರಿಕ ವಿಧಾನವಾಗಿಬಿಡುತ್ತದೆ. ಹೆಚ್ಚಿನ ಅಧ್ಯಾಪಕರು ಈ 'ನಿರ್ಮಿತ' ಸತ್ಯವನ್ನು ಅಚ್ಚುಕಟ್ಟಾಗಿ ಒಪ್ಪಿಸುವ, ಪರೀಕ್ಷಿಸುವ, ಪುನರುತ್ಪಾದಿಸುವ ವಿಧಾನವನ್ನೇ ಶೈಕ್ಷಣಿಕ ಸಾಮರ್ಥ್ಯ, ದಕ್ಷತೆ ಎಂಬ ಬಿಂಬವೊಂದನ್ನು ಗಾಢವಾಗಿ ಮೂಡಿಸಿಬಿಟ್ಟಿರುತ್ತಾರೆ. ಆದರೆ ಜ್ಞಾನವಲಯದಲ್ಲಿ ಹೊಸದನ್ನು ನಿರ್ಮಿಸಲು, ಅದನ್ನು ಹಿಗ್ಗಿಸಲು ಪೂರ್ವಗ್ರಹೀತಗಳನ್ನು ಆಗಾಗ ಕಳಚಿಕೊಳ್ಳಬೇಕಾಗುತ್ತದೆ. ಇದನ್ನೇ 'ಅನ್ ಲರ್ನಿಂಗ್' ಪ್ರಕ್ರಿಯೆ ಎನ್ನುತ್ತೇವೆ.

ಸದಾ ಹುಡುಕುತ್ತಿರುವ ಅನಿಶ್ಚಿತತೆಯಲ್ಲೇ ಹೊಸ ದಾರಿಗಳು ಹೊಳೆಯುತ್ತವೆ. ಇನ್ನೊಂದು ಜ್ಞಾನಶಾಖೆಯೊಂದಿಗಿನ ಅಂತಃಸಂಬಂಧಗಳು ಕಾಣತೊಡಗುತ್ತವೆ. ಇದಕ್ಕೆ ಅಪಾರ ಕಲ್ಪನಾಶಕ್ತಿ, ಅಂತಃಸಂಬಂಧಗಳನ್ನು ಕಾಣಬಲ್ಲ ದಾರ್ಶನಿಕ ಗುಣ ಬೇಕಾಗುತ್ತದೆ. ಇಂತಹ ತರಬೇತಿಯನ್ನು ತತ್ವಶಾಸ್ತ್ರ ಹಾಗೂ ಸಾಹಿತ್ಯವು ನೀಡಬಲ್ಲವು. ಉದಾಹರಣೆಗೆ, ಒಂದು ಕಲಾಕೃತಿಯನ್ನು ಸೃಷ್ಟಿಸುವಾಗ ಕಲ್ಪನೆ ಹಾಗೂ ವಾಸ್ತವವನ್ನು ಹೇಗೆ ಸಮ್ಮಿಳಿತಗೊಳಿಸಬೇಕೆಂಬುದು ಕಲಾವಿದರಿಗೆ ಗೊತ್ತಿರುತ್ತದೆ. ಮನುಷ್ಯರ ಮನಸ್ಸಿಗಿರುವ ವೈಚಾರಿಕ ಹಾಗೂ ಆಧ್ಯಾತ್ಮಿಕ ಸಾಧ್ಯತೆಯಿದು. ಕಾಲ, ದೇಶ ಹಾಗೂ ಇಂದ್ರಿಯಗಳ ಮಿತಿಗೆ ಒಳಪಟ್ಟ ಜ್ಞಾನವನ್ನು ಪ್ರಜ್ಞೆಯ ಅಂತಃಶಕ್ತಿಯ ಮೂಲಕ ಹಿಗ್ಗಿಸುವ ವಿಧಾನವೊಂದನ್ನು ನಾವು ನಮ್ಮ ಗ್ರಹಿಕೆಗಳಿಗೆ ಕಸಿಕಟ್ಟಿಕೊಳ್ಳುವ ಅಗತ್ಯವಿದೆ.

ಸರಳ ತರ್ಕಕ್ಕೆ ಒಗ್ಗಲಾರದ್ದೆಲ್ಲವನ್ನೂ ನಾವು ಕ್ಲಿಷ್ಟವೆನ್ನುತ್ತೇವೆ. ನಾವು ಇದುವರೆಗೂ ನಂಬಿಕೊಂಡು ಹೇಳುತ್ತ ಬಂದಿದ್ದಕ್ಕೆ ಇನ್ನೊಂದು ಆಯಾಮವೂ ಇರಬಹುದೆಂಬ ಬಹು ಆಯಾಮದ ಚಿಂತನೆಗೆ ನಾವು ಅನೇಕ ಸಲ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಿರುವುದಿಲ್ಲ. ಉದಾಹರಣೆಗೆ, ಕ್ವಾಂಟಂ ಫಿಸಿಕ್ಸನ್ನು ಕಷ್ಟವೆಂಬಂತೆ ನಿರೂಪಿಸುವುದೇ ಈ ಬಹು ವಿನ್ಯಾಸಗಳನ್ನು ಒಪ್ಪಿಕೊಳ್ಳಲಾಗದಂತೆ ಬೆಳೆದ ಮನಸ್ಸುಗಳು. ಕಾಲಬದ್ಧವಾದ 'ಸ್ಥಿತಿ'ಯೊಂದು ಅನಂತದಲ್ಲಿ ಪರಿವರ್ತನೆಯಾಗುತ್ತಲೇ ಚಲಿಸುತ್ತದೆ ಎಂಬುದು ಕಾವ್ಯಾತ್ಮಕ ಸಾಧ್ಯತೆಯನ್ನು ತಿಳಿದವರಿಗೆ ಬೇಗ ಅರ್ಥವಾಗುತ್ತದೆ. 'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು, ಓ... ಅನಂತವಾಗಿರು' ಎಂಬುದನ್ನು ಒಳತಿಳಿವಿನಿಂದ ಅರಿಯಬಲ್ಲ ಪ್ರಜ್ಞೆಯದು. ತತ್ವಜ್ಞಾನ, ವಿಜ್ಞಾನ ಹಾಗೂ ಕಾವ್ಯಗಳು ಸಂಧಿಸುವ ದಾರಿಯಲ್ಲಿ ನಡೆದ ಅನೇಕರು ನಮ್ಮ ನಡುವೆ ಇದ್ದಾರೆ.

ಯಾವುದೇ ಜ್ಞಾನವು ಶಾಶ್ವತ ಗೂಡುಕಟ್ಟುವಿಕೆಯಾಗಬಾರದು. ಅಂಥ ಗೂಡಲ್ಲಿ ಕತ್ತಲು ಅಮರಿಕೊಳ್ಳುತ್ತದೆ. ಸದಾ ಬೆಳಕಿನ ದಾರಿಗಳೆಡೆ ತುಡಿಯುವುದು ವಿಜ್ಞಾನ. ಕಾವ್ಯ ಕೂಡ ಜೀವಂತಿಕೆಯ ಮೂಲಕವೇ ತನ್ನನ್ನು ವಿಸ್ತರಿಸಿಕೊಂಡು ಅಚ್ಚರಿ ಮೂಡಿಸುವ ಕಲೆಗಾರಿಕೆ. ತನ್ನನ್ನೇ ತಾನು ಮೀರುವ, ಮತ್ತೆಮತ್ತೆ ರಚಿಸಿಕೊಳ್ಳುವ ಕಲೆಯನ್ನು ಕಲಿಸದಿದ್ದರೆ ಬದುಕು ಜಡವಾಗುತ್ತದೆ. ಹಾಗೆ ನೋಡಿದರೆ ಗಣಿತ ಕೂಡ ಜಡವಲ್ಲ. 'ಗಣಿತವೆಂದರೆ ವಿನ್ಯಾಸಗಳ ಹುಡುಕಾಟ'. ಇದು ನೇಯ್ಗೆಯಲ್ಲಿದೆ. ಕಸೂತಿಯಲ್ಲಿದೆ. ಹಾಗೆ ನೋಡಿದರೆ ಜಗತ್ತಿನ ಎಲ್ಲವೂ ಒಂದು ವಿನ್ಯಾಸ. ಅದನ್ನು ಗುರುತಿಸುವ, ಮೀರುವ, ಮರುಸೃಷ್ಟಿಸುವ ಆಟವೇ ಜ್ಞಾನ. ರಂಗೋಲಿ ಕೂಡ ಜ್ಯಾಮಿತಿಯ ಸೂತ್ರಗಳನ್ನು ಬಹು ಸುಲಭವಾಗಿ ವಿವರಿಸಬಲ್ಲದು. ಇದನ್ನೆಲ್ಲ ನೋಡಿದಾಗ, ಸ್ತ್ರೀಮನಸ್ಸು ಗಣಿತ ಹಾಗೂ ವಿಜ್ಞಾನವನ್ನು ಅರ್ಥಮಾಡಿಕೊಳ್ಳುವ ವಿಧಾನವೇ ಬೇರೆಯೆನಿಸುತ್ತದೆ. ನಾವದನ್ನು ಶೈಕ್ಷಣಿಕ ಶಿಸ್ತಾಗಿ ರೂಪಿಸಿಕೊಂಡಿಲ್ಲ ಅಷ್ಟೆ. ಒಟ್ಟಿನಲ್ಲಿ ಜ್ಞಾನವನ್ನು ನಿರ್ಮಿಸಲು ಹಾಗೂ ಅದನ್ನು ಸಮುದಾಯಕ್ಕೆ ಹಂಚಲು ಬೇಕಾದ ಮೆಥಡಾಲಜಿಗಳನ್ನು ನಾವು ಸೃಜನಶೀಲವಾಗಿ ರೂಪಿಸಿಕೊಳ್ಳುವ ಅನಂತ ಸಾಧ್ಯತೆಗಳಿವೆ ಎಂದಾಯಿತು. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ, ನಾವು ರೂಪಿಸಿಕೊಳ್ಳುವ ಸಿಲಬಸ್ಸುಗಳು, ಬೋಧನಾ ವಿಧಾನಗಳನ್ನು ಮರುರೂಪಿಸಿಕೊಳ್ಳುವ ದಾರಿ ತೆರೆಯುತ್ತದೆ.

'ಸತ್ಯದ ಅನ್ವೇಷಣೆಯನ್ನು ಮಾಡು, ಸತ್ಯವೇ ನಿನಗೆ ಸ್ವಾತಂತ್ರ್ಯ ಕೊಡಿಸುತ್ತದೆ' ಎನ್ನುತ್ತಾರೆ ಅಬ್ದುಲ್ ಕಲಾಂ. ಸತ್ಯವು ವೈಯಕ್ತಿಕ ಕೊಳೆಯನ್ನು ಅಂಟಿಸಿಕೊಳ್ಳದ ಅಗ್ನಿ. ಸತ್ಯದ ಬೆಂಕಿಗೆ ಬಿದ್ದಾಗಲೇ ನಮಗೆ ಅಂಟಿಕೊಂಡ ಮಿತಿಗಳನ್ನೂ ಮಿಥ್ಯೆಗಳನ್ನೂ ಕರಗಿಸಿ ಶುದ್ಧಗೊಳ್ಳಲು ಸಾಧ್ಯ. ವಿಜ್ಞಾನವು ಪರೋಕ್ಷವಾಗಿ ಇದನ್ನು ಕಲಿಸಬಲ್ಲದೆಂಬುದೇ ನನ್ನ ಭಾವನೆ. ವಿಜ್ಞಾನವನ್ನು ಪದವಿಗಾಗಿ ಮಾತ್ರ ಓದದೇ ಪ್ರಜ್ಞೆಯ ಭಾಗವಾಗಿಸಿಕೊಂಡಾಗ ಸತ್ಯಕ್ಕೆ ಮುಖಾಮುಖಿಯಾಗುವ ಸ್ಥೈರ್ಯವು ಒದಗುತ್ತದೆ. ರೇಡಿಯಂ ಮೂಲಧಾತುವನ್ನು ಕಂಡುಹಿಡಿದು, ಅದನ್ನು ಶುದ್ಧವಾಗಿ ಪ್ರತ್ಯೇಕಿಸುವ ವಿಧಾನವನ್ನು ಕಂಡುಹಿಡಿದ ಮೇರಿ ಕ್ಯೂರಿ 'ವಿಜ್ಞಾನವು ಜ್ಞಾನ ಪ್ರಸಾರದ ಸಾಧನ. ವಿಜ್ಞಾನಿ ತನ್ನ ಸಂಶೋಧನೆಯ ಫಲವನ್ನು ಮುಚ್ಚುಮರೆಯಿಲ್ಲದೇ ಪ್ರಕಟಿಸಬೇಕು. ನಮ್ಮ ಆವಿಷ್ಕರಣಕ್ಕೆ ಹಣದ ಸಾಧ್ಯತೆ ಇರುವುದು ಆಕಸ್ಮಿಕ. ರೇಡಿಯಂ ಮಾನವ ಸೇವೆಗೆ ಮೀಸಲಿದೆ' ಎನ್ನುತ್ತಾ, 'ಪೇಟೆಂಟ್ ಮಾಡುವುದು ವೈಜ್ಞಾನಿಕ ಪ್ರವೃತ್ತಿಗೆ ವಿರುದ್ಧ' ಎನ್ನುತ್ತಾರೆ. ಜ್ಞಾನದ ಅಧಿಕಾರ, ಮಾರಾಟ ಹಾಗೂ ಲಾಭಕೋರತನದ ವಿರುದ್ಧ ತಾತ್ವಿಕ ಬಂಡಾಯವಿದು.

ಕೊನೆಯಲ್ಲಿ, ವಿಶ್ವಮಟ್ಟದಲ್ಲಿ ಜನಾಂಗಗಳ ನಡುವೆ ಸಾಮರಸ್ಯವನ್ನು ಸಾಧಿಸಲು, ಸ್ಥಳೀಯ ನೆಲೆಯಲ್ಲಿ ಉತ್ತಮ ಸಮಾಜವೊಂದನ್ನು ನಿರ್ಮಿಸಲು ವಿಜ್ಞಾನವು ಏನು ಸಹಾಯ ಮಾಡಬಲ್ಲದು ಎಂಬ ಪ್ರಶ್ನೆಯೊಂದು ಮೂಡುತ್ತದೆ. ಏಕೆಂದರೆ, ಯಾವುದೇ ಜ್ಞಾನದ ಉತ್ಕರ್ಷವಾಗುವುದು ವೈಯಕ್ತಿಕ ಸ್ಪರ್ಶದಿಂದಲೇ. ಇದು ಕೂಡ ಶಿಕ್ಷಣದ ಗುರಿಯೇ. ವಿಜ್ಞಾನದ ಶಕ್ತಿಯನ್ನು ವಿವೇಕದಿಂದ ಬಳಸಿಕೊಳ್ಳದಿದ್ದರೆ ಅದು ನಮ್ಮನ್ನು ಕತ್ತಲಿಗೆ ತಳ್ಳಬಹುದು ಎಂಬುದನ್ನೂ ನಮಗೆ ಇತಿಹಾಸವು ತೋರಿಸಿಕೊಟ್ಟಿದೆ. ನಮ್ಮ ವಿಕಾಸವು ವಿವೇಕಪೂರ್ಣ ಜ್ಞಾನದಲ್ಲಿದೆಯೇ ವಿನಾ ಜ್ಞಾನದ ಅಹಂಕಾರದಲ್ಲಿಲ್ಲ. ಎಂಥ ಅದ್ಭುತ ತಂತ್ರಜ್ಞಾನವೂ ನೈತಿಕ ಮೌಲ್ಯದ ಉಸಿರು ಪಡೆಯದಿದ್ದರೆ ವಿನಾಶಕಾರಿಯಾಗುತ್ತದೆ. ವಿಜ್ಞಾನವನ್ನು ರಾಷ್ಟ್ರೀಯತೆಯ ಚಿಪ್ಪಿನಲ್ಲಿ ಹುದುಗಿಸುವುದು ಕೂಡ ಅವಿವೇಕವೇ.

ಜನಾಂಗ, ಜಾತಿ, ಧರ್ಮಗಳ ಹೆಸರಿನಲ್ಲಿ ಧ್ರುವೀಕರಣಗೊಳ್ಳುತ್ತಾ ಹಿಂಸೆಗೆ ಕಾರಣವೂ ಅದರ ಬಲಿಪಶುಗಳೂ ಆಗುವ ನಾವು, ವಿಜ್ಞಾನದ ವಿಶ್ವಾತ್ಮಕ ಭಾಷೆಯೊಂದನ್ನು ಕಲಿಯಬೇಕಾಗಿದೆ. ಬ್ರಹ್ಮಾಂಡದಲ್ಲಿರುವ ಸಾಮರಸ್ಯದ ಕೇಂದ್ರವೊಂದು ವಿಜ್ಞಾನದ ಮೂಲಕ ನಮ್ಮೆದೆಗಳಿಗೆ ಬರಬೇಕಿದೆ.



ಚುರುಮುರಿ

ಸುಲಿತದ ಬದುಕು

• ಲಿಂಗರಾಜು ಡಿ.ಎಸ್.

ನಮ್ಮೇರಿಯಾ ಶಾಸಕರು ಮೊನ್ನೆ ತರಾತುರಿಯಲ್ಲಿ ಮಾತಿಗೆ ಸಿಕ್ಕರು. ಪಕ್ಷಗಳೆಲ್ಲಾ ಪುಗಸಟ್ಟೆ ಅಕ್ಕಿ ಕೊಡತೀವಿ ಅಂತ ಪುಂಗ್ತಿದ್ರೆ ನಮ್ಮ ಶಾಸಕರು ಏನಂತರೆ ಅಂತ ಕೇಳಿದೆ!

'ನಾನೂವೆ ಗೆದ್ರೆ ಕ್ಷೇತ್ರದ ಜನಕ್ಕೆಲ್ಲಾ ತಲಾ 50 ಕೆ.ಜಿ. ಪುಗಸಟ್ಟೆ ಅಕ್ಕಿ ಕೊಡ್ತೀನಿ ಕನೋ!' ಅಂತಂದ್ರು.

'ಹೇಳಕೇನ್ಸಾ, ನೂರು ಕೆ.ಜಿ. ಅಂತ್ಲೂ ಹೇಳಬೈದು. ನಮ್ಮ ಬಾಯಿಗೆ ಈಟು ಅಂಬಲಿ ಹೂದು ನೀವು ದೊಡ್ಡೋರಾಯ್ತಿರ. ಆಮೇಲೆ ಇನ್ನೇನು ಮಾಡ್ತಿದ್ದರಿ?'

'ನನ್ನ ಕ್ಷೇತ್ರದೇಲಿ ಮತ ವಿಭಾಗ ಕೇಂದ್ರ ಸುರು ಮಾಡ್ತೀನಿ' ಅಂದ್ರು.

'ಅದುನ್ನ ಎಲ್ಲಾರೂ ಮಾಡ್ತರೆ ನಿಮ್ಮದೇನು ದೊಡ್ಡಸ್ಥಿಕೆ'.

'ಲೇ ದಡ್ಡ, ಮತ ಅಂದ್ರೇನ್ಲಾ ಜಾತಿ ಅಂತಲ್ಲವಾ? ಉದ್ದ ಗೀಟಿನವು ಅಡ್ಡ ಗೀಟಿನವು ಎಷ್ಟವೆ, ಕರೀವೆಷ್ಟು ಬಿಳೀವೆಷ್ಟು ಅದರಲ್ಲಿ ನಮ್ಮವು ಎಷ್ಟು ಅಂತ ತಿಳಕಣದೇ ಮತ ವಿಭಾಗ ಕನೋ!'

'ಆಮೇಲೆ ಸಾ?' ಆಶ್ಚರ್ಯದೇಲಿ ಕೇಳಿದೆ.

'ಮತ ಖರೀದಿ ಕೇಂದ್ರ ಒಂದಿರತದೆ. ನಮ್ಮ ಪಕ್ಷದವಾದ್ರೆ ಅವುಕ್ಕೆ ಕುಕ್ಕರ್ರೋ ನಿಕ್ಕರ್ರೋ ಕೊಟ್ಟು ಕಳುಗುಸ್ತೀವಿ. ನಮಗೆ ಬರದೇ ಇರೋ ಮತಗಳ ಎಪ್ಪೆಸ್ ಮಾಡ್ತೀವಿ ಇಲ್ಲಾ ಅಡ್ಡ ಮಾತಾಡಿ ಮತಗಳ ಒಡೀತೀವಿ!'

'ಆಮೇಲೆ' ಅಂದೆ.

'ಪಾನೀಕರಿಗೆ ದಿನಾ ಸಂದೆನಾಗ ಫ್ರೀ ತೀರ್ಥ, ಪ್ರಸಾದ, ತಟ್ಟೇ ಕಾಸು ವಿತರಣೆ ಇರತದೆ. ಈ ಮತಮ್ಯಾಟಿಕ್ಸ್ ನಿನಗೆ ಅರ್ಥಾಗಕುಲ್ಲ ಕನೋ!' ಅಂದ್ರು ನಾಯಕರು.

'ಸಾ, ಇವೆಲ್ಲಾ ವಿದಾನಸೌಧಕ್ಕೆ ಹೋಗಕೆ ಮೇನ್ ರೋಡ್ ಬುಟ್ಟು ಅಡ್ಡರಸ್ತೇಲಿ ಹೋಗಕ್ಕೆ ಮಾಡಿಕ್ಯಂಡಿರಾ ಪರ್ಮನೆಂಟ್ ಡಿವಿಯೇಶನ್ನುಗಳು!' ಅಂದೆ.

'ನಾವೂ ಬದುಕಬೇಕಲ್ಲೋ?' ಅಂದ್ರು.

'ಸಾ, ನೀವು ವೋಟ್ ಪೆಡ್ಲರ್ ಇದ್ದಂಗೆ. ಡಾನ್ ಎಲ್ಲೋ ಇರತನೆ. ಗೆದ್ದ ಮ್ಯಾಲೆ ನೀವು ನಮ್ಮನ್ನ ಸುಲಿದು ಸೂಚ್ಯಂಕ ಹೆಚ್ಚಿಸಿಗ್ಯಂಡು ಅಭಿವೃದ್ಧಿ ಆಯ್ತೀರಿ' ಅಂತ ತಿವಿದ್ರೂ ನಾಯಕರು ಮಿಸುಗಲಿಲ್ಲ.

ಸಂಗತ

ಜೋಕೆ... ವೃದ್ಧರಿಗೆ ಕಿರುಕುಳ ಕೊಟ್ಟೀರಿ

ಅಸಹಾಯಕರಾದ ಹಿರಿಯ ಜೀವಗಳ ನೆರವಿಗಾಗಿ ಇರುವ ರಾಷ್ಟ್ರೀಯ ಸಹಾಯವಾಣಿಯು ಬಹು ವಿಧದಲ್ಲಿ ಪ್ರಯೋಜನಕಾರಿ

• ಪ. ರಾಮಕೃಷ್ಣ ಶಾಸ್ತ್ರಿ

ಅವರೊಬ್ಬ ನಿವೃತ್ತ ಪ್ರಾಂಶುಪಾಲರು. ಅವರ ಪಕ್ಕದ ಮನೆಯ ಇಬ್ಬರು ಹೆಣ್ಣುಮಕ್ಕಳು ಎರಡೂ ಮನೆಗಳ ಮಧ್ಯದ ಆವರಣ ಗೋಡೆ ಬಳಿ ತರಗೆಲೆ ರಾಶಿ ಹಾಕಿ ಬೆಂಕಿ ಹಚ್ಚುತ್ತಿದ್ದರು. ಇದರಿಂದ ಆ ವಯೋವೃದ್ಧರಿಗೆ ದಮ್ಮು ಕಟ್ಟುತ್ತಿತ್ತು. ಬೆಂಕಿಯ ಕಿಡಿ ಅಕಸ್ಮಾತ್ ಮನೆಗೆ ಹಾರಿದರೆ ಏನಾದರೂ ಅನಾಹುತ ಸಂಭವಿಸಬಹುದೆಂಬ ಭಯವಿತ್ತು.

ಹೀಗೆ ಮಾಡಬಾರದೆಂದು ಹೇಳಿದರೆ ಆ ಹೆಣ್ಣುಮಕ್ಕಳು ಪ್ರಾಂಶುಪಾಲರ ಮೈಮೇಲೆ ಏರಿ ಬಂದರು. 'ಜಾಗ ನಮ್ಮದು. ಏನು ಬೇಕಿದ್ರೂ ಮಾಡ್ಕೊಳ್ತೀವಿ. ನಿಮಗೆ ತೊಂದರೆಯಾಗುವುದಿದ್ದರೆ ಆವರಣ ಗೋಡೆಯನ್ನು ಇನ್ನೂ ಎತ್ತರಕ್ಕೆ ಕಟ್ಟಿಸಿಕೊಳ್ಳಿ. ಆಕ್ಷೇಪಿಸಿದರೆ ನೀವು ನಮ್ಮನ್ನು ಬಲಾತ್ಕರಿಸಲು ಬಂದಿರುವುದಾಗಿ ದೂರು ಕೊಟ್ಟು ಒಳಗೆ ಹಾಕಿಸ್ತೀವಿ' ಎಂದು ಧಮಕಿ ಹಾಕಿದರು.

ನಿವೃತ್ತ ಪ್ರಾಂಶುಪಾಲರು ಹೆಣ್ಣುಮಕ್ಕಳ ಮಾತುಗಳನ್ನುಧ್ವನಿಮುದ್ರಿಸಿಕೊಂಡಿದ್ದರು.ಮುಂದೇನುಮಾಡಬೇಕೆಂದು ತಿಳಿಯದಿದ್ದಾಗ ಅವರಿಗೆ ಗೆಳೆಯರೊಬ್ಬರು ಟೋಲ್ ಫ್ರೀ ಸಂಖ್ಯೆಯೊಂದನ್ನು ಕೊಟ್ಟರು. ಅದಕ್ಕೆ ಕರೆ ಮಾಡಿದ ಕೂಡಲೇ ಸ್ಪಂದನ ದೊರಕಿತು. ಅವರ ಸಮಸ್ಯೆಯನ್ನು ಅವರ ಮನೆಗೆ ಸಮೀಪದ ಸಂಸ್ಥೆಗೆ ರವಾನಿಸಲಾಯಿತು. ಹೆಣ್ಣುಮಕ್ಕಳ ಮನೆಗೆ ಕರೆ ಹೋಯಿತು. ವಯೋವೃದ್ಧರನ್ನು ಅವಾಚ್ಯ ಮಾತುಗಳಿಂದ ನಿಂದಿಸಿದರೆ, ತೊಂದರೆ ಕೊಟ್ಟರೆ ಕಾನೂನಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಯಿತು. ಮರುದಿನದಿಂದ ಪ್ರಾಂಶುಪಾಲರು ಯಾವುದೇ ಕಿರುಕುಳ ಇಲ್ಲದೆ ನಿರಾಳರಾದರು. ಸಹಾಯವಾಣಿಯು ವೃದ್ಧರ ನೆರವಿಗಾಗಿ ಪೊಲೀಸ್ ನೆರವು ಒದಗಿಸುವ ವ್ಯವಸ್ಥೆಯನ್ನೂ ಹೊಂದಿತ್ತು.

ಆ ಟೋಲ್ ಫ್ರೀ ಸಂಖ್ಯೆ 14567. ಬೆಳಿಗ್ಗೆ 8ರಿಂದ ರಾತ್ರಿ 8ರ ತನಕ ವಯಸ್ಸಾದವರು ಕರೆ ಮಾಡಿ ತಮ್ಮ ಯಾವುದೇ ದೂರು ದುಮ್ಮಾನಗಳನ್ನು ಹೇಳಿಕೊಳ್ಳಬಹುದು. ಶೀಘ್ರವಾಗಿ ಪರಿಹಾರವನ್ನೂ ಪಡೆಯಬಹುದು. ಬಹಳಷ್ಟು ವಯೋವೃದ್ಧರಿಗೆ ಈ ಸಂಖ್ಯೆಯ ನೆರವಿನ ಅರಿವೇ ಇಲ್ಲ. ಭಾರತದ ಎಲ್ಲ ರಾಜ್ಯಗಳಲ್ಲೂ ನೆರವಿಗಾಗಿ ಈ ಸಹಾಯವಾಣಿ ತುದಿಗಾಲಲ್ಲಿ ನಿಂತಿದೆ.

ಕೋವಿಡ್ ಕಾಲಘಟ್ಟದಲ್ಲಿ ವಯೋವೃದ್ಧರ ವೈದ್ಯಕೀಯ ಮತ್ತಿತರ ತುರ್ತು ನೆರವಿಗಾಗಿ ತೆಲಂಗಾಣದ ವಿಜಯವಾಹಿನಿ ಚಾರಿಟಬಲ್ ಟ್ರಸ್ಟ್ ಮತ್ತು ಟಾಟಾ ಸಂಸ್ಥೆಯ ಸಹಯೋಗದಲ್ಲಿ ಆರಂಭವಾದಸಹಾಯವಾಣಿಯನ್ನುರಾಜ್ಯಸರ್ಕಾರತನ್ನಕಾರ್ಯಕ್ರಮಗಳ ಪಟ್ಟಿಗೆ ಸೇರಿಸಿಕೊಂಡಿತು. ಅದರ ಸಾಫಲ್ಯವನ್ನು ಮನಗಂಡ ಕೇಂದ್ರ ಸರ್ಕಾರವು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಮೂಲಕ ಸಾಮಾಜಿಕ ರಕ್ಷಣಾ ಸಂಸ್ಥೆಯ ಸಹಯೋಗದಲ್ಲಿ ಇದನ್ನು ಅಭಿವೃದ್ಧಿಪಡಿಸಿದೆ. ಆದರೆ ಇಂತಹ ಸೌಲಭ್ಯ ಇದೆ, ನಿಮ್ಮ ಸಮಸ್ಯೆಗಳ ಸಂದರ್ಭದಲ್ಲಿ ಅದನ್ನು ಬಳಸಿಕೊಳ್ಳಿ ಎಂದು ಹೇಳುವಲ್ಲಿ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಮತ್ತು ಜಿಲ್ಲಾಡಳಿತಗಳು ಸಂಪೂರ್ಣ ವಿಫಲವಾಗಿವೆ.

ಈ ರಾಷ್ಟ್ರೀಯ ಸಹಾಯವಾಣಿಯ ನೆರವು ವಯಸ್ಸಾದವರಿಗೆ ಬಹು ವಿಧದಲ್ಲಿ ಲಾಭದಾಯಕ ಆಗಿದೆ. ನಿರಾಶ್ರಿತರು ರಕ್ಷಣೆ ಪಡೆಯಬಹುದು. ವೃದ್ಧಾಶ್ರಮಗಳನ್ನು ಸೇರಬಹುದು. ಪಿಂಚಣಿ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬಹುದು. ನಿಂದನೆ, ಕಿರುಕುಳ, ತೊಂದರೆಗಳನ್ನು ನೀಡುವ ವ್ಯಕ್ತಿಗಳಿಂದ ಶಾಶ್ವತ ಮುಕ್ತಿ ಪಡೆಯಬಹುದು. ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು. ಸರ್ಕಾರದ ಯೋಜನೆಗಳ ಲಾಭ ಗಳಿಸಬಹುದು. ಭಾವನಾತ್ಮಕ ಬೆಂಬಲ, ಆತಂಕ ಪರಿಹಾರ, ಒಂಟಿತನ, ಆರೋಗ್ಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಂದ ಮುಕ್ತಿ, ಪಡಿತರ, ಔಷಧ ಎಲ್ಲ ಸಹಾಯಕ್ಕೂ ಕೈಚಾಚಬಹುದು.

ಜನಗಣತಿ ಹೇಳುವ ಪ್ರಕಾರ, ದೇಶದಲ್ಲಿ ವಯೋವೃದ್ಧರ ಸಂಖ್ಯೆ ಏರಿಕೆಯಾಗುತ್ತಿದೆ. ವಯೋವೃದ್ಧರ ನೆರವಿನ ಕಲ್ಯಾಣ ಕಾಯ್ದೆಯು 15 ವರ್ಷಗಳ ಹಿಂದೆಯೇ ಜಾರಿಗೆ ಬಂದಿದೆ. ವಯಸ್ಸಾದ ತಂದೆ ತಾಯಿಯ ಪೋಷಣೆಗೆ ಗಂಡುಮಕ್ಕಳಷ್ಟೇ ಹೆಣ್ಣುಮಕ್ಕಳೂ ಬಾಧ್ಯರು. ಸಂಪಾದನೆ ಕಡಿಮೆಯಿದೆ ಎಂದು ಹೇಳಿ ಪೋಷಕರನ್ನು ಬೀದಿಪಾಲು ಮಾಡುವಂತಿಲ್ಲ. ಆದರೆ ಮಕ್ಕಳಿದ್ದರೂ ಅನಾಥ ಬದುಕಿನ ಪ್ರತಿಬಿಂಬವಾಗುತ್ತಿರುವ ದಯನೀಯ ಪರಿಸ್ಥಿತಿಯನ್ನು ನಿವಾರಿಸುವಲ್ಲಿ ಕಾನೂನಿನ ಉದ್ದೇಶ ನೆರವೇರಿಲ್ಲ.

ವಯೋವೃದ್ಧರ ಆಸ್ತಿ ಸಮಸ್ಯೆಗಳು, ಕಿರುಕುಳ ಇದಕ್ಕೆಲ್ಲ ಒಂದು ತಾಸಿನೊಳಗೆ ವಕೀಲಿ ನೆರವು ಪಡೆಯುವ ವ್ಯವಸ್ಥೆಯೂ ನಮ್ಮಲ್ಲಿದೆ. ಅದು ಸಂತ್ರಸ್ತ ವೃದ್ಧರನ್ನು ತಲುಪುವಂತೆ ಮಾಡುವಲ್ಲಿ ಆಡಳಿತಶಾಹಿ ನಿಷ್ಕ್ರಿಯವಾಗಿದೆ. ರಾಷ್ಟ್ರೀಯ ಸಹಾಯವಾಣಿ ಜಾರಿಯಾದ ನಾಲ್ಕು ತಿಂಗಳಲ್ಲಿ ಬಂದ ಕರೆಗಳ ಸಂಖ್ಯೆ ಎರಡು ಲಕ್ಷಕ್ಕೂ ಅಧಿಕ. ಒಡಿಶಾದಲ್ಲಿ 30 ಸಾವಿರ ಕರೆಗಳು ಬಂದದ್ದು ಪಿಂಚಣಿ ಸಮಸ್ಯೆಯ ನಿವಾರಣೆಗೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಡತವನ್ನು ಮೂರು ವರ್ಷಗಳಿಂದ ಮುಟ್ಟಿರಲಿಲ್ಲ ಎಂಬ ಸತ್ಯವೂ ಬೆಳಕಿಗೆ ಬಂದಿತು.

ವೃದ್ಧರನ್ನು ಗೌರವಿಸಿದರೆ ದೇವರನ್ನು ಗೌರವಿಸಿದಂತೆ ಎಂಬ ವಾಕ್ಯ ಸರ್ಕಾರಿ ಬಸ್ಸಿನ ಬಾಗಿಲಿನ ಬಳಿ ಬರೆದಿರುತ್ತದೆ. ಅವರಿಗೆ ಟಿಕೆಟ್ ದರದಲ್ಲಿ ಶೇ 25ರ ರಿಯಾಯಿತಿಯೂ ಇದೆ. ಆದರೆ ಅವರಿಗೆಂದು ಮೀಸಲಾದ ಆಸನವನ್ನು ಬಿಟ್ಟುಕೊಡುವ ಸಹೃದಯತೆ ಮಾತ್ರ ಬರಡಾಗಿದೆ. ಇಂತಹ ಅದೆಷ್ಟೋ ಸಮಸ್ಯೆಗಳಿಂದ ಹಿರಿಯ ಜನಾಂಗ ಮುಕ್ತವಾಗುವಲ್ಲಿ ತಮ್ಮ ಪಾತ್ರವೇನು ಎಂಬ ಆತ್ಮವಿಮರ್ಶೆಗೆ ಯುವಜನಾಂಗ ಮುಂದಾಗಬೇಕಿದೆ.

ವಾಚಕರ ವಾಣಿ

ಸುನಾಮಿ ಏಳಲಿದೆ ಎಂದರೆ...?!

ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಇತ್ತೀಚೆಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದಲ್ಲಿ ಬಿಜೆಪಿ ಸುನಾಮಿ ಏಳಲಿದೆ ಎಂದಿದ್ದಾರೆ. ಸಮುದ್ರದಲ್ಲಿ ಉಂಟಾಗುವ ಸುನಾಮಿ ಅಲೆಗಳು ಅಪಾಯಕಾರಿ. 2004ರ ಡಿಸೆಂಬರ್‌ನಲ್ಲಿ ಭಾರತದಲ್ಲಿ ನೂರಾರು ಜನರನ್ನು ಬಲಿ ತೆಗೆದುಕೊಂಡಿತು. ಇಡೀ ದೇಶ ಅದರ ಅಲೆಗೆ ತತ್ತರಿಸಿ, ಸಮುದ್ರ ತೀರದಲ್ಲಿದ್ದ ಸಾವಿರಾರು ಜನರು ತಮ್ಮ ಮನೆಯನ್ನು, ಮನೆಯವರನ್ನು ಕಳೆದುಕೊಂಡರು. ಜನರ ಮಾರಣಹೋಮವನ್ನು ಪ್ರಕೃತಿ ಪಡೆಯಿತು. ಜನರ ಅತಿಯಾಸೆಗೆ ಪ್ರಕೃತಿ ಆಗಾಗ ಇಂತಹ ರೂಪಗಳಲ್ಲಿ ಎಚ್ಚರಿಸುವ ಕೆಲಸವನ್ನು ಮಾಡುತ್ತಿದೆ. ಹೀಗಿರುವಾಗ, ಮುಖ್ಯಮಂತ್ರಿಯವರ ಮಾತಿನ ಅರ್ಥವೇನೋ? ಅಗತ್ಯ ವಸ್ತುಗಳ ಬೆಲೆ ಏರಿಕೆಯಂತಹ ಸಮಸ್ಯೆಗಳಿಂದ ಜನಸಾಮಾನ್ಯರ ಮನಸ್ಸಿನಲ್ಲಿ ಈಗಾಗಲೇ ಅಸಮಾಧಾನದ ಸುನಾಮಿ ಎದ್ದಿರುವುದಂತೂ ನಿಜ.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಅಳುತ್ತಿದ್ದಾನೆ ರೈತ, ಈರುಳ್ಳಿ ಕಂಡು...

ಈ ಬಾರಿ ಈರುಳ್ಳಿಯ ಬೆಲೆ ಪಾತಾಳಕ್ಕೆ ಕುಸಿದಿದೆ. ಒಂದು ಎಕರೆ ಈರುಳ್ಳಿ ಬೆಳೆಯಲು ಸುಮಾರು ₹ 55 ಸಾವಿರದವರೆಗೂ ಬಂಡವಾಳ ಹಾಕಬೇಕಾಗುತ್ತದೆ. ಹಾಗೆಯೇ ಒಂದು ಕೆ.ಜಿ. ಈರುಳ್ಳಿ ಬೀಜದ ಬೆಲೆ ₹ 1,500 ಇದೆ. ಆದರೆ ಒಂದು ಕ್ವಿಂಟಲ್ ಈರುಳ್ಳಿಯ ಪ್ರಸ್ತುತ ಬೆಲೆ ಕೇವಲ ₹ 250ರಿಂದ 500 ಆಗಿದೆ. ಈ ಬೆಲೆಯಲ್ಲಿ ಎಕರೆಗೆ ರೈತರಿಗೆ ಸಿಗುವುದು ಬರೀ ₹ 30,000ದಿಂದ 40,000 ಅಷ್ಟೇ. ಹೀಗಾದರೆ ರೈತನ ಪರಿಸ್ಥಿತಿ ಏನಾಗಬಹುದು?

ರಾಜ್ಯದಲ್ಲಿ ರೈತರ ಸಂಕಷ್ಟ ಮಿತಿಮೀರುವುದಕ್ಕೆ ಇದಕ್ಕಿಂತ ಕಾರಣಗಳು ಬೇಕಿಲ್ಲ. ಎಲ್ಲರೂ ಬರೀ ಮಾತಿಗಷ್ಟೇ ರೈತ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. ಆದರೆ ಈಗ ಎಲ್ಲರೂ ಸೇರಿ ರೈತನ ಬೆನ್ನೆಲುಬನ್ನೇ ಮುರಿಯುತ್ತಿದ್ದಾರೆ. ಈರುಳ್ಳಿಯನ್ನು ನಂಬಿದ್ದ ರೈತರಂತೂ ಈಗ ಅದೇ ಈರುಳ್ಳಿಯ ಮುಂದೆ ಕುಳಿತು ಅಳುವಂತಹ ಪರಿಸ್ಥಿತಿ ಉಂಟಾಗಿದೆ. ಸರ್ಕಾರ ಕೂಡಲೇ ಈರುಳ್ಳಿಗೆ ಬೆಂಬಲ ಬೆಲೆ ಘೋಷಿಸಬೇಕು, ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕು.

ಕಲ್ಪನಾ ಗೋಪಾಲರೆಡ್ಡಿ, ಚಳ್ಳಕೆರೆ

ಪರ ರಾಜ್ಯದ ವಾಹನಗಳಿಗೆ ಶುಲ್ಕ: ಮರುಪರಿಶೀಲಿಸಿ

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರರಾಜ್ಯ ಗಡಿಗಳಲ್ಲಿ ಹೊರರಾಜ್ಯದಿಂದ ಬರುವ ವಾಹನಗಳಿಗೆ ಅರಣ್ಯ ಇಲಾಖೆ ₹ 20ರಿಂದ ₹ 50ರವರೆಗೆ ಶುಲ್ಕ ವಿಧಿಸಿ, ಅದನ್ನು ನಾಗರಹೊಳೆಯ ರಸ್ತೆಗಳ ಸ್ವಚ್ಛತೆಗೆ ಬಳಸಲಿದೆಯಂತೆ. ಹಿಂದೆ ಗೋವಾ ಸರ್ಕಾರವು ಮಹಾರಾಷ್ಟ್ರದ ಸಿಂಧುದುರ್ಗ ಮತ್ತು ಕರ್ನಾಟಕದ ಕಾರವಾರದ ಗಡಿಗಳಲ್ಲಿ ಪರ ರಾಜ್ಯದ ವಾಹನಗಳಿಗೆ ₹ 250 ಶುಲ್ಕ ವಿಧಿಸಿ, ಆ ಹಣವನ್ನು ತನ್ನ ರಾಜ್ಯದ ಅಭಿವೃದ್ಧಿಗೆ ಬಳಸುವುದಾಗಿ ಹೇಳಿಕೊಂಡಿತ್ತು. ನಂತರ ಸುಪ್ರೀಂ ಕೋರ್ಟ್ ಇದಕ್ಕೆ ತಡೆಯಾಜ್ಞೆ ಒಡ್ಡಿತು. ಎಲ್ಲ ರಾಜ್ಯಗಳೂ ಹೊರ ರಾಜ್ಯಗಳ ವಾಹನಗಳಿಗೆ ಈ ರೀತಿ ತೆರಿಗೆ ವಿಧಿಸಿದರೆ ಹೇಗೆ?

ಚಂದ್ರಕಾಂತ ನಾಮಧಾರಿ, ಅಂಕೋಲಾ, ಉತ್ತರ ಕನ್ನಡ

ಜನತಾ ಪಕ್ಷದ ಉದಯದ ಹಿಂದೆ...

ಜನಸಂಘವು ಜನತಾ ಪಾರ್ಟಿ ಆಗಿ, ಆಮೇಲೆ ಬಿಜೆಪಿ ಆಗಿ ಬೆಳೆದಿದೆ ಎಂದಿದ್ದಾರೆ ಕೇಂದ್ರ ಗೃಹ ಸಚಿವ ಅಮಿತ್ ಶಾ (ಪ್ರ.ವಾ., ಫೆ. 24). ವಾಸ್ತವವಾಗಿ 1977ರಲ್ಲಿ ಲೋಕನಾಯಕ ಜಯಪ್ರಕಾಶ ನಾರಾಯಣ ಅವರು ಇಂದಿರಾ ಗಾಂಧಿ ಅವರ ಸರ್ವಾಧಿಕಾರಿ ಧೋರಣೆಯ ಆಡಳಿತದ ವಿರುದ್ಧ ಹೋರಾಡಲು ಜನತಾ ಪಕ್ಷಕ್ಕೆ ಬೀಜ ಹಾಕಿದರು. ಈ ಹೊಸ ಪಕ್ಷದಲ್ಲಿ ಸಂಸ್ಥಾ ಕಾಂಗ್ರೆಸ್, ಭಾರತೀಯ ಲೋಕದಳ, ಪಿಎಸ್‌ಪಿ, ಜನಸಂಘ, ಸಿಎಫ್‌ಡಿಯಂತಹ ಪಕ್ಷಗಳು ವಿಲೀನವಾಗಿ, ಜನತಾ ಪಕ್ಷ ಎಂಬ ಹೊಸ ಹೆಸರಿನ ಪಕ್ಷವಾಯಿತು. ಅಂದರೆ ಜನಸಂಘವೊಂದೇ ಜನತಾ ಪಾರ್ಟಿ ಆದದ್ದಲ್ಲ. ನಂತರ ಈ ಜನತಾ ಪಾರ್ಟಿಯ ಒಡಕಿಗೆ ಅದೇ ಜನಸಂಘದ (ದ್ವಿಸದಸ್ಯತ್ವವೆಂಬ ವಿವಾದದಿಂದ) ನಾಯಕರು ಕಾರಣರಾದರು ಎಂಬುದು ಕೂಡ ಮರೆಯಬಾರದ ವಿಪರ್ಯಾಸ.

ಹುರುಕಡ್ಲಿಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕಾಣುತ್ತಿದೆಯೇ ನಿಮ್ಮ ಶಾಲೆಯ ದುಃಸ್ಥಿತಿ?

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕತ್ತರಘಟ್ಟ ಗ್ರಾಮದ, ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಕೆ.ಪಿ.ಶಿವಕುಮಾರ್ ಅವರು ತಮ್ಮ ಗ್ರಾಮದಲ್ಲಿನ ಪ್ರಾಥಮಿಕ ಶಾಲೆಯ ದುಃಸ್ಥಿತಿಯನ್ನು ಕಂಡು, ಶಿಥಿಲಾವಸ್ಥೆ ತಲುಪಿದ್ದ ಶಾಲೆಯ ನೂತನ ಕಟ್ಟಡ ನಿರ್ಮಾಣಕ್ಕೆ ₹ 50 ಲಕ್ಷ ದೇಣಿಗೆ ನೀಡಿರುವುದು (ಪ್ರ.ವಾ., ಫೆ. 26) ನಿಜಕ್ಕೂ ಮೆಚ್ಚುಗೆಯ ವಿಷಯ. ಹಳ್ಳಿ ಹಳ್ಳಿಗಳಲ್ಲಿ ವ್ಯಾಸಂಗ ಮಾಡಿ ಇಂದು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವವರು, ತಾವು ಓದಿದ ಶಾಲೆಗಳಿಗೆ ಒಮ್ಮೆ ಭೇಟಿ ನೀಡಿದರೆ, ಅಲ್ಲೂ ಈ ರೀತಿ ಬಿದ್ದುಹೋಗುತ್ತಿರುವ ಶಾಲೆಗಳು ಕಾಣಸಿಗುತ್ತವೆ. ಅವುಗಳಿಗೆ ಪುನರುಜ್ಜೀವನ ಕಲ್ಪಿಸುವ ಕಾಯಕಕ್ಕೆ ಅವರು ಮುಂದಾಗಲಿ. ಶಿವಕುಮಾರ್ ಅವರ ಆದರ್ಶ ನಡೆಯು ಇತರರಿಗೆ ಮಾರ್ಗದರ್ಶನವಾಗಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಶೀರ್ಷಿಕೆಯಲ್ಲಿ ಎಚ್ಚರವಿರಲಿ

ಇದೀಗ ಕನ್ನಡ ಸಿನಿಮಾವೊಂದು ಬಿಡುಗಡೆಗೆ ಸಿದ್ಧವಾಗಿದೆ. ಹೆಸರು: 'ಕಡಲ ತೀರದ ಭಾರ್ಗವ'. ಶಿವರಾಮ ಕಾರಂತರು ಅತ್ಯುನ್ನತ, ಅಮೋಘ, ಮೌಲಿಕ, ಅಸೀಮ ಸಾಹಿತ್ಯಕ ಸಾಧನೆಗಾಗಿ, ಹೆಮ್ಮೆ, ಪ್ರೀತಿ, ಅಭಿಮಾನದಿಂದ 'ಕಡಲ ತೀರದ ಭಾರ್ಗವ' ಎಂಬ ಬಿರುದಿನಿಂದ ಕರೆಯಲ್ಪಟ್ಟವರು, ಗೌರವಿಸಲ್ಪಟ್ಟವರು.

ಸಿನಿಮಾ ಪೋಸ್ಟರುಗಳಲ್ಲಿ ಮೈತುಂಬಾ ಗಾಯದ ಇಬ್ಬರು ಯುವಕರ ಚಿತ್ರಗಳಿವೆ! ಇಡೀ ಸಿನಿಮಾ ಅದೆಷ್ಟು ರಕ್ತದಿಂದ ತೊಯ್ದಿದೆಯೋ! ಹಿಂದೊಮ್ಮೆ 'ಮಾಸ್ತಿ' ಹೆಸರಿನಲ್ಲಿ ಸಿನಿಮಾ ಹೊರಬರಲಿತ್ತು. ಇದೀಗ ಕಾರಂತರು. ಈ ಚಿತ್ರ ಮಾರ್ಚ್ ಮೊದಲ ವಾರ ತೆರೆಗೆ ಅಪ್ಪಳಿಸಲಿದೆಯಂತೆ!

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದಾದ್ಯಂತ ಬಿಸಿಗಾಳಿ ಹಾವಳಿ



ಪ್ರಜಾವಾಣಿ ವಾರ್ತೆ

ದೇಶದಾದ್ಯಂತ ಚಳಿಗಾಲ ಮುಗಿಯುವ ಮುನ್ನವೇ ಉಷ್ಣಾಂಶದಲ್ಲಿ ತೀವ್ರ ಏರಿಕೆ ಕಂಡು ಬಂದಿದೆ. ಇತ್ತೀಚೆಗೆ ವರ್ಷದಿಂದ ವರ್ಷಕ್ಕೆ ಉಷ್ಣಾಂಶದಲ್ಲಿ ಏರಿಕೆ ಸಾಮಾನ್ಯ ವಿದ್ಯಮಾನವಾಗಿದೆ. ಈ ವರ್ಷದ ಫೆಬ್ರುವರಿಯಲ್ಲಿ ಉಷ್ಣಾಂಶವು ಸರಾಸರಿಗಿಂತ ಗಣನೀಯವಾಗಿ ಹೆಚ್ಚೇ ಇತ್ತು ಎಂಬುದನ್ನು ಸ್ಕೈಮೆಟ್ ಹವಾಮಾನ ಸಂಸ್ಥೆ ಗುರುತಿಸಿದೆ. 2022ರ ಮಾರ್ಚ್‌ನಲ್ಲಿ ಇದ್ದ ಉಷ್ಣಾಂಶವು 122 ವರ್ಷಗಳಲ್ಲಿಯೇ ಅತ್ಯಂತ ಹೆಚ್ಚು. ಸರಾಸರಿ ಗರಿಷ್ಠ ಉಷ್ಣಾಂಶವು 30.7 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗಿತ್ತು.

2023ರಲ್ಲಿ ದೀರ್ಘಾವಧಿ ಮುನ್ಸೂಚನೆ ಪ್ರಕಾರ, ಮಾರ್ಚ್ ತಿಂಗಳಲ್ಲಿ ಉಷ್ಣಾಂಶವು ಕಳೆದ ವರ್ಷಕ್ಕಿಂತಲೂ ಹೆಚ್ಚಳವಾಗಬಹುದು. ಹಗಲು ಮತ್ತು ರಾತ್ರಿಯ ಉಷ್ಣಾಂಶವು ವಾಡಿಕೆಗಿಂತ ಹೆಚ್ಚೇ ಇರಲಿದೆ. ಭಾರತದ ವಾಯವ್ಯ, ಮಧ್ಯ ಮತ್ತು ಪೂರ್ವ ಭಾಗಗಳಲ್ಲಿ ಫೆಬ್ರುವರಿ ಕೊನೆಯ ವಾರದಲ್ಲಿ ಉಷ್ಣಾಂಶವು ಗರಿಷ್ಠ ಮಟ್ಟದಲ್ಲಿ ಇತ್ತು. ಐದಾರು ದಿನಗಳ ಕಾಲ ಸಾಮಾನ್ಯ ಉಷ್ಣಾಂಶಕ್ಕಿಂತ ಮೂರರಿಂದ ಐದು ಡಿಗ್ರಿ ಸೆಲ್ಸಿಯಸ್ ಹೆಚ್ಚಿನ ಉಷ್ಣತೆ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಫೆಬ್ರುವರಿ ಕೊನೆಯ ವಾರದಲ್ಲಿ ಮುನ್ಸೂಚನೆ ನೀಡಿತ್ತು.

ದೇಶದ ಬಹುತೇಕ ಎಲ್ಲ ಭಾಗಗಳಲ್ಲಿಯೂ ಫೆಬ್ರುವರಿಯ ಕೊನೆಯ ವಾರದ ಉಷ್ಣಾಂಶವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಇರುವ ಉಷ್ಣಾಂಶದ ಮಟ್ಟದಲ್ಲಿತ್ತು. ಮಾರ್ಚ್ ತಿಂಗಳ ಮೊದಲ ಎರಡು ವಾರಗಳಲ್ಲಿ ವಾಯವ್ಯ ಪ್ರದೇಶದಲ್ಲಿ ಉಷ್ಣತೆಯು 40 ಡಿಗ್ರಿ ಸೆಲ್ಸಿಯಸ್ ದಾಟಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ವರ್ಷದ ಬೇಸಿಗೆಯು ತೀವ್ರವಾಗಿ ಇರಲಿದೆ ಎಂಬ ಕಳವಳವನ್ನು ಇದು ಮೂಡಿಸಿದೆ.

ಕರ್ನಾಟಕದ ಕೆಲವು ಭಾಗಗಳಲ್ಲಿಯೂ ಫೆಬ್ರುವರಿ ತಿಂಗಳ ಕೊನೆಯ ವಾರದ ಕೆಲವು ದಿನಗಳಲ್ಲಿ ವಾಡಿಕೆಗಿಂತ 2 ಡಿಗ್ರಿ ಸೆಲ್ಸಿಯಸ್‌ನಿಂದ ಮೂರು ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗಬಹುದು ಎಂದು ಹವಾಮಾನ ಇಲಾಖೆ ಹೇಳಿತ್ತು. ಮಧ್ಯ ಕರ್ನಾಟಕ ಮತ್ತು ಉತ್ತರ ಒಳನಾಡಿನಲ್ಲಿ ಮೂರರಿಂದ ನಾಲ್ಕು ಡಿಗ್ರಿ ಸೆಲ್ಸಿಯಸ್ ಏರಿಕೆ ಆಗಬಹುದು ಎಂದು ಹವಾಮಾನ ಇಲಾಖೆ ಹೇಳಿತ್ತು.

ಬೆಂಗಳೂರಿನಲ್ಲಿ ಫೆಬ್ರುವರಿ ಕೊನೆಯ ವಾರದಲ್ಲಿ ಗರಿಷ್ಠ 32 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಕಲಬುರ್ಗಿಯಲ್ಲಿ ಸರಾಸರಿ ಗರಿಷ್ಠ ಉಷ್ಣಾಂಶವು 37.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಕೃಷಿ ಇಳುವರಿ ಇಳಿಕೆ ಸಾಧ್ಯತೆ

ಉಷ್ಣಾಂಶ ಏರಿಕೆಯು ಕೃಷಿ ಇಳುವರಿಯ ಮೇಲೆ ಗಣನೀಯವಾದ ಪರಿಣಾಮ ಬೀರಬಹುದು ಎಂಬ ಆತಂಕ ಎದುರಾಗಿದೆ. ಗೋಧಿ ಮತ್ತು ಸಾಸಿವೆ ಬೆಳೆ ಬೆಳೆದು ನಿಂತಿದೆ. ಈ ಹೊತ್ತಿನಲ್ಲಿ ಉಷ್ಣಾಂಶ ಹೆಚ್ಚಾದರೆ ಇಳುವರಿಯ ಪ್ರಮಾಣ ಮತ್ತು ಗುಣಮಟ್ಟ ಎರಡರ ಮೇಲೆಯೂ ಪ್ರತಿಕೂಲ ಪರಿಣಾಮ ಉಂಟಾಗಬಹುದು. ಉಷ್ಣಾಂಶ ಹೆಚ್ಚಳದಿಂದಾಗಿ ಈ ವರ್ಷ ಮಳೆ ಕಡಿಮೆಯಾಗುವ ಅಪಾಯವೂ ಇದೆ. ಹಾಗಾದರೆ, ಮುಂದಿನ ಬೆಳೆ ಋತುವಿನಲ್ಲಿ ಭತ್ತ ಮತ್ತು ಇತರ ಧಾನ್ಯಗಳ ಇಳುವರಿ ಮೇಲೆ ಪರಿಣಾಮವಾಗಲಿದೆ. ಉಷ್ಣಾಂಶ ಹೆಚ್ಚಳವು ಗೋಧಿ ಬೆಳೆಯ ಮೇಲೆ ಯಾವ ಪರಿಣಾಮ ಬೀರಲಿದೆ ಎಂಬುದರ ಮೇಲೆ ನಿಗಾ ಇರಿಸಲು ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯವು ಇತ್ತೀಚೆಗೆ ಹೇಳಿದೆ. ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಏರುತ್ತಿರುವ ಉಷ್ಣಾಂಶಕ್ಕೆ ಹೊಂದಿಕೊಳ್ಳಬಲ್ಲ ವಿಶೇಷ ಗೋಧಿ ತಳಿಯನ್ನು ಅಭಿವೃದ್ಧಿಪಡಿಸಿರುವುದಾಗಿ ಭಾರತೀಯ ಕೃಷಿ ಸಂಶೋಧನಾ ಪರಿಷತ್ ಪ್ರಕಟಿಸಿದೆ.

ಉಷ್ಣತೆ ಏರಿಕೆಯು ಆಹಾರ ಪದಾರ್ಥಗಳ ಸಾಗಾಟದ ಮೇಲೆಯೂ ಪರಿಣಾಮ ಬೀರುತ್ತದೆ. ಭಾರತದಲ್ಲಿ ಶೀಥಲೀಕರಣ ಘಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ. ಹಾಗಾಗಿ ತಾಜಾ ಉತ್ಪನ್ನಗಳನ್ನು ಸಂಗ್ರಹಿಸಿ ಇರಿಸಲು ಸಾಧ್ಯವಿಲ್ಲ. ತಕ್ಷಣವೇ ಸಾಗಾಟ ಮಾಡಬೇಕಾಗುತ್ತದೆ. ಬಿಸಿ ಗಾಳಿಯಿಂದಾಗಿ ತಾಜಾ ಆಹಾರ ಪದಾರ್ಥಗಳ ಬಹುಭಾಗ ಹಾಳಾಗುತ್ತದೆ.

ಆಹಾರ ಧಾನ್ಯಗಳ ಕೊರತೆಯು ದರ ಏರಿಕೆಗೆ ಕಾರಣವಾಗುತ್ತದೆ. ಇದರಿಂದಾಗಿ ಈಗಾಗಲೇ ಏರುಗತಿಯಲ್ಲಿ ಇರುವ ಹಣದುಬ್ಬರವು ಇನ್ನಷ್ಟು ಹೆಚ್ಚಳವಾಗಬಹುದು ಎಂಬ ಕಳವಳವನ್ನು ಪರಿಣತರು ವ್ಯಕ್ತಪಡಿಸಿದ್ದಾರೆ.

ಯಾವುದು ಬಿಸಿಗಾಳಿ, ಯಾವುದು ತೀವ್ರ ಬಿಸಿಗಾಳಿ?

ದೇಶದ ಯಾವುದೇ ಒಂದು ಪ್ರದೇಶದ ಉಷ್ಣಾಂಶವು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವಂತಿದ್ದರೆ ಅಥವಾ ಸಾವು ತರಿಸುವಷ್ಟು ತೀವ್ರ ಸ್ವರೂಪದಲ್ಲಿದ್ದರೆ ಅದು ಬಿಸಿಗಾಳಿ ಎನಿಸಿಕೊಳ್ಳುತ್ತದೆ. ಅಂದರೆ, ಒಂದು ಭೌಗೋಳಿಕ ಪ್ರದೇಶದಲ್ಲಿನ ಉಷ್ಣಾಂಶವು ಅಲ್ಲಿನ ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ ವಿಪರೀತ ಪ್ರಮಾಣದಲ್ಲಿ ಹೆಚ್ಚಾದರೆ ಅದನ್ನೂ ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಆಯಾ ಭೌಗೋಳಿಕ ಪ್ರದೇಶದ ವಾತಾವರಣಕ್ಕೆ ಅನುಗುಣವಾಗಿ ಹಾಗೂ ಉಷ್ಣತೆಯ ಗರಿಷ್ಠ ಮಟ್ಟದ ಆಧಾರದಲ್ಲಿ ಬಿಸಿಗಾಳಿಯನ್ನು ವ್ಯಾಖ್ಯಾನಿಸಲಾಗುತ್ತದೆ.

ಬಯಲು ಪ್ರದೇಶ: ಯಾವುದೇ ಬಯಲು ಪ್ರದೇಶದಲ್ಲಿ ದಿನದ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತಲೂ ಹೆಚ್ಚು ಇದ್ದರೆ ಅದನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ

ಗುಡ್ಡಗಾಡು ಪ್ರದೇಶ: ಗುಡ್ಡಗಾಡು ಪ್ರದೇಶದಲ್ಲಿ ದಿನವೊಂದರಲ್ಲಿ ಗರಿಷ್ಠ ಉಷ್ಣಾಂಶವು 30 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತಲೂ ಹೆಚ್ಚು ಇದ್ದರೆ ಅದನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ

ಗರಿಷ್ಠ ಉಷ್ಣಾಂಶದಲ್ಲಿ ಏರಿಕೆ: ಯಾವುದೇ ಒಂದು ಪ್ರದೇಶದಲ್ಲಿನ ಉಷ್ಣಾಂಶವು, ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ 4.5ರಿಂದ 6.4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾದರೆ ಆ ಪರಿಸ್ಥಿತಿಯನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ 6.5 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚು ದಾಖಲಾದರೆ ಆ ಪರಿಸ್ಥಿತಿಯನ್ನು ತೀವ್ರ ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ

45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು: ದೇಶದ ಯಾವುದೇ ಭಾಗದ ದಿನದ ಗರಿಷ್ಠ ಉಷ್ಣಾಂಶವು 45 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಾದರೆ ಆ ಪರಿಸ್ಥಿತಿಯನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಅದೇ ಪ್ರದೇಶದಲ್ಲಿ ದಿನದ ವೇಳೆ ಗರಿಷ್ಠ ಉಷ್ಣಾಂಶವು 47 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಾದರೆ ಆ ಪರಿಸ್ಥಿತಿಯನ್ನು ತೀವ್ರ ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ

ಪರಿಗಣನೆ ಹೇಗೆ?

ಭೌಗೋಳಿಕ ಪ್ರದೇಶವೊಂದರಲ್ಲಿ ಸ್ಥಾಪಿಸಲಾಗಿರುವ ಹವಾಮಾನ ಕೇಂದ್ರದಲ್ಲಿ 1981–2010ರವರೆಗಿನ 30 ವರ್ಷಗಳ ಅವಧಿಯಲ್ಲಿ ದಾಖಲಾದ ಸಾಮಾನ್ಯ ಗರಿಷ್ಠ ಉಷ್ಣಾಂಶದ ಆಧಾರದಲ್ಲಿ ಆ ಪ್ರದೇಶದ ಗರಿಷ್ಠ ಉಷ್ಣಾಂಶವನ್ನು ಐಎಂಡಿ (ಭಾರತೀಯ ಹವಾಮಾನ ಇಲಾಖೆ) ನಿರ್ಧರಿಸುತ್ತದೆ. ಇಂತಹ ವಿವಿಧ ಹವಾಮಾನ ಕೇಂದ್ರಗಳಲ್ಲಿ ದಾಖಲಾದ ಗರಿಷ್ಠ ಉಷ್ಣಾಂಶದ ಆಧಾರದಲ್ಲಿ ಆಯಾ ಪ್ರದೇಶದ ಬಿಸಿಗಾಳಿಯ ಸಾಧ್ಯತೆಯನ್ನು ಐಎಂಡಿ ವಿಶ್ಲೇಷಿಸುತ್ತದೆ.

ಬಿಸಿಗಾಳಿಗೆ ಅನುಕೂಲಕರ ಪರಿಸ್ಥಿತಿಗಳು:

- ಪ್ರದೇಶವೊಂದರಲ್ಲಿ ಒಣಹವೆ ಇರುವಿಕೆ ಹಾಗೂ ಅದರ ಸರಾಗ ಸಂಚಾರ
- ವಾತಾವರಣದ ತೇವಾಂಶ ಕಡಿಮೆಯಾಗುವುದು
- ಮೋಡಗಳು ಇಲ್ಲದ ಶುಭ್ರ ಆಕಾಶ

ಮುನ್ನೆಚ್ಚರಿಕೆ

- ಮಧ್ಯಾಹ್ನ 12 ಗಂಟೆಯಿಂದ 3 ಗಂಟೆ ಸಮಯದಲ್ಲಿ ಬಿಸಿಲಿನ ಝಳಕ್ಕೆ ಒಡ್ಡಿಕೊಳ್ಳದಿರುವುದು ಒಳಿತು
- ಹೊರಗೆ ಹೋಗಬೇಕೆಂದಿದ್ದರೆ, ಹಗುರವಾದ ಹಾಗೂ ಸಡಿಲವಾದ ಹತ್ತಿ ಬಟ್ಟೆ ಧರಿಸಬೇಕು
- ಹೊರಗಡೆ ಕೆಲಸ ಮಾಡುವವರು ತಲೆ, ಕುತ್ತಿಗೆ, ಮುಖ ಹಾಗೂ ಕೈಕಾಲು ಮುಚ್ಚುವಂತಹ ಬಟ್ಟೆ ಧರಿಸಬೇಕು
- ನಿಲುಗಡೆ ಮಾಡಿರುವ ವಾಹನಗಳಲ್ಲಿ ಮಕ್ಕಳು ಹಾಗೂ ಸಾಕುಪ್ರಾಣಿಗಳನ್ನು ಬಿಡಬಾರದು
- ಸೂರ್ಯನ ಬಿಸಿಲಿನಿಂದ ರಕ್ಷಣೆ ನೀಡುವ ಕನ್ನಡಕ, ಟೋಪಿ, ಛತ್ರಿ ಬಳಸಬೇಕು
- ಬಾಯಾರಿಕೆ ಇಲ್ಲದಿದ್ದರೂ, ಯಥೇಚ್ಛ ನೀರು ಕುಡಿಯಬೇಕು
- ನಿರ್ಜಲೀಕರಣಕ್ಕೆ ಕಾರಣವಾಗಬಹುದಾದ ಮದ್ಯ, ಕಾಫಿ, ಟೀ, ಕಾರ್ಬೊನೇಟೆಡ್ ಪಾನೀಯಗಳಿಂದ ದೂರವಿರಬೇಕು
- ಹೆಚ್ಚು ಪ್ರೊಟೀನ್‌ಭರಿತ ಆಹಾರ ಮತ್ತು ಹಳಸಿದ ಆಹಾರ ಸೇವಿಸಬಾರದು
- ಒಆರ್‌ಎಸ್, ಮನೆಯಲ್ಲಿ ತಯಾರಿಸಿದ ಲಸ್ಸಿ, ಮಜ್ಜಿಗೆ, ನಿಂಬೆ ಶರಬತ್ತು ಕುಡಿಯಬೇಕು
- ತಣ್ಣೀರಿನಲ್ಲಿ ಸ್ನಾನ ಮಾಡಬೇಕು. ಮನೆಯನ್ನು ತಂಪಾಗಿರಿಸಬೇಕು. ಗಾಳಿಯಾಡುವಂತೆ ರಾತ್ರಿಹೊತ್ತು ಕಿಟಕಿಗಳನ್ನು ತೆರೆದಿಡಬೇಕು
- ಆರೋಗ್ಯದಲ್ಲಿ ಏರುಪೇರು ಉಂಟಾದರೆ ವೈದ್ಯರನ್ನು ಸಂಪರ್ಕಿಸಬೇಕು

ಭಾರತದಲ್ಲಿ ಬಿಸಿಗಾಳಿಯ ಸ್ಥಿತಿ

ಬಿಸಿಲಿನ ಅವಧಿ: ಭಾರತದಲ್ಲಿ ಮಾರ್ಚ್ ತಿಂಗಳಿನಿಂದ ಜೂನ್ ತಿಂಗಳ ಅವಧಿಯಲ್ಲಿ ಬಿಸಿಗಾಳಿ ಉಂಟಾಗಬಹುದು. ಕೆಲವೊಮ್ಮೆ ಜುಲೈ ತಿಂಗಳಿಗೂ ಅದು ವಿಸ್ತರಿಸುತ್ತದೆ.
ಎಲ್ಲೆಲ್ಲಿ ಬಿಸಿಗಾಳಿ: ಪಂಜಾಬ್, ಹರಿಯಾಣ, ದೆಹಲಿ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್ ಹಾಗೂ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣದ ಕೆಲವು ಭಾಗಗಳಲ್ಲಿ ಬಿಸಿಗಾಳಿ ಸಂಭಾವ್ಯತೆ ಹೆಚ್ಚು. ತಮಿಳನಾಡು ಹಾಗೂ ಕೇರಳದಲ್ಲೂ ಕೆಲವೊಮ್ಮೆ ಉಂಟಾಗುತ್ತದೆ.

ಐಎಂಡಿ ಎಚ್ಚರಿಕೆ ವಿಧಾನ

ಯೆಲ್ಲೋ ಅಲರ್ಟ್: ಆಯ್ದ ಪ್ರದೇಶಗಳಲ್ಲಿ ವಾತಾವರಣದ ಉಷ್ಣಾಂಶ ಹೆಚ್ಚಳವು ಎರಡು ದಿನಗಳವರೆಗೆ ಇದ್ದಾಗ ಈ ಎಚ್ಚರಿಕೆ ನೀಡಲಾಗುತ್ತದೆ; ಸಾಮಾನ್ಯ ಜನರಿಗೆ ತೊಂದರೆಯಾಗುವುದಿಲ್ಲ; ಮಕ್ಕಳು, ವಯಸ್ಸಾದವರು, ಅನಾರೋಗ್ಯ ಪೀಡಿತರ ಮೇಲೆ ಪರಿಣಾಮ ಸಾಧ್ಯತೆ
ಆರೆಂಜ್ ಅಲರ್ಟ್: ಇದು ತೀವ್ರ ಉಷ್ಣಾಂಶದ ಎಚ್ಚರಿಕೆ; ತೀವ್ರ ಬಿಸಿಗಾಳಿ ಎರಡು ದಿನ ಕಂಡುಬಂದರೆ ಹಾಗೂ ಬಿಸಿಗಾಳಿ ನಾಲ್ಕು ದಿನಗಳವರೆಗೆ ಮುಂದುವರಿದರೆ ಆರೆಂಜ್ ಅಲರ್ಟ್ ನೀಡಲಾಗುತ್ತದೆ; ಬಿಸಿಗಾಳಿಗೆ ಹೆಚ್ಚು ಸಮಯ ಒಡ್ಡಿಕೊಂಡ ಜನರು ಹಾಗೂ ಹೆಚ್ಚು ಶ್ರಮದಾಯಕ ಕೆಲಸ ಮಾಡುವವರಲ್ಲಿ ಉಷ್ಣಾಂಶಕ್ಕೆ ಸಂಬಂಧಪಟ್ಟ ಸಮಸ್ಯೆ ಕಾಣಿಸಿಕೊಳ್ಳಬಹುದು; ಮಕ್ಕಳು, ವಯಸ್ಸಾದವರು, ಅನಾರೋಗ್ಯ ಪೀಡಿತರ ಮೇಲೆ ಪರಿಣಾಮ ಸಾಧ್ಯತೆ
ರೆಡ್ ಅಲರ್ಟ್: ತೀವ್ರ ಮತ್ತು ಅತ್ಯಂತ ತೀವ್ರ ಉಷ್ಣಾಂಶದ ಎಚ್ಚರಿಕೆ; ತೀವ್ರ ಬಿಸಿಗಾಳಿ ಎರಡು ದಿನ ಮುಂದುವರಿದರೆ ಅಥವಾ ಬಿಸಿಗಾಳಿಯು ಸತತ ಆರು ದಿನಕ್ಕಿಂತ ಹೆಚ್ಚು ಮುಂದುವರಿದರೆ ರೆಡ್ ಅಲರ್ಟ್ ನೀಡಲಾಗುತ್ತದೆ; ಎಲ್ಲ ವಯೋಮಾನದ ಜನರಲ್ಲಿ ಉಷ್ಣಾಂಶಕ್ಕೆ ಸಂಬಂಧಿಸಿದ ಕಾಯಿಲೆ ಮತ್ತು 'ಹೀಟ್ ಸ್ಟ್ರೋಕ್' ಉಂಟಾಗುವ ಸಾಧ್ಯತೆ

ಆರೋಗ್ಯದ ಮೇಲಿರಲಿ ಎಚ್ಚರ

ತಾಪಮಾನ ಹೆಚ್ಚಳ ಅಥವಾ ಬಿಸಿ ಗಾಳಿಯು ಜನರು ಹಾಗೂ ಜಾನುವಾರುಗಳ ಆರೋಗ್ಯವನ್ನು ಏರುಪೇರು ಮಾಡುತ್ತದೆ. ಮುಖ್ಯವಾಗಿ ನಿರ್ಜಲೀಕರಣ ಕಾಡಬಹುದು. ಬಿಸಿಲಿಗೆ ಒಡ್ಡಿಕೊಂಡ ಜನರಲ್ಲಿ ಊತ, ತಲೆನೋವು, ವಾಕರಿಕೆ, ಸುಸ್ತು, ವಾಂತಿ ಕಾಣಿಸಿಕೊಳ್ಳಬಹುದು. ಇದರ ಜೊತೆ ಜ್ವರ (102 ಡಿಗ್ರಿ ಫ್ಯಾರನ್‌ಹೀಟ್) ಕಾಣಿಸಿಕೊಳ್ಳಬಹುದು. ತೀವ್ರವಾದ ಜ್ವರ ಅಂದರೆ, 104 ಡಿಗ್ರಿ ಫ್ಯಾರನ್‌ಹೀಟ್ ದಾಟಿದರೆ, ಪ್ರಜ್ಞೆ ತಪ್ಪುವ ಅಪಾಯವೂ ಇದೆ. ಕೋಮಾಕ್ಕೂ ಹೋಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಪ್ರಕಟಿಸಿರುವ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಸಿಗಾಳಿ ಎಲ್ಲಿ ಹುಟ್ಟುತ್ತದೆ?

ಸಾಮಾನ್ಯವಾಗಿ ದೇಶದ ವಾಯವ್ಯ ದಿಕ್ಕಿನಲ್ಲಿ ಬಿಸಿಗಾಳಿ ಸೃಷ್ಟಿಯಾಗುತ್ತದೆ. ಅದು ಕ್ರಮೇಣ ದೇಶದ ಪೂರ್ವ ದಿಕ್ಕಿಗೆ ಹಾಗೂ ದಕ್ಷಿಣ ದಿಕ್ಕಿಗೆ ಚಲಿಸುತ್ತದೆ. ಆದರೆ ಪಶ್ಚಿಮಕ್ಕೆ ಚಲಿಸುವುದಿಲ್ಲ. ಕೆಲವು ಸಂದರ್ಭಗಳಲ್ಲಿ ವಾತಾವರಣದಲ್ಲಿ ಆಗುವ ಬದಲಾವಣೆಗಳಿಂದ, ದೇಶದ ಯಾವ ಭಾಗದಲ್ಲಿ ಬೇಕಾದರೂ ಬಿಸಿಗಾಳಿ ಸೃಷ್ಟಿಯಾಗಬಹುದು.

ಆಧಾರ: ಭಾರತೀಯ ಹವಾಮಾನ ಇಲಾಖೆ, ಸ್ಕೈಮೆಟ್, ಪಿಟಿಐ

ಸಿನಿ ಬಿಟ್ಸ್

ಸರ್ಜಾ ಹೆಣೆದ ಮಾರ್ಟಿನ್

ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಹಾಗೂ ವೈಭವಿ ಶಾಂಡಿಲ್ಯ ನಟನೆಯ, ಎ.ಪಿ. ಅರ್ಜುನ್ ನಿರ್ದೇಶನದ 'ಮಾರ್ಟಿನ್' ಟೀಸರ್ ಸದ್ಯ ಸದ್ದು ಮಾಡುತ್ತಿದೆ. ಬಿಡುಗಡೆಯಾದ ಮೂರೇ ದಿನಗಳಲ್ಲಿ ಯೂಟ್ಯೂಬ್‌ನಲ್ಲಿ ಟೀಸರ್ 7 ಕೋಟಿ ವೀಕ್ಷಣೆ ಪಡೆದಿದೆ.

ಈ ಚಿತ್ರಕ್ಕೆ ಖ್ಯಾತ ಬಹುಭಾಷಾ ನಟ ಅರ್ಜುನ್ ಸರ್ಜಾ ಕಥೆ ಬರೆದಿದ್ದಾರೆ. ಧ್ರುವ ಅವರಿಗಾಗಿಯೇ ಈ ಕಥೆಯನ್ನು ಹೆಣೆದಿರೋ ಅರ್ಜುನ್ ಸರ್ಜಾ, 'ಧ್ರುವನಿಗೆ ಕಥೆ ಒಪ್ಪಿಸುವುದು ಅಷ್ಟು ಸುಲಭದ ಮಾತಲ್ಲ' ಎಂದಿದ್ದಾರೆ. ಕಥೆ ಬಗ್ಗೆ ವಿವರಣೆ ನೀಡಿದ ಅವರು, 'ಇವತ್ತು ಪ್ಯಾನ್ ಇಂಡಿಯಾ ಸಿನಿಮಾ ಎನ್ನುವುದು ಒಂದು ಚಳವಳಿಯ ರೂಪ ಪಡೆದಿದೆ. ಇದಕ್ಕೆ ಎಸ್.ಎಸ್.ರಾಜಮೌಳಿ, ಪ್ರಶಾಂತ್ ನೀಲ್, ರಿಷಬ್ ಶೆಟ್ಟಿ ಹೀಗೆ ಹಲವರು ಕಾರಣ. 'ಮಾರ್ಟಿನ್' ಎನ್ನುವುದು ಬೃಹತ್ ಪ್ರಾಜೆಕ್ಟ್. ಇದು ಧ್ರುವನ ಐದನೇ ಸಿನಿಮಾ. ಆತನಿಗೆ ಪಕ್ಕಾ ಕಮರ್ಷಿಯಲ್ ಸಿನಿಮಾ ಮಾಡುವ ಆಸೆ. ಯಾವ ರೀತಿಯ ಕಥೆ ಮಾಡಬೇಕು ಎನ್ನುವುದನ್ನು ನಾವೆಲ್ಲರೂ ಕೂತು ಚರ್ಚೆ ಮಾಡಿದೆವು. ಧ್ರುವನಿಗೆ ಕಥೆ ಒಪ್ಪಿಸುವುದು ತುಂಬಾನೆ ಕಷ್ಟ. ಧ್ರುವನಿಗೆ ಒಂದು ಲೈನ್ ಇಷ್ಟವಾದ ಮೇಲೆ ಮುಂದುವರಿದೆವು. ನಾನು ಇದುವರೆಗೆ ಮಾಡಿದ ಕಥೆಗಳ ಪೈಕಿ, 'ಮಾರ್ಟಿನ್' ಅತ್ಯುತ್ತಮ ಕಮರ್ಷಿಯಲ್ ಕಥೆ. ಚಿತ್ರಕಥೆಯಲ್ಲಿ ಹಲವು ತಿರುವುಗಳಿವೆ. ಚಿತ್ರಕ್ಕಾಗಿ ಧ್ರುವನಲ್ಲಿದ್ದ ಆಸ್ಥೆ ಮೆಚ್ಚುವಂತಹದ್ದು. ನಾನಿಷ್ಟು ಸಿನಿಮಾ ಮಾಡಿದರೂ, ಅವನ ಬಳಿ ಕಲಿಯುವುದು ಬಹಳಷ್ಟಿದೆ' ಎನ್ನುತ್ತಾರೆ.

'ಇಡೀ ಸಿನಿಮಾ ಭಾರತ–ಪಾಕಿಸ್ತಾನದ ನಡುವಿನ ಕಥೆಯಲ್ಲ. ಪಾಕಿಸ್ತಾನದಲ್ಲಿ ಕೆಲ ಘಟನೆಗಳು ನಡೆಯುತ್ತವೆ. ಇದಕ್ಕೆ ಇರುವ ಸಂಬಂಧವೇನು ಎನ್ನುವುದನ್ನು ಚಿತ್ರದಲ್ಲೇ ನೋಡಬೇಕು. ಈಗಾಗಲೇ ಪ್ಯಾನ್ ಇಂಡಿಯಾ ಸಿನಿಮಾ ಮಾಡಿರುವ ಹೀರೊಗಳು ನನ್ನ ಸಹೋದ್ಯೋಗಿಗಳು. ನಾನು ಸ್ನೇಹಿತರೊಂದಿಗೆ ಸ್ಪರ್ಧೆಗಿಳಿಯಲು ಬಯಸಲ್ಲ' ಎನ್ನುತ್ತಾರೆ ಧ್ರುವ ಸರ್ಜಾ.

ಧ್ರುವ ಸರ್ಜಾ

ನೈಜ ಘಟನೆಯ 'ಇನ್‌ಕಾರ್'

ನಟಿ ರಿತಿಕಾ ಸಿಂಗ್ ನಟಿಸಿರುವ ಪ್ಯಾನ್ ಇಂಡಿಯಾ ಸಿನಿಮಾ 'ಇನ್‌ಕಾರ್' ಮಾರ್ಚ್ 3ರಂದು ತೆರೆಗೆ ಬರಲು ಸಜ್ಜಾಗಿದೆ. ಹರಿಯಾಣದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಘಟನೆಯ ನೈಜ ಅಂಶಗಳನ್ನು ಆರಿಸಿಕೊಂಡು ಅದನ್ನು ಚಿತ್ರರೂಪಕ್ಕೆ ತಂದಿದ್ದಾರೆ ನಿರ್ದೇಶಕ ಹರ್ಷವರ್ಧನ್. ಚಿತ್ರಕಥೆಯೂ ಅವರದ್ದೇ. ಇನ್‌ಬಾಕ್ಸ್ ಪಿಕ್ಚರ್ಸ್‌ನಡಿ ಅಂಜುಮ್ ಖುರೇಶಿ ಹಾಗೂ ಸಾಜಿದ್ ಖುರೇಶಿ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

'ಇದು ಒಂದು ದಿನದಲ್ಲಿ ನಡೆಯುವ ಕಥೆಯಾಗಿದೆ. ಹೀಗಾಗಿ ಎರಡು ಗಂಟೆಯ ಸಿನಿಮಾಗಾಗಿ ಒಂದೇ ರೀತಿಯಲ್ಲಿ ಕಾಣುವುದು ಅಗತ್ಯವಾಗಿತ್ತು. ಇದು ಸವಾಲಿನಿಂದ ಕೂಡಿತ್ತು. ಇದಕ್ಕಾಗಿ ಎರಡು ವಾರ ನಾನು ತಲೆಗೆ ಸ್ನಾನ ಮಾಡಿರಲಿಲ್ಲ' ಎನ್ನುತ್ತಾರೆ 'ಸಾಕ್ಷಿ ಗುಲಾಟಿ' ಎಂಬ ಪಾತ್ರದಲ್ಲಿ ನಟಿಸಿರುವ ರಿತಿಕಾ. ಕಾಲೇಜು ವಿದ್ಯಾರ್ಥಿನಿಯೋರ್ವಳ ಅಪಹರಣದ ಬೆನ್ನಲ್ಲೇ ನಡೆಯುವ ಘಟನೆಗಳನ್ನು ಚಿತ್ರಕಥೆಯು ಹೊಂದಿದೆ. ಮಾಥ್ಯೂಸ್ ಡುಪ್ಲೆಸ್ಸಿ ಸಂಗೀತ, ಮಿಥುನ್ ಗಂಗೋಪಾಧ್ಯಾಯ ಛಾಯಾಗ್ರಹಣ, ಸುನಿಲ್ ರೋಡ್ರಿಗಸ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಸಿನಿಮಾ ಹಿಂದಿ ಸೇರಿದಂತೆ ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಗಳಲ್ಲಿ ತೆರೆಕಾಣಲಿದೆ.

ರಿತಿಕಾ ಸಿಂಗ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಎಂಟು ವರ್ಷದ ಮಗುವನ್ನು ವ್ಯಕ್ತಿಯೊಬ್ಬ ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಹಿಂದೂ ಧರ್ಮಕ್ಕೆ ಸೇರಿದ ಬಾಲಕನನ್ನು ಇಸ್ಲಾಂ ಧರ್ಮೀಯ ವ್ಯಕ್ತಿಯೊಬ್ಬರು ಹೊಡೆಯುತ್ತಿದ್ದಾರೆ. ಹಿಂದೂ ಪೋಷಕರು ತಮ್ಮ ಮಗುವನ್ನು ಪಕ್ಕದ ಮುಸ್ಲಿಂ ಸಮುದಾಯದವರ ಮನೆಯಲ್ಲಿ ಬಿಟ್ಟು ಹೋಗಿದ್ದಾಗ ಈ ಕೃತ್ಯ ನಡೆದಿದೆ. ಜಿಹಾದಿ ಕೈಯಿಂದ ಹಿಂದೂ ಮಗು ನೋವು ಅನುಭವಿಸುತ್ತಿದೆ. 'ಅಲ್ಲಾಹ್ ಪಾಕ್' ಎಂದು ಹೇಳುವಂತೆ ಮಗುವಿಗೆ ಒತ್ತಾಯಿಸಿ ಥಳಿಸಲಾಗಿದೆ. ಹಿಂದೂಗಳೇ ಎಚ್ಚೆತ್ತುಕೊಳ್ಳಿ' ಎಂಬುದಾಗಿ ವಿಡಿಯೊಗೆ ವಿವರಣೆ ನೀಡಲಾಗಿದೆ. ಆದರೆ ಇದು ಸುಳ್ಳು ಸುದ್ದಿ.

ಈ ವಿಡಿಯೊ ಕುರಿತು ಧರ್ಮದ ಆಯಾಮದಲ್ಲಿ ನಡೆಯುತ್ತಿರುವ ಚರ್ಚೆ ಸತ್ಯಕ್ಕೆ ದೂರವಾದುದು ಎಂದು 'ದಿ ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ತಿಳಿಸಿದೆ. 2022ರ ಜುಲೈನಲ್ಲಿ, ಪಾಕಿಸ್ತಾನದ ಕರಾಚಿಯಲ್ಲಿ ನಡೆದ ಈ ಘಟನೆಯ ವಿಡಿಯೊವನ್ನು ಕೋಮುದ್ವೇಷ ಹರಡುವ ರೀತಿಯಲ್ಲಿ ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ. ಇಸ್ಮಾಯಿಲ್ ಎಂಬ ವ್ಯಕ್ತಿ ತನಗೆ ನಿದ್ದೆ ಮಾಡಲು ಬಿಡದೆ ಕಾಟ ಕೊಟ್ಟ ತನ್ನ ಮಗುವನ್ನು ಥಳಿಸಿದ್ದ. ಆತನ ಪತ್ನಿ ಥಳಿತದ ವಿಡಿಯೊ ಮಾಡಿ ಪೊಲೀಸರಿಗೆ ದೂರು ನೀಡಿದ್ದಳು. ಆರೋಪಿ ವಿರುದ್ಧ ಸಿಂಧ್ ಪ್ರಾಂತ್ಯದ ಪೊಲೀಸರು ಕ್ರಮ ಜರುಗಿಸಿದ್ದರು. ಇದನ್ನು ಪಾಕಿಸ್ತಾನದ 24 ನ್ಯೂಸ್, ಎಟಿವಿ ನ್ಯೂಸ್ ಸಂಸ್ಥೆಗಳು ವರದಿ ಮಾಡಿದ್ದವು. ಆರೋಪಿಯನ್ನು ಬಂಧಿಸಿದ್ದ ಚಿತ್ರವನ್ನು ಕರಾಚಿ ಪೊಲೀಸರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಭಾರತಕ್ಕೂ ಈ ವಿಡಿಯೋಗೂ ಸಂಬಂಧವಿಲ್ಲ. ಇದು ಇತ್ತೀಚಿನ ಘಟನೆಯೂ ಅಲ್ಲ. ಹಾಗೆಯೇ ಹಿಂದೂ–ಮುಸ್ಲಿಂ ಧರ್ಮದ ಆಯಾಮದಲ್ಲಿ ನಡೆಯುತ್ತಿರುವ ಚರ್ಚೆಗೂ ಅರ್ಥವಿಲ್ಲ ಎಂದು ವೆಬ್‌ಸೈಟ್ ಸ್ಪಷ್ಟಪಡಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪೂರ್ಣತೆಯ ಮತ್ತೊಂದು ರೂಪ

ತಳೆಯಲಾರನೆ ಬೊಮ್ಮ ಬೀಭತ್ಸರೂಪಗಳ? |
ನಲಿಯಲಾರನೆ ತಿಪ್ಪೆರೊಚ್ಚು ನಾತದಲಿ? ||
ಮಲವೇನೊ! ಹೊಲೆಯೇನೊ! ಜೀವ ಸಂಬಂಧವಲ |
ಮಲಿನದಲಿ ನೆನೆ ಶುಚಿಯ – ಮಂಕುತಿಮ್ಮ || **831** ||

ಪದ-ಅರ್ಥ: ಬೀಭತ್ಸರೂಪಗಳ = ಬೀಭತ್ಸ (ಜಿಗುಪ್ಸೆಯಾಗುವಂಥ) + ರೂಪಗಳ, ನಾತದಲಿ = ವಾಸನೆಯಲಿ, ಮಲಿನದಲಿ = ಕೊಳಕಿನಲಿ.

ವಾಚ್ಯಾರ್ಥ: ಬ್ರಹ್ಮ ಸುಂದರ ರೂಪಗಳನ್ನು ತಳೆದಂತೆ ಜಿಗುಪ್ಸೆಯಾಗುವ ರೂಪಗಳನ್ನು ತಾಳಲಾರನೆ? ಅವನೂ ಅಸಹ್ಯವಾದ ತಿಪ್ಪೆ ರೊಚ್ಚುಗಳಲ್ಲಿ ನಲಿಯಲಾರನೆ? ಮಲಕ್ಕಾಗಲೀ, ಹೊಲಸಿಗಾಗಲಿ ಜೀವಸಂಬಂಧವಿದೆ. ಆದ್ದರಿಂದ ಕೊಳೆಯಲ್ಲಿಯೂ ಶುಚಿಯನ್ನು ನೆನೆ.

ವಿವರಣೆ: ಇದೊಂದು ಬಹುದೊಡ್ಡ ಅಧ್ಯಾತ್ಮಿಕ ಸತ್ಯದ ಹೊಳಹು. ಪ್ರಪಂಚದ ಪ್ರತಿಯೊಂದು ವಸ್ತುವೂ ಪೂರ್ಣವೇ. ಹಾಗಾದರೆ ಅಪರಿಪೂರ್ಣತೆಗೆ ಅವಕಾಶವೆಲ್ಲಿ ಎಂಬ ಪ್ರಶ್ನೆ ಏಳುತ್ತದೆ. ಈ ಅಪರಿಪೂರ್ಣತೆಯ ಕಲ್ಪನೆ ಒಂದು ಆಂಶಿಕ ದೃಷ್ಟಿ. ಸಮಷ್ಠಿ ದೃಷ್ಟಿಯಿಂದ ಗಮನಿಸಿದಾಗ ದೋಷವೂ ನಿರ್ದೋಷವಾಗಿಯೇ ಕಾಣುತ್ತದೆ. ಆದ್ದರಿಂದ ಪರಿಪೂರ್ಣತೆ ಮತ್ತು ಅಪರಿಪೂರ್ಣತೆಗಳು ಒಟ್ಟು ವಿಶ್ವಯೋಜನೆಯ ಅವಿಭಾಜ್ಯ ಅಂಗಗಳು. ನಾವು ಒಂದು ಚಿತ್ರದ ಭಾಗವನ್ನು ಮಾತ್ರ ನೋಡಿದರೆ ಅಲ್ಲಿ ಕೆಲವು ಗೆರೆಗಳು ಮತ್ತು ಬಣ್ಣಗಳು ದೋಷಪೂರ್ಣವಾಗಿ ಕಾಣಬಹುದು. ಆದರೆ ಒಟ್ಟು ಚಿತ್ರವನ್ನು ನೋಡಿದಾಗ ಅಸಂಬದ್ಧವೆಂದು ಕಂಡ ಗೆರೆಗಳು ಮಹತ್ವಪೂರ್ಣವಾಗಿ ತೋರುತ್ತವೆ. ಅಂತೆಯೇ ನಮ್ಮ ಪ್ರಪಂಚದಲ್ಲಿ ಕಂಡ ಅನೇಕ ಅಸಹ್ಯವೆಂದು ತೋರುವ, ಕುರೂಪದ, ಪಾಶವಿಕ ಗುಣಗಳನ್ನು ಕಂಡಾಗ ನಮಗೆ ಜಿಗುಪ್ಸೆಯಾಗುತ್ತದೆ. ಅವುಗಳನ್ನು ಮರೆಯಲು ಪ್ರಯತ್ನಿಸುತ್ತೇವೆ. ಅವು ನಮ್ಮನ್ನು ಪರೋಕ್ಷದಲ್ಲಿ ಕಾಡುತ್ತವೆ. ಈ ರೂಪಗಳು ಬೇಕೇ ಎನ್ನಿಸುತ್ತದೆ. ಆದರೆ ಅವೂ ಕೂಡ ಪರಬ್ರಹ್ಮದ ವಿಶೇಷ ರೂಪಗಳೇ. ಶಾಂತ, ಸುಂದರವಾದ ಶಿವ, ತಾಂಡವವನ್ನು ಮಾಡಬಲ್ಲ. ರೌದ್ರರೂಪವನ್ನು ಧರಿಸಿ ಪ್ರಳಯವನ್ನುಂಟು ಮಾಡಬಲ್ಲ. ಶ್ರೀರಾಮನನ್ನು ಕುರಿತು ವಾಲ್ಮೀಕಿಗಳು ಹೇಳಿದ ಮಾತನ್ನು ಸ್ಮರಿಸಬೇಕು.

"ಕಾಲಾಗ್ನಿಸದೃಶ: ಕ್ರೋಧೇ ಕ್ಷಮಯಾ ಪ್ರಥಿವೀ ಸಮ: ||"

ಅವನು ಕ್ರೋಧಗೊಂಡರೆ ಕಾಲಾಗ್ನಿಗೆ ಸಮ ಆದರೆ ಕ್ಷಮೆಯಲ್ಲಿ ಧರಿತ್ರಿಗೆ ಸಮ. ಎರಡೂ ರಾಮನ ಗುಣಗಳೇ. ಆತ ಎರಡರಲ್ಲೂ ಇರಲು ಸಾಧ್ಯವಾಗುತ್ತದೆ. ಕೃಷ್ಣ ಕೊಳಲು ಹಿಡಿದು ನುಡಿಸಿ ರಸಿಕರ ಹೃದಯವನ್ನು ಅಪಹಾರ ಮಾಡಬಲ್ಲ. ಆದರೆ ವಿಶ್ವರೂಪವನ್ನು ಧರಿಸಿ ಇಡೀ ವಿಶ್ವವನ್ನು ಸ್ವಾಹಾ: ಮಾಡಬಲ್ಲ. ಈ ಮಾತೇ ಕಗ್ಗದ್ದು. ಜಗತ್ತಿನಲ್ಲಿ ಕಂಡ ಸುಂದರ, ಕುರೂಪದ, ಸಂತೋಷದ, ಬೀಭತ್ಸದ ರೂಪಗಳೆಲ್ಲ ಬ್ರಹ್ಮನದೇ. ಅವನು ಎಲ್ಲದರಲ್ಲಿಯೂ ಸಮಾನವಾಗಿಯೇ ಇರತಕ್ಕವನು. ಮಲದಿಂದಲೇ ಹುಟ್ಟಿಬರುವ ಜೀವಕ್ಕೆ ಮಲವೂ ಸಹಾಯಕವಾಗಿ ಜೀವಸಂಬಂಧವೇ ಆಗುವುದಲ್ಲ. ಅದಕ್ಕೆ ಕೊಳೆಯನ್ನು ಕಂಡಾಗ ಶುಚಿಯಾದದ್ದನ್ನು ನೆನೆದು, ಕೊಳೆಯೂ ಕೂಡ ಒಂದು ಪರ್ಯಾಯ ರೂಪವೇ ಎಂದು ಪೂರ್ಣತೆಯನ್ನು ಚಿಂತಿಸುವುದು ಕ್ಷೇಮ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 28, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ನವಮಿ ಗಂ.28-19 ನಕ್ಷತ್ರ: ರೋಹಿಣಿ ಗಂ.07-20 ಯೋಗ: ವಿಷ್ಕಂಭ ಗಂ.16-26, ಕರಣ: ಬಾಲವ ಗಂ.15-17, ಕುಂಭ ಮಾಸದ 15 ನೇ ದಿನ. ರಾಹುಕಾಲ : ಮಧ್ಯಾಹ್ನ 03-00 -04-30, ಸೂರ್ಯೋದಯ : 06-51 ಸೂರ್ಯಾಸ್ತ : 06-35
ಮುಸ್ಲಿಂ ದಿನಾಂಕ : 07 ಶಬನ್
ದಿನ ವಿಶೇಷ : ಹೋಲಾಷ್ಟಕ
ಅದೃಷ್ಟ ಸಂಖ್ಯೆ : 5, 11

ಮೇಷ: ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಕೌಶಲ ವೃದ್ಧಿಸಿಕೊಳ್ಳಲು ಹೊಸ ಅವಕಾಶಗಳು ದೊರೆಯಲಿದೆ. ತಂದೆಯವರ ಮಾತು ವೇದವಾಕ್ಯ ಎಂದು ಪರಿಪಾಲಿಸುವುದರಿಂದ ಅಭಿವೃದ್ಧಿಯ ಪಥದಲ್ಲಿ ಸಾಗುವಿರಿ.

ವೃಷಭ: ವೃತ್ತಿಭೂಮಿಕೆಯಲ್ಲಿ ಕೆಲವರು ನಾಯಕರಾಗುವ ಸಂಭವವಿದೆ. ಹೆಚ್ಚುವರಿ ಜವಾಬ್ದಾರಿಗಳನ್ನು ಜಾಗ್ರತೆಯಿಂದ ನಿರ್ವಹಿಸಿ. ಸುತ್ತಣ ಪರಿಸರದಲ್ಲಿರುವ ಬುದ್ಧಿವಂತ ವ್ಯಕ್ತಿಗಳಿಂದ ಹೆಚ್ಚಿನ ಲಾಭ ಉಂಟಾಗುವುದು.

ಮಿಥುನ: ವ್ಯಾಪಾರ ಕ್ಷೇತ್ರದಲ್ಲಿರುವವರಿಗೆ ಕಠಿಣ ಸವಾಲುಗಳು ಎದುರಾಗುತ್ತವೆ. ರಾಜಕೀಯ ಪಕ್ಷದ ನಾಯಕರು ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವಿರಿ. ಹಣಕಾಸಿನ ಲೆಕ್ಕಾಚಾರ ಇಂದು ಹೆಚ್ಚಿರುತ್ತದೆ. ಜಾಗರೂಕರಾಗಿ ನಡೆಸಿ.

ಕರ್ಕಾಟಕ: ಬೆಳವಣಿಗೆಯ ಹಾದಿಯಲ್ಲಿ ದಿಕ್ಕು ತಪ್ಪಿಸುವವರೇ ಹೆಚ್ಚಿರುವುದರಿಂದ ನಿಮ್ಮತನವನ್ನು ಪ್ರದರ್ಶಿಸುವುದು ಸ್ವಲ್ಪ ಕಷ್ಟವಾದೀತು. ನಿಲುವು ಸರಿಯಾಗಿದೆ ಎಂದು ಅನಿಸಿದಲ್ಲಿ ನಿಮ್ಮ ನಿರ್ಧಾರದಲ್ಲಿ ಧೃಡ ನಂಬಿಕೆ ಇರಲಿ.

ಸಿಂಹ: ಆರೋಗ್ಯದ ವಿಚಾರವಾಗಿ ಗಮನ ಹರಿಸಿ. ಮನೆಯಲ್ಲಿ ಸುಖ ಶಾಂತಿ ನೆಲೆಸುತ್ತದೆ. ಸಕಾರಾತ್ಮಕ ಚಿಂತನೆ ಮೈಗೂಡಿಸಿಕೊಳ್ಳುವುದರಿಂದ ನಕಾರಾತ್ಮಕ ಅಂಶ ದೂರವಾಗುತ್ತದೆ. ಏಳ್ಗೆಗೆ ನೆರವಾಗುವವರ ಸಹಾಯ ಸಿಗುವುದು.

ಕನ್ಯಾ: ಬಾಹ್ಯಾಕಾಶ ಸಂಶೋಧನಾ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಪ್ರಶಂಸಾ ನುಡಿ ದೊರೆಯುತ್ತದೆ. ಸಂಗೀತ .ಸಾಹಿತ್ಯದಂತಹಾ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ಹಿರಿಯ ಕಲಾವಿದರ ಭೇಟಿ ಮಾಡುವ ಅವಕಾಶವಿದೆ.

ತುಲಾ: ವಿದ್ಯುತ್ ಸಂಬಂಧಿ ವಸ್ತುಗಳ ಬಳಕೆಯನ್ನು ಮಾಡುವಾಗ ಹೆಚ್ಚಿನ ಮುಂಜಾಗ್ರತೆ ವಹಿಸಿ. ಬ್ಯಾಂಕ್ ಉದ್ಯೋಗಿಗಳಿಗೆ ಮೇಲಧಿಕಾರಿಗಳೊಂದಿಗೆ ಹೊಸ ಯೋಜನೆಯನ್ನು ಕುರಿತು ಗಹನವಾದ ಚರ್ಚೆಯು ನಡೆಯುವ ಸಾಧ್ಯತೆ.

ವೃಶ್ಚಿಕ: ಕೆಲಸವನ್ನು ಪೂರೈಸಲು ಮಾಡಿದ ಪ್ರಯತ್ನ ನೀರಿನಲ್ಲಿ ಹೋಮ ಮಾಡಿದಂತೆ ಆಗದಿರಲು ಮುನ್ನೆಚ್ಚರಿಕೆ ವಹಿಸಿ. ಜಾಣ್ಮೆಯ ನಡೆಯಿಂದಾಗಿ ಬಂಧುಮಿತ್ರರಲ್ಲಿ ವೈಮನಸ್ಸು ಉಂಟಾಗುವುದನ್ನು ತಪ್ಪಿಸಬಹುದು.

ಧನು: ಅನಗತ್ಯ ವದಂತಿಗೆ ಕಿವಿ ಕೊಡದಿರಿ. ವಿದ್ಯಾರ್ಥಿಗಳು ಓದಿನಲ್ಲಿ ಏಕಾಗ್ರತೆ ಸಾಧಿಸದಿದ್ದರೆ ಅಭ್ಯುದಯ ಅಸಾಧ್ಯ. ಯಾವ ವಿಷಯದಲ್ಲಿ ಹಿಂದುಳಿದಿರುವಿರಿ ಎಂದು ಕಂಡುಕೊಂಡು ತಜ್ಞರಿಂದ ಅದಕ್ಕೆ ಪರಿಹಾರ ಕಂಡುಕೊಳ್ಳಿರಿ.

ಮಕರ: ಹಿರಿಯರಿಂದ ಪಡೆದ ಸಲಹೆಯು ಜೀವನಕ್ಕೆ ಹೊಸ ಬುನಾದಿಯಾಗಲಿದೆ. ತೆಂಗು , ಅಡಿಕೆ ಬೆಳೆಗಾರರಿಗೆ ಅಧಿಕ ಲಾಭ ವಿರುವುದು. ಕೆಲವರಿಗೆ ನಿಮ್ಮ ಮೇಲಿದ್ದ ಸಂಶಯದ ಮನೋಭಾವ ನಿವಾರಣೆಯಾಗುವುದು.

ಕುಂಭ: ತಾಯಿಗೆ ನುರಿತ ವೈದ್ಯರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕ ಮತ್ತು ಸಹಾಯ ಹಸ್ತ ಸಿಗುವುದು. ಇಂದಿನ ಖರ್ಚು ವೆಚ್ಚಗಳು ಹೆಚ್ಚೆ ಇರುವುದರಿಂದ ಪೂರ್ವ ತಯಾರಿ ಮಾಡಿಕೊಳ್ಳುವುದು ಉತ್ತಮ.

ಮೀನ: ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ. ಇಂದು ಕೋರ್ಟು ಕಚೇರಿಯ ಕೆಲಸ ಕೇವಲ ಅಲೆದಾಟವನ್ನು ಮಾಡಿಸುವುದು. ಹೂಡಿಕೆಯ ಬಗ್ಗೆ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ.

ಪದಬಂಧ 5244

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಿರಿಯ ಸಹೋದರಿ (2)
3.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
5.ಹಿಂದಿನಿಂದ ಉಳಿದು ಬಂದ ಪ್ರಾಣಿ,ಸಸ್ಯಗಳ ಅವಶೇಷ (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಇದು ಮಣ್ಣಿಗೆ ಸಂಬಂಧಿಸಿದ್ದು (3)
8.ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9.ರಾಜಿಗೊಂದು ಪರ್ಯಾಯ ಪದ (3)
10.ಕಡಿದಾದ ಕೊರಕಲು (3)
13.ಉದಾಹರಣೆಯಿಂದ ಕೂಡಿದುದು (5)
14.ಜನನಿ ನುಡಿದಿರುವ ಸತ್ಯ (2)
15.ಭೂಲೋಕದ ಅಮೃತ (2)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ರಾಗದೊಡನಿರುವ ಪ್ರೀತಿ (4)
2.ತನ್ನ ರಕ್ಷಣೆಗೆ ಅಥವಾ ಇತರರನ್ನು ಹೊಡೆಯಲು ಬಳಸುವ ಸಾಧನ (3)
4.ಸೋಲು ಹೀಗೆ ಬಂದಿದೆ (4)
5.ಅಂತ್ಯ ಅಥವಾ ಕೊನೆ (5)
7.ಈತ ಅಡುಗೆಯಲ್ಲಿ ನುರಿತವನು (5)
9.ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
11.ಜಲಪಾತವಿಲ್ಲಿ ಕಾಣುತ್ತಿದೆ (4)
12.ಅಪಹಾಸ್ಯ ಮಾಡುವವನು (3)



5243ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದುಕು 3.ಆಲಸಿಗ
5.ಬರಡು 6.ಹಳವಂಡ
7.ವರಮಾನತೆರಿಗೆ 10.ಅವಧಾನಿ
11.ವಸತಿ 14.ಗರ್ಭಕೋಶ
15.ಕುಲುಮೆ

ಮೇಲಿಂದ ಕೆಳಕ್ಕೆ:
1.ಬಡ್ಡಿ 2.ಕುವರ
4.ಗರುಡ 5.ಬಡವ
6.ಹಣತೆ 8.ಮಾನಿನಿ
9.ಗೆಳತಿ 10.ಅಪಾಂಗ
12.ಸರಕು 13.ವಿಮೆ

ಸುಡೊಕು 5630

2			1				8	
						5		9
8		3			9		1	
3		9	5		1			
	6						4	
5		1	6		8			2
	7			3	5	2		4
4		5					6	
	8		4	6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5629 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಷೇರುಪೇಟೆ ವಹಿವಾಟು 175



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,466
ಇಂದಿನ ಅಂತ್ಯ	17,393
▼	73
ದಿನದ ಕನಿಷ್ಠ	17,299

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

ಶೇಂಗಾ (ರಿಫೈಂಡ್)	₹1690 (1690)
ಸೋಯಾ (ರಿಫೈಂಡ್)	₹1120 (1135)
ಸೂರ್ಯಕಾಂತಿ (ರಿಫೈಂಡ್)	₹1150 (1165)
ಪಾಮೋಲಿನ್	₹963 (968)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್‌.ಪೇಟೆ	₹8076-8100
ಪುತ್ತೂರು	₹9000-10000
ತುರುವೇಕೆರೆ	₹9700-9700

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139.50
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹325-618
ದ್ವಿತಳಿ (ಬಿ.ವಿ) ₹200-692

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ



ಶ್ರೀ ಬಿ.ಸಿ. ಪುಂಗಪ್ಪನವರು
28.2.1984
ಸ್ಥಾಪಕರು:
ಶ್ರೀ ವೆಂಕಟೇಶ್ವರ ಮೋಟಾರ್ ಸರ್ವೀಸ್
ಶ್ರೀ ಬಿ.ಜಿ. ವೆಂಕಟೇಶ್ ಮತ್ತು ಕುಟುಂಬ ವರ್ಗದವರು

ನಿಧನ



ನಾರಾಯಣರೆಡ್ಡಿ
ಇವರು ದಿನಾಂಕ: 27-2-2023 ರಂದು ಸಂಜೆ 4-15ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತಿಮ ದರ್ಶನವನ್ನು ಮೃತರ ಸ್ವಗೃಹ ಆನೇಕಲ್‌ನಲ್ಲಿ ನಾಳೆ ಮಧ್ಯಾಹ್ನ 12-30 ರವರೆಗೆ ಪಡೆಯಬಹುದು.
ದುಃಖತಪ್ತರು :
ಎನ್. ಸೋಮಶೇಖರ್‌ರೆಡ್ಡಿ ಮತ್ತು ಕುಟುಂಬವರ್ಗದವರು
9591917653 / 9980549249

ಚಿರಸ್ಮರಣೆ

ಶ್ರೀಮತಿ ಎಂ. ಬಿ. ಸರೋಜ
07.06.1948 - 28.02.2017
ಶ್ರೀ ಎಸ್. ಸಿದ್ದರಾಮಯ್ಯ, ನಿ|| ಉಪ ನಿರ್ದೇಶಕರು (ಉದ್ಯೋಗ ವಿನಿಮಯ ಕೇಂದ್ರಗಳು), ಬೆಂಗಳೂರು ಇವರ ಧರ್ಮಪತ್ನಿ.
ನೀವು ಭೌತಿಕವಾಗಿ ನಮ್ಮನ್ನು ಅಗಲಿ ಇಂದಿಗೆ 6 ವರ್ಷಗಳಾದರೂ ನಿಮ್ಮ ಆತ್ಮ ನಮ್ಮೊಂದಿಗೇ ಇದ್ದು ಮಾರ್ಗದರ್ಶಕರಾಗಿರುವುದನ್ನು ಕಾಣುತ್ತಿದ್ದೇವೆ.ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಿರುವ
ಪ್ರೀತಿಯ ಪತಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
Mob: 9845696159

25ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಕೆ. ರಾಮಪ್ಪ
ವಿಶೇಷ ಅಧಿಕಾರಿ, ದಿ. ಶ್ರೀ. ರಾಮಕೃಷ್ಣ ಹೆಗಡೆ (ಮಾಜಿ ಮುಖ್ಯಮಂತ್ರಿಗಳು)
ಜ್ಯೋತಿಯಂತೆ ಬೆಳಗಿದಿರಿ, ಚಂದನದಂತೆ ಸವೆದು ಸೇವೆ ಸಲ್ಲಿಸಿದಿರಿ
ಮಹಾ ವೃಕ್ಷದಂತೆ ಬೆಳೆದು ವಾತ್ಸಲ್ಯ, ಮಮತೆ, ವಿಶ್ವಾಸದ ನೆರಳು ನೀಡಿದಿರಿ,
ಮಹಾಸಾಗರದಂತೆ ನಿಮ್ಮ ಪ್ರೀತಿಯ ನೆನಪುಗಳು, ನಿಮ್ಮ ಹೆಜ್ಜೆ ಗುರುತುಗಳೇ ನಮ್ಮ ಬಾಳ ದಾರಿಯಲ್ಲಿನ ಸಾಲು ದೀಪಗಳು.
ಸದಾ ನಿಮ್ಮ ಪುಣ್ಯ ಸ್ಮರಣೆಯಲ್ಲಿ...
ಮಂಜುನಾಥ್, ಚಂದ್ರಿಕಾ, ರೇಣುಕಾ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
Mob: 7892207439

NAME CHANGE ANNOUNCEMENT
Log on to : dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹೆಚ್ಚಿನ ಪಿಂಚಣಿ: ಗಡುವು ವಿಸ್ತರಿಸಿದ ಇಪಿಎಫ್‌ಒ

ಒಂದನೇ ಪುಟದಿಂದ

ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಸುಪ್ರೀಂ ಕೋರ್ಟ್ ನಾಲ್ಕು ತಿಂಗಳ ಕಾಲಾವಕಾಶ ನೀಡಿತ್ತು. ನಾಲ್ಕು ತಿಂಗಳ ಅವಧಿಯು ಮಾರ್ಚ್ 3ರ ಸುಮಾರಿಗೆ ಕೊನೆಗೊಳ್ಳಬೇಕಿತ್ತು.

ಆದರೆ, ಹೆಚ್ಚಿನ ಪಿಂಚಣಿಯ ಸೌಲಭ್ಯ ಆಯ್ಕೆ ಮಾಡಿಕೊಳ್ಳಲು ಅನುಸರಿಸಬೇಕಿರುವ ಪ್ರಕ್ರಿಯೆಯನ್ನು ಇಪಿಎಫ್‌ಒ ಕಳೆದ ವಾರವಷ್ಟೇ ಅಂತಿಮಗೊಳಿಸಿದೆ.

‘2014ರ ಸೆಪ್ಟೆಂಬರ್ 1ಕ್ಕಿಂತ ಮೊದಲು ಸೇವೆಯಲ್ಲಿ ಇದ್ದವರು, ಆ ದಿನಾಂಕದ ನಂತರವೂ ಸೇವೆಯಲ್ಲಿ ಮುಂದುವರಿದವರು, ಆದರೆ ಹೆಚ್ಚಿನ ಪಿಂಚಣಿಗೆ ಜಂಟಿ ಅರ್ಜಿ ಸಲ್ಲಿಸಲು ಆಗದಿದ್ದವರು ಅದನ್ನು ಮೇ 3ರೊಳಗೆ ಸಲ್ಲಿಸಬಹುದು’ ಎಂದು ಇಪಿಎಫ್‌ಒ ಹೇಳಿದೆ.

ಜಂಟಿ ಅರ್ಜಿ ಸಲ್ಲಿಸಲು ಆನ್‌ಲೈನ್ ಸೌಲಭ್ಯವು ಶೀಘ್ರವೇ ಲಭ್ಯವಾಗಲಿದೆ ಎಂದು ಇಪಿಎಫ್‌ಒ ತಿಳಿಸಿದೆ.

‘ಏರ್ ಇಂಡಿಯಾ ಹೆಸರಿನಲ್ಲೇ ಸೇವೆ’

ನವದೆಹಲಿ (ಪಿಟಿಐ): ವಿಸ್ತಾರಾ ವಿಮಾನಯಾನ ಕಂಪನಿಯು ವಿಲೀನಗೊಂಡ ಬಳಿಕ ಏರ್ ಇಂಡಿಯಾ ಹೆಸರಿನಲ್ಲಿಯೇ ಪೂರ್ಣ ಪ್ರಮಾಣದ ವಿಮಾನಯಾನ ಸೇವೆಯು ಮುಂದುವರಿಯಲಿದೆ ಎಂದು ಏರ್ ಇಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ಅವರು ಸೋಮವಾರ ತಿಳಿಸಿದ್ದಾರೆ.

ಹೀಗಿದ್ದರೂ, ವಿಸ್ತಾರಾದಲ್ಲಿ ಇರುವ ಕೆಲವು ಪ್ರಮುಖ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಸಮೂಹದಲ್ಲಿ ಒಂದು ಪೂರ್ಣ ಪ್ರಮಾಣದ ಸೇವೆಗಳನ್ನು ನೀಡುವ ವಿಮಾನ ಮತ್ತು ಅಗ್ಗದ ದರದಲ್ಲಿ ಸೇವೆಗಳನ್ನು ಒದಗಿಸುವ ಇನ್ನೊಂದು ವಿಮಾನಯಾನ ಕಂಪನಿ ಹೊಂದುವ ಉದ್ದೇಶ ಇದೆ. ಏರ್ ಇಂಡಿಯಾ ಮತ್ತು ವಿಸ್ತಾರಾ ವಿಲೀನದ ಬಳಿಕ ಪೂರ್ಣ ಪ್ರಮಾಣದ ಸೇವೆ ನೀಡುವ ವಿಮಾನ ಕಂಪನಿಯು ರಚನೆ ಆಗಲಿದೆ ಎಂದು ಅವರು ವಿವರಿಸಿದ್ದಾರೆ.

ದೇಶಿ ಮಾರುಕಟ್ಟೆಯಲ್ಲಿ ವಿಸ್ತಾರಾ ಹೆಚ್ಚು ಗುರುತಿಸಿಕೊಂಡಿದೆ. ಆದರೆ, ಜಾಗತಿಕ ಮಾರುಕಟ್ಟೆಯನ್ನು ಗಮನಿಸುವುದಾದರೆ, ಅಲ್ಲಿ ಏರ್ ಇಂಡಿಯಾ ಹೆಚ್ಚು ಜನಪ್ರಿಯವಾಗಿದ್ದು, 90 ವರ್ಷಗಳ ಇತಿಹಾಸ ಹೊಂದಿದೆ ಎಂದು ವಿಲ್ಸನ್ ಹೇಳಿದ್ದಾರೆ.

ವಿಸ್ತಾರಾವನ್ನು ಏರ್ ಇಂಡಿಯಾದೊಂದಿಗೆ ವಿಲೀನ ಮಾಡುವ ಕುರಿತು ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ಒಪ್ಪಿಗೆ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಇಪಿಎಸ್ ಅಡಿ ಹೆಚ್ಚಿನ ಪಿಂಚಣಿ ಯೋಜನೆ: ಅಧಿಕಾರಿಗಳಿಂದ ಮಾಹಿತಿ

ಪಿಂಚಣಿ: ಪರಿಶೀಲನೆ ನಂತರ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚಿನ ಪಿಂಚಣಿ ಬಯಸಿ ಉದ್ಯೋಗಿ–ಉದ್ಯೋಗದಾತರು ನೀಡುವ ಅರ್ಜಿಯನ್ನು ಪರಿಶೀಲಿಸಿದ ನಂತರ ಹಣಕಾಸಿನ ವರ್ಗಾವಣೆ ಪ್ರಕ್ರಿಯೆ ಆರಂಭವಾಗುತ್ತದೆ. ಈ ಬಗ್ಗೆ ಉದ್ಯೋಗಿಗೆ ಮಾಹಿತಿ ನೀಡಿಯೇ ಮುಂದುವರಿಯಲಾಗುತ್ತದೆ ಎಂದು ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ರಾಜರಾಜೇಶ್ವರಿ ನಗರ ಪ್ರಾದೇಶಿಕ ಕಚೇರಿಯ ಅಧಿಕಾರಿಗಳು ಹೇಳಿದರು.

ಕುಂಬಳಗೋಡಿನಲ್ಲಿರುವ, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮುದ್ರಣ ಘಟಕದಲ್ಲಿ ಸೋಮವಾರ ಆಯೋಜಿಸಿದ್ದ ‘ನಿಧಿ ಆಪ್ಕೆ ನಿಕಟ್-2.0’ ಶಿಬಿರದಲ್ಲಿ ಅವರು ಈ ಮಾಹಿತಿ ನೀಡಿದರು.

‘ಹೆಚ್ಚಿನ ಪಿಂಚಣಿ ಆಯ್ಕೆಯನ್ನು ಬಯಸುವ ಉದ್ಯೋಗಿ, ತನ್ನ ಉದ್ಯೋಗದಾತರೊಂದಿಗೆ ಜಂಟಿಯಾಗಿ ಪ್ರಮಾಣಪತ್ರ ನೀಡಬೇಕು. ಆಯಾ ಉದ್ಯೋಗಿಯ ಸೇವಾವಧಿ, ಪಿಂಚಣಿ ಬಾಬ್ತಿನಲ್ಲಿರುವ ಹಣವನ್ನು ಲೆಕ್ಕ ಮಾಡಿ, ಎಷ್ಟು ಹಣವನ್ನು ಹೆಚ್ಚುವರಿಯಾಗಿ ಕಟ್ಟಬೇಕು ಎಂಬ ಮಾಹಿತಿಯನ್ನು ಇ–ಮೇಲ್, ಪೋಸ್ಟ್ ಮೂಲಕ ನೀಡಲಾಗುತ್ತದೆ. ದೂರವಾಣಿ ಕರೆ ಹಾಗೂ ಎಸ್‌ಎಂಎಸ್ ಮೂಲಕವೂ ಮಾಹಿತಿ ರವಾನಿಸಲಾಗುತ್ತದೆ’ ಎಂದು ರಾಜರಾಜೇಶ್ವರಿ ನಗರ ಪ್ರಾದೇಶಿಕ ಕಚೇರಿ ಲೆಕ್ಕಾಧಿಕಾರಿ ಸಣ್ಣಬೋರಮ್ಮ ತಿಳಿಸಿದರು.

‘ಹೆಚ್ಚಿನ ಪಿಂಚಣಿ ಪಡೆಯಲು ಉದ್ಯೋಗಿ–ಉದ್ಯೋಗದಾತರು ನೀಡುವ ಪ್ರಮಾಣಪತ್ರದಲ್ಲಿ ಪಿಎಫ್‌ನಿಂದ ಹಣ ವರ್ಗಾವಣೆ ಮಾಡಿಕೊಳ್ಳಬಹುದು ಎಂದು ಬರೆಯಲಾಗಿದೆ. ಆದರೆ, ನಮಗೆ ಗೊತ್ತಿಲ್ಲದೆ ಹಣ ವರ್ಗಾವಣೆ ಮಾಡಿಕೊಳ್ಳುವುದು ಸರಿಯಲ್ಲ ಅಲ್ಲವೇ? ಅಲ್ಲದೆ, ಪಿಎಫ್‌ನಿಂದ ಪಿಂಚಣಿ ಖಾತೆಗೆ ಹೋಗುವ ಹಣಕ್ಕೆ ಬಡ್ಡಿ ದೊರೆಯುವುದೇ’ ಎಂದು ರಾಮಕೃಷ್ಣ ಪ್ರಶ್ನಿಸಿದರು.

‘ಹೆಚ್ಚಿನ ಪಿಂಚಣಿಗಾಗಿ ಭವಿಷ್ಯ ನಿಧಿಯಿಂದ (ಪಿಎಫ್) ವರ್ಗಾವಣೆಯಾಗುವ ಹಣಕ್ಕೆ ಬಡ್ಡಿ ನೀಡಲಾಗುತ್ತಿದೆಯೇ ಅಥವಾ ಖಾತೆಯಲ್ಲಿ ಹಣ ಇಲ್ಲದಿದ್ದರೆ ಹೇಗೆ ಪಾವತಿಸಿಕೊಳ್ಳಬೇಕು ಎಂಬ ಬಗ್ಗೆ ನಮ್ಮ ಕೇಂದ್ರ ಕಚೇರಿಯಿಂದ ಮಾಹಿತಿ ಬಂದಿಲ್ಲ. ವರ್ಗಾವಣೆ ಬಗ್ಗೆಯೂ ಈ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ (ಎಸ್‌ಒಪಿ) ಬಂದಮೇಲೆ ಎಲ್ಲ ಪ್ರಕ್ರಿಯೆಗಳನ್ನೂ ವಿವರಿಸಲಾಗುತ್ತದೆ’ ಎಂದು ಸಣ್ಣಬೋರಮ್ಮ ಉತ್ತರ ನೀಡಿದರು.

ಬೆಂಗಳೂರಿನ ಕುಂಬಳಗೋಡಿನಲ್ಲಿರುವ ದಿ ಪ್ರಿಂಟರ್ಸ್ (ಮೈಸೂರ್) ಪ್ರೈವೇಟ್ ಲಿಮಿಟೆಡ್‌ನ ಮುದ್ರಣ ಘಟಕದಲ್ಲಿ ಸೋಮವಾರ ಆಯೋಜಿಸಿದ್ದ ಇಪಿಎಫ್ ಜಾಗೃತಿ ಶಿಬಿರ ‘ನಿಧಿ ಆಪ್ಕೆ ನಿಕಟ್’ನಲ್ಲಿ ಉದ್ಯೋಗಿಗಳಿಗೆ ಲೆಕ್ಕಾಧಿಕಾರಿ ಸಣ್ಣಬೋರಮ್ಮ ಮಾಹಿತಿ ನೀಡಿದರು. ಹಿರಿಯ ಸಾಮಾಜಿಕ ಭದ್ರತಾ ಸಹಾಯಕ ರವಿಚಂದ್ರ ಶೇಟ್ ಇದ್ದರು –ಪ್ರಜಾವಾಣಿ ಚಿತ್ರ

‘1994ರವರೆಗೆ ಒಂದು ಸ್ಲ್ಯಾಬ್, 2014ರವರೆಗೆ ಮತ್ತೊಂದು ಸ್ಲ್ಯಾಬ್ ಹಾಗೂ 2014ರ ನಂತರ ಹೆಚ್ಚಿನ ಪಿಂಚಣಿ ಯೋಜನೆಯ ಸ್ಲ್ಯಾಬ್ ಅನ್ವಯವಾಗುವಂತೆ ಲೆಕ್ಕಾಚಾರದ ಪ್ರಕ್ರಿಯೆ ಕೈಗೊಳ್ಳಲಾಗುತ್ತದೆ. 2014ರ ನಂತರದಿಂದ ಹೆಚ್ಚಿನ ಪಿಂಚಣಿ ಯೋಜನೆಗೆ ಹೆಚ್ಚುವರಿ ಹಣ ಪಾವತಿಸಬೇಕಾಗುತ್ತದೆ. ನಿವೃತ್ತರಾದವರು ಹೇಗೆ ಇದನ್ನು ಪಾವತಿಸಬೇಕು ಎಂಬುದನ್ನೂ ಮುಂದಿನ ದಿನಗಳಲ್ಲಿ ವಿವರಿಸಲಾಗುತ್ತದೆ. ಹೆಚ್ಚಿನ ವೈಯಕ್ತಿಕ ಮಾಹಿತಿ ಬೇಕಿದ್ದವರು ನೌಕರರ ಭವಿಷ್ಯ ನಿಧಿ ಸಂಸ್ಥೆಯ ಯಾವುದೇ ಕಚೇರಿಯನ್ನು ಸಂಪರ್ಕಿಸಬಹುದು. ಅಲ್ಲಿ ‘ಹೆಲ್ಪ್ ಡೆಸ್ಕ್’ ಸ್ಥಾಪಿಸಲಾಗಿದೆ’ ಎಂದು ಹೇಳಿದರು.

ಐಪಿಒ: ಹಿಂದೆ ಸರಿದ ಫ್ಯಾಬ್ ಇಂಡಿಯಾ

ಬೆಂಗಳೂರು (ರಾಯಿಟರ್ಸ್): ಫ್ಯಾಬ್ ಇಂಡಿಯಾ ಕಂಪನಿಯು ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ಮೂಲಕ ಷೇರುಗಳನ್ನು ಮಾರಾಟ ಮಾಡುವ ನಿರ್ಧಾರದಿಂದ ಹಿಂದೆ ಸರಿದಿದೆ.

ಬಡ್ಡಿದರ ಹೆಚ್ಚಳವು ಷೇರುಮಾರುಕಟ್ಟೆಯಲ್ಲಿ ಒತ್ತಡ ಸೃಷ್ಟಿಸಿರುವುದರಿಂದ ₹ 4 ಸಾವಿರ ಕೋಟಿ ಮೊತ್ತದ ಐಪಿಒ ನಿರ್ಧಾರವನ್ನು ಕೈಬಿಟ್ಟಿರುವುದಾಗಿ ಹೇಳಿದೆ. ಕಂಪನಿಯು ಸಾಂಪ್ರದಾಯಿಕ ಭಾರತೀಯ ಉಡುಗೆಗಳಿಗೆ ಜನಪ್ರಿಯವಾಗಿದೆ. ಭವಿಷ್ಯದಲ್ಲಿ ಐಪಿಒ ಪ್ರಕ್ರಿಯೆ ಕೈಗೊಳ್ಳುವ ಕುರಿತು ಮುಂದೆ ನಿರ್ಧರಿಸುವುದಾಗಿ ಹೇಳಿದೆ.

ಮಾರುಕಟ್ಟೆ ಸ್ಥಿತಿಯು ದುರ್ಬಲವಾಗಿದೆ. ಬಹುತೇಕ ಕಂಪನಿಗಳು ಈಗಿರುವುದಕ್ಕಿಂತಲೂ ಹೆಚ್ಚಿನ ಮೌಲ್ಯ ಇರುವ ಸಂದರ್ಭದಲ್ಲಿ ಬಂಡವಾಳ ಸಂಗ್ರಹಿಸಲು ಆಲೋಚಿಸುತ್ತಿವೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಈಕ್ವಿಟಿ ಮುಖ್ಯಸ್ಥ ಹೇಮಾಂಗ್ ಜೈನ್ ಹೇಳಿದ್ದಾರೆ.

ಯುಲು, ಬಜಾಜ್ ಆಟೊದಿಂದ ಹೊಸ ಇ.ವಿ. ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಲು ಇಂಡಿಯಾ ಮತ್ತು ಬಜಾಜ್ ಆಟೊ ಕಂಪನಿಗಳು ಜೊತೆಗೂಡಿ ಮಿರಾಕಲ್ ಜಿಆರ್ ಮತ್ತು ಡೆಕ್ಸ್ ಜಿಆರ್ ಎನ್ನುವ ಎರಡು ಹೊಸ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳನ್ನು ಬಿಡುಗಡೆ ಮಾಡಿವೆ.

‘ಬೆಂಗಳೂರಿನಲ್ಲಿ ಮುಂದಿನ ವಾರದಿಂದ ಈ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಬಾಡಿಗೆಗೆ ಲಭ್ಯವಿರಲಿವೆ. ನಗರ ಸಂಚಾರ ವ್ಯವಸ್ಥೆಯಲ್ಲಿ ಬಜಾಜ್ ಆಟೊ ಜೊತೆಗೂಡಿ ನಾವು ಹೊಸ ಮೈಲಿಗಲ್ಲು ಸ್ಥಾಪಿಸುತ್ತಿದ್ದೇವೆ’ ಎಂದು ಯುಲು ಸಹಸ್ಥಾಪಕ ಅಮಿತ್ ಗುಪ್ತಾ ಹೇಳಿದರು.

ಈ ಸ್ಕೂಟರ್‌ಗಳು ಯುಲು ಕಂಪನಿಯ ಎ.ಐ ಆಧಾರಿತ ತಂತ್ರಜ್ಞಾನ ಬಳಸಿಕೊಂಡಿವೆ. ಭಾರತ ಮತ್ತು ಜಾಗತಿಕ ಮಾರುಕಟ್ಟೆಗಾಗಿ ಇವುಗಳನ್ನು ತಯಾರಿಸಲಾಗಿದ್ದು, ಬಜಾಜ್ ಆಟೊ ಕಂಪನಿಯ ಚೇತಕ್ ಟೆಕ್ನಾಲಜಿ ಲಿಮಿಟೆಡ್ ಇವುಗಳನ್ನು ತಯಾರಿಸಲಿದೆ.

ವಿದ್ಯುತ್ ಚಾಲಿತ ವಾಹನಗಳಿಗೆ ಪರಿವರ್ತನೆ ಕಾಣುವುದು ಬಜಾಜ್ ಕಂಪನಿಯ ಪ್ರಮುಖ ಆದ್ಯತೆ. ಇದಕ್ಕೆ ಯುಲು ಕಂಪನಿಯು ಒಳ್ಳೆಯ ಪಾಲುದಾರ. ಇ.ವಿ. ತಂತ್ರಜ್ಞಾನದಲ್ಲಿ ಯುಲು ಪರಿಣತಿ ಹೊಂದಿದೆ. ಬಜಾಜ್ ಆಟೊ ಕಂಪನಿಯ ಬಳಿ ಮಾರುಕಟ್ಟೆ ಅನುಭವ, ವಿಶ್ವದರ್ಜೆಯ ಸಂಶೋಧನೆ ಮತ್ತು ಅಭಿವೃದ್ಧಿ, ತಯಾರಿಕಾ ಸಾಮರ್ಥ್ಯ ಇದೆ. ಇವೆಲ್ಲ ಸೇರಿ ಭಾರತದ ಭವಿಷ್ಯದ ಸಾರಿಗೆಯನ್ನು ರೂಪಿಸಲಿವೆ ಎಂದು ಬಜಾಜ್ ಆಟೊ ಲಿಮಿಟೆಡ್‌ನ ಮುಖ್ಯ ವಹಿವಾಟು ಅಭಿವೃದ್ಧಿ ಅಧಿಕಾರಿ ಎಸ್. ರವಿಕುಮಾರ್ ಹೇಳಿದರು.

ಮಿರಾಕಲ್ ಜಿಆರ್

‘1 ಕೋಟಿ ಗ್ರಾಹಕರು’

ನವದೆಹಲಿ (ಪಿಟಿಐ): ಏರ್‌ಟೆಲ್ ಕಂಪನಿಯ 5ಜಿ ಸೇವೆಗಳ ಗ್ರಾಹಕರ ಒಟ್ಟು ಸಂಖ್ಯೆಯು 1 ಕೋಟಿಗಿಂತ ಹೆಚ್ಚಾಗಿದೆ. 2024ರ ಮಾರ್ಚ್‌ಗೆ ಮೊದಲು ದೇಶದ ಪ್ರತಿ ಪಟ್ಟಣ ಹಾಗೂ ಪ್ರಮುಖ ಹಳ್ಳಿಗಳಲ್ಲಿ 5ಜಿ ಸೇವೆಗಳನ್ನು ಆರಂಭಿಸಲಾಗುತ್ತದೆ ಎಂದು ಕಂಪನಿ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

27–02–2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	1037 (1050)
ಪಾಮ್ ವಾರದ ಡೆಲಿವರಿ	965 (966)
ಸೂರ್ಯಕಾಂತಿ ಎಣ್ಣೆ ಕಚ್ಚಾ	1020 (1040)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 55,500 (55,555)
ಬೆಳ್ಳಿ ಕೆ.ಜಿ 63,450 (63,650)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800 - 900
ಹೆರಕಿದ್ದು	1250-1300
ಹಸಿರು ಸಾಧಾರಣ	900-1,000
ಹಸಿರು ಉತ್ತಮ	1300-1400
ಹಸಿರು ಅತಿ ಉತ್ತಮ	1500-1550
ಕಾಳು ಮೆಣಸು	480
ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಕುಮಟ	
ಚಿಪ್ಪು	27509-31789
ಕೋಕ	18019-28999
ಹಳೆಚಾಲಿ	36509-38319
ಹೊಸಚಾಲಿ	34109-36409
ಪುತ್ತೂರು	
ಹೊಸತು	32000-38000
ಸಾಗರ	
ಬಿಳಿಗೋಟು	22989-30299
ಚಾಲಿ	31567-36900
ಕೋಕ	10389-29099
ಕೆಂಪುಗೋಟು	26119-37509
ರಾಶಿ	33899-46549
ಸಿಪ್ಪೆಗೋಟು	5790-19270
ಶಿವಮೊಗ್ಗ	
ಬೆಟ್ಟೆ	42110-51899
ಗೊರಬಲು	20299-33299
ರಾಶಿ	37799-46099
ಸರಕು	54669-82169
ಸಿದ್ದಾಪುರ	
ಬಿಳಿಗೋಟು	26699-32899
ಚಾಲಿ	35999-38544
ಕೋಕ	27099-32999
ಹೊಸಚಾಲಿ	31619-36699
ಕೆಂಪುಗೋಟು	31090-33000
ರಾಶಿ	42489-45799
ತಟ್ಟಿಬೆಟ್ಟೆ	38009-42129
ಶಿರಸಿ	
ಬೆಟ್ಟೆ	36999-43489
ಬಿಳಿಗೋಟು	22409-33053
ಚಾಲಿ	32099-40577
ಕೆಂಪುಗೋಟು	21199-34399
ರಾಶಿ	30999-44899
ಯಲ್ಲಾಪುರ	
ಬಿಳಿಗೋಟು	24199-33899
ಹಳೆಚಾಲಿ	36361-40601
ಹೊಸಚಾಲಿ	34499-36499
ಕೋಕ	18099-31612
ಕೆಂಪುಗೋಟು	28699-34399
ರಾಶಿ	42199-50109
ತಟ್ಟಿಬೆಟ್ಟೆ	38399-44277

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	16000	15850	193.35 ಸೆಂಟ್ಸ್
ಎಸಿ	7900	7700	7000	
ಆರ್‌ಪಿ	11200	11300	10900	ಲಂಡನ್
ಆರ್‌ಸಿ	5430	208 on OT	5225	2205 ಡಾಲರ್ಸ್

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು



ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಬಂಧನದ ಹಿಂದೆ ರಾಜಕೀಯ ಉದ್ದೇಶವಿದೆ ಅನಿಸುತ್ತದೆಯೇ?
ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಚಿನ್ನದ ದರ ಇಳಿಕೆ

ನವದೆಹಲಿ (ಪಿಟಿಐ): ಸೋಮವಾರ ಚಿನ್ನದ ದರ 10 ಗ್ರಾಂಗೆ ₹185ರಷ್ಟು ಇಳಿಕೆ ಕಂಡು ₹55,520ಕ್ಕೆ ತಲುಪಿತು. ಜಾಗತಿಕ ಮಾರುಕಟ್ಟೆಯಲ್ಲಿನ ದರ ಇಳಿಕೆ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹798ರಷ್ಟು ಕಡಿಮೆ ಆಗಿ ₹63,227ರಂತೆ ಮಾರಾಟವಾಯಿತು.

7 ದಿನದಲ್ಲಿ ₹ 10.42 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ ನಡೆದ ಏಳು ದಿನಗಳ ನಕಾರಾತ್ಮಕ ವಹಿವಾಟಿನ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 10.42 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ಇದರಿಂದಾಗಿ ಸೋಮವಾರದ ಅಂತ್ಯಕ್ಕೆ ಷೇರುಪೇಟೆಯ ಒಟ್ಟು ಮೌಲ್ಯವು ₹ 257.88 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಏಳು ದಿನಗಳ ವಹಿವಾಟು ಅವಧಿಯಲ್ಲಿ ಬಿಎಸ್‌ಇ ಸೆನ್ಸೆಕ್ಸ್ 2,031 ಅಂಶ ಇಳಿಕೆ ಕಂಡಿದೆ.

ಅಭಿವೃದ್ಧಿ ಹೊಂದಿದ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಇನ್ನೂ ಹೆಚ್ಚಿನ ಬಡ್ಡಿದರ ಏರಿಕೆ, ಜಾಗತಿಕ ಷೇರುಪೇಟೆಗಳ ವಹಿವಾಟು ಇಳಿಮುಖವಾಗಿರುವುದು ಹಾಗೂ ವಿದೇಶಿ ಬಂಡವಾಳ ಹೊರಹರಿವಿನ ಕಾರಣಗಳು ದೇಶದ ಷೇರುಪೇಟೆಗಳಲ್ಲಿ ಹೂಡಿಕೆ ಚಟುವಟಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅದಾನಿ ಕಂಪನಿಗಳ ಸಂಪತ್ತು ಇಳಿಕೆ

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿ ಪ್ರಕಟವಾದ ನಂತರ ಅದಾನಿ ಸಮೂಹದ 10 ಕಂಪನಿಗಳ ಮಾರುಕಟ್ಟೆ ಮೌಲ್ಯವು ಜನವರಿ 24ರಿಂದ ಈವರೆಗೆ ಒಟ್ಟು ₹12.37 ಲಕ್ಷ ಕೋಟಿ ಕರಗಿದೆ.

ಜನವರಿ 24ರಂದು 10 ಕಂಪನಿಗಳ ಮಾರುಕಟ್ಟೆ ಮೌಲ್ಯ ₹19.19 ಲಕ್ಷ ಕೋಟಿಯಷ್ಟು ಇದ್ದಿದ್ದು ₹6.81 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದೆ.

ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

ಕಾಮಗಾರಿ ಹೆಸರು	ಟೆಂಡರಿಗಿಟ್ಟ ಮೊತ್ತ / ಇಎಂಡಿ
ಐಎಫ್‌ಟಿ ಸಂ.: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪಶ್ಚಿಮ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/7909/2022–23 ದಿನಾಂಕ: 27–02–2023	
ಟರ್ನ್‌ಕೀ ಗುತ್ತಿಗೆ ಆಧಾರದ ಮೇಲೆ ಕಾಮಗಾರಿ ಗುತ್ತಿಗೆಯಲ್ಲಿರುವಾಗ 2 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ 7 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ವಿಸ್ತರಿತ ಏರೇಷನ್ ತಂತ್ರಜ್ಞಾನ ಮತ್ತು ಬಿಎನ್‌ಆರ್ ರಿಮೂವಲ್ ಜೊತೆಯಲ್ಲಿ ರಾಜಕೆನಾಲ್ (ಘಟ್ಟ–1) ನಲ್ಲಿ ಪ್ರಸ್ತುತವಿರುವ 40 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿಯ ವಿನ್ಯಾಸ ಮತ್ತು ಉನ್ನತೀಕರಣ ಕಾಮಗಾರಿ. (3ನೇ ಕರೆ).	ರೂ. 4598.85 ಲಕ್ಷಗಳು / ರೂ. 54.30 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.03.2023 ರಂದು ಬೆಳಿಗ್ಗೆ 11:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 15.03.2023 ರಂದು ಮಧ್ಯಾಹ್ನ 2:00 ಗಂಟೆಗೆ ತೆರೆಯಲಾಗುವುದು.
ಸಹಿ/–
ಪ್ರಧಾನ ಮುಖ್ಯ ಅಭಿಯಂತರರು

ಮುಖ್ಯ ಅಭಿಯಂತರರ ಕಚೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಐಎಫ್‌ಟಿ ಸಂ.: ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ. ಡಿಪಿಡಬ್ಲ್ಯೂ)/1469/2022–23 ದಿನಾಂಕ: 27–02–2023	
7 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ಪಂಪಿಂಗ್ ಮೇನ್, ಐಎಸ್‌ಪಿಎಸ್ / ಟಿಎಸ್‌ಪಿಎಸ್ ನೊಂದಿಗೆ ಅರ್ಕಾವತಿ ಬಿಡಿಎ ಬಡಾವಣೆಯಡಿಯಲ್ಲಿ ಬೈರತಿಖಾನೆಯಲ್ಲಿ 13 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ವಿನ್ಯಾಸ, ತಾಂತ್ರಿಕತೆ, ನಿರ್ಮಾಣ ಮತ್ತು ಕಾರ್ಯಾಚಾಲನೆ ಮಾಡುವ ಕಾಮಗಾರಿ. (ಡಿಬಿಒ ಗುತ್ತಿಗೆ)	ರೂ. 5956 ಲಕ್ಷಗಳು / ರೂ. 70.28 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.03.2023 ರಂದು ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 17.03.2023 ರಂದು ಸಂಜೆ 4:00 ಗಂಟೆಯ ನಂತರ ತೆರೆಯಲಾಗುವುದು.
ಸಹಿ/–
ಮುಖ್ಯ ಅಭಿಯಂತರರು (ಯೋಜನೆ)

ಟೆಂಡರ್ ಪ್ರಕ್ರಿಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/4972/2022-23

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 080-47106868

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree - Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000 -56,000/- ವಸತಿಯೂಟದೊಂದಿಗೆ 9035520339/ 9036125229

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Wanted

ಉದ್ಯೋಗ ನೇಮಕಾತಿ: ಸೇವಾ ತರಬೇತಿಯೊಂದಿಗೆ ಉದ್ಯೋಗವನ್ನು ಕಲ್ಪಿಸುವ ಸಂಸ್ಥೆಯ ಹೊಸ ಬ್ಯಾಚ್‌ಗೆ ಪ್ರವೇಶ ಆರಂಭವಾಗಿದೆ.18ವರ್ಷ ಮೇಲ್ಪಟ್ಟ ಮಹಿಳಾ /ಪುರುಷರಿಗೆ ಅವಕಾಶ.ವಿದ್ಯಾರ್ಹತೆ:SSLC, PUC, Degree ಪ್ರಾರಂಭಿಕ ವೇತನ:15,000 ದಿಂದ 20,000 ಮೇಲ್ಪಟ್ಟು.ಉಚಿತ ಹಾಸ್ಟೆಲ್, ಊಟ ಮತ್ತು ಸಮವಸ್ತ್ರ ಹಾಗೂ ಆಸ್ಪತ್ರೆಗಳಲ್ಲಿ ಸೇವಾ ತರಬೇತಿಯೊಂದಿಗೆ ಉದ್ಯೋಗ. ಮತ್ತು ಈಗಾಗಲೇ ತರಬೇತಿ ಹೊಂದಿ ಅನುಭವ ಇರುವ ಹೋಂನರ್ಸ್‌ಗಳಿಗೆ ಉತ್ತಮ ಸಂಬಳವಿರುತ್ತದೆ ಹಾಗೂ ANM, GNM ಆದ ನರ್ಸ್‌ಗಳಿಗೆ, ಮಗುಬಾಣಂತಿ ಆರೈಕೆಗೆ ದಾದಿಯರು (ಪಾಸ್‌ಪೋರ್ಟ್ ಹೊಂದಿರತಕ್ಕದ್ದು) ಸಂಪರ್ಕಿಸಿರಿ. ದಾಸ್ ಸೇವಾ ಸಂಸ್ಥೆ(ರಿ),(ಸರಕಾರಿ ನೋಂದಾಯಿತ ಸಂಸ್ಥೆ.)ಬೆಂಗಳೂರು: ಕೋರಮಂಗಲ: 8431298241,ಶೇಷಾದ್ರಿಪುರಂ: 9242730143, ಮಂಗಳೂರು:9343568915, ಮೈಸೂರು: 9243306815,ಹುಬ್ಬಳ್ಳಿ: 9242302918 ಬೆಳಗಾಂ:9242096219, ಹಾಸನ: 9241324003, ಶಿವಮೊಗ್ಗ:9241127545, ದಾವಣಗೆರೆ:7760164111, ಬಳ್ಳಾರಿ: 9972851518 Toll Free Number 18003099556

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611225344

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

11/3/23ರಿಂದ ಅಸ್ಸಾಂ ಮೇಘಾಲಯ 38,500/–, 30/4/23ರಿಂದ ಪುರಿ ಜಗನ್ನಾಥ್ ಜಾರ್ಖಂಡ್ ವೈದ್ಯನಾಥ ನೇಪಾಳ ಮುಕ್ತಿನಾಥ ಜನಕಪುರ, ಶ್ರೀರಾಮ್ ಟೂರ್ ಬೆಂಗಳೂರು. 9108933383.

ಪುಷ್ಕರಲು ಪ್ರಯುಕ್ತ 26/04/2023ರಿಂದ ವಿಮಾನದಲ್ಲಿ ಮತ್ತು AC ಬಸ್ಸಿನಲ್ಲಿ 6ದಿನಗಳ ಕಾಶಿ,ವಿಂಧ್ಯಾಚಲ, ಗಯಾ,ಅಲಹಾಬಾದ್ ಸೀತಾ ಮಡು,ಬುದ್ಧಗಯಾ ಹಾಗೂ 30/06/2023ರಿಂದ 12/19 ದಿನಗಳ ಅಮರನಾಥ್ ವೈಷ್ಣೋದೇವಿ,ಕಾಶ್ಮೀರ,ಅಮೃತಸರ್ ಮಾರ್ಚ್ 31ಒಳಗೆ ಬುಕ್ ಮಾಡಿದರೆ 10% ರಿಯಾಯಿತಿ ದೊರೆಯುತ್ತದೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್: 8105657052/ 9480182865 (ಷಣ್ಮುಗಾನಂದ)

ಮಾರುತಿ ಟ್ರಾವೆಲ್ಸ್ ಆಂಧ್ರ ತೆಲಂಗಾಣ-4ದಿನ-25.03.23 ತಮಿಳುನಾಡು-ರಾಮೇಶ್ವರಂ-ಕೇರಳ-5ದಿನ-02.04.23 ಗುಜರಾತ್-ಮಹಾರಾಷ್ಟ್ರ-7ದಿನ 09.04.23 ಕಾಶಿ ಯಾತ್ರಾ-ನೇಪಾಳ-16ದಿನ-01.05.23 ವೈಷ್ಣೋದೇವಿ ಪ್ರವಾಸ 15ದಿನ -21.05.23 ಸಂಪರ್ಕಿಸಿ: 9916688569, 9019744707

★11.04.2023 9ದಿನಗಳು★ ಕಾಶಿ,ಗಯಾ ಪ್ರಯಾಗಾ ಪ್ರವಾಸ., 27.04.2023 16/13ದಿನಗಳು ಕಾಶಿ,ನೇಪಾಳ,ಮುಕ್ತಿನಾಥ, ಗಜೇಂದ್ರಮೋಕ್ಷಾ,ಜನಕಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 27/3/23. ಕಾಶಿ,ಗಯಾ, ಅಯೋಧ್ಯೆ.25/3/23 ಗುಜರಾತ್, ನಾಗನಾಥ್, ಸೋಮನಾಥ.6/4/23 ನೇಪಾಳ ಮುಕ್ತಿನಾಥ್.9591017782,9880621353

ಸುವರ್ಣ ಯಾತ್ರ. ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7ದಿನಗಳು 25/3/2023.ಪುರಿ ಜಗನ್ನಾಥ ಪ್ರವಾಸ ಶಕ್ತಿ ಪೀಠ ಇತರೆ 4 ದಿನಗಳು 25/03/23.ಗುಜರಾತ್ ಪ್ರವಾಸ ಸೋಮನಾಥ್. ನಾಗೇಶ್ವರ ಇತರೆ 8ದಿನಗಳು 06/04/2023. 9019462508, 9008381022

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಬನಾರಸ್ ಹಿಂದೂ ವಿಶ್ವವಿದ್ಯಾಲಯ, ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಂದ ಅಧ್ಯಯನ

ವಡನಗರ–ಕಾಶಿ ನಡುವೆ ಐತಿಹಾಸಿಕ ಬಂಧ?

ಪ್ರಜಾವಾಣಿ ವಾರ್ತೆ


ವಾರಾಣಸಿಯ ಗಂಗಾ ನದಿ ತೀರ

ಮುಖ್ಯಾಂಶಗಳು
- ಬಿಎಚ್‌ಯು ಅಧ್ಯಯನ ತಂಡಕ್ಕೆ ಪ್ರೊ.ಮುಲುಲ್ ರಾಜ್ ಮೆಹ್ತಾ ನೇತೃತ್ವ
- ಕೇಂದ್ರ ಸಂಸ್ಕೃತಿ ಸಚಿವಾಲಯ ಜೊತೆ ಬಿಎಚ್‌ಯು ಒಪ್ಪಂದ

ನವದೆಹಲಿ/ಲಖನೌ: ಪ್ರಧಾನಿ ನರೇಂದ್ರ ಮೋದಿ ಅವರ ತವರೂರು ಗುಜರಾತ್‌ನ ವಡನಗರ ಹಾಗೂ ಲೋಕಸಭೆಯಲ್ಲಿ ಅವರು ಪ್ರತಿನಿಧಿಸುವ ಕಾಶಿ (ವಾರಾಣಸಿ) ಕ್ಷೇತ್ರದ ನಡುವಣ ಐತಿಹಾಸಿಕ ಸಂಬಂಧದ ಕುರಿತು ಐಐಟಿ ರೂರ್ಕಿ, ಐಐಟಿ ಗಾಂಧಿನಗರ ಹಾಗೂ ಐಐಟಿ ಖರಗ್‌ಪುರ ಸೇರಿದಂತೆ ದೇಶದ ಎಂಟು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಹಾಗೂ ವಾರಾಣಸಿ ಮೂಲದ ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು) ಪುರಾತತ್ವಶಾಸ್ತ್ರಜ್ಞರು ಮತ್ತು ಇತಿಹಾಸಕಾರರ ತಂಡ ಅಧ್ಯಯನ ಕೈಗೊಳ್ಳಲಿದೆ.

ಈ ಸಂಬಂಧ ಕೇಂದ್ರ ಸಂಸ್ಕೃತಿ ಸಚಿವಾಲಯ ಮತ್ತು ಗುಜರಾತ್ ಸರ್ಕಾರದ ಸಂಸ್ಕೃತಿ ಇಲಾಖೆಯೊಂದಿಗೆ ಬಿಎಚ್‌ಯು ಒಪ್ಪಂದ ಮಾಡಿಕೊಂಡಿದೆ.

'ಗುಜರಾತ್ ಸರ್ಕಾರವು ಈ ಸಂಬಂಧ ಐಐಟಿ ರೂರ್ಕಿ, ಐಐಟಿ ಗಾಂಧಿನಗರ, ಐಐಟಿ ಖರಗ್‌ಪುರ, ಅಹಮದಾಬಾದ್ ವಿಶ್ವವಿದ್ಯಾಲಯ, ಎಸ್‌ಎಲ್ ಎಂಜಿನಿಯರಿಂಗ್ ಇನ್‌ಸ್ಟಿಟ್ಯೂಟ್ ಜೊತೆಗೂ ಒಡಂಬಡಿಕೆ ಮಾಡಿಕೊಂಡಿದೆ' ಎಂದು ಗುಜರಾತ್ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕ ಪಂಕಜ್ ಶರ್ಮಾ ಹೇಳಿದ್ದಾರೆ.

'ಈ ಶಿಕ್ಷಣ ಸಂಸ್ಥೆಗಳು ವಿವಿಧ ಆಯಾಮಗಳಲ್ಲಿ ಸಂಶೋಧನೆ ಕೈಗೊಳ್ಳಲಿವೆ. ವಡನಗರ ಹಾಗೂ ವಾರಾಣಸಿ ಐತಿಹಾಸಿಕ ಸ್ಥಳಗಳು. ಇವುಗಳ ನಡುವೆ ಸಂಬಂಧ ಇರುವ ಸಾಧ್ಯತೆ ಇದೆ' ಎಂದು ಅವರು ತಿಳಿಸಿದ್ದಾರೆ.

'ವಡನಗರದಿಂದ ಇತರ ಪ್ರಮುಖ ಕೇಂದ್ರಗಳಿಗೆ ಸಂಪರ್ಕ ಬೆಸೆಯುವ ವ್ಯಾಪಾರ ಮಾರ್ಗಗಳು, ಆ ನಗರದಲ್ಲಿದ್ದ ಸಂಕೀರ್ಣ ಜಲ ನಿರ್ವಹಣಾ ವ್ಯವಸ್ಥೆ ಸೇರಿದಂತೆ ಇತರೆ ಪ್ರಮುಖ ವಿಚಾರಗಳ ಮೇಲೆ ಮೂರು ಐಐಟಿಯ ತಂಡಗಳು ಅಧ್ಯಯನ ನಡೆಸಲಿವೆ. 6 ಮತ್ತು 7ನೇ ಶತಮಾನದಲ್ಲಿ ವಡನಗರದಲ್ಲಿ ಬೌದ್ಧ ಧರ್ಮವು ಅಭಿವೃದ್ಧಿ ಹೊಂದಿತ್ತು' ಎಂದು ಅವರು ಮಾಹಿತಿ ನೀಡಿದ್ದಾರೆ.

'ಭಾರತೀಯ ಪುರಾತತ್ವ ಇಲಾಖೆಯು 2015ರಲ್ಲಿ ಉತ್ಖನನ ಆರಂಭಿಸಿತ್ತು. ಬೌದ್ಧ ಧರ್ಮದ ಪಟ್ಟಣಗಳು, ನಾಣ್ಯಗಳು ಹಾಗೂ ಪ್ರತಿಮೆಗಳು ಉತ್ಖನನದ ಸ್ಥಳದಲ್ಲಿ ಪತ್ತೆಯಾಗಿವೆ. ಚೀನಾದ ಪ್ರವಾಸಿಗ ಹ್ಯೂಯೆನ್ ತ್ಸಾಂಗ್ ಅವರು ತಮ್ಮ ಪುಸ್ತಕದಲ್ಲಿ ವಡನಗರ ಹಾಗೂ 7ನೇ ಶತಮಾನದಲ್ಲಿದ್ದ 340ಕ್ಕೂ ಅಧಿಕ ಜಲಮೂಲಗಳ ಬಗ್ಗೆ ಉಲ್ಲೇಖಿಸಿದ್ದಾರೆ' ಎಂದಿದ್ದಾರೆ.

ಭಾರತೀಯ ತತ್ವಶಾಸ್ತ್ರ ಹಾಗೂ ಧರ್ಮದ ವಿಚಾರದಲ್ಲಿ ಅಪಾರ ಅನುಭವ ಹೊಂದಿರುವ ಪ್ರೊ.ಮುಲುಲ್ ರಾಜ್ ಮೆಹ್ತಾ ನೇತೃತ್ವದ ಬಿಎಚ್‌ಯು ತಂಡದಲ್ಲಿ ಪ್ರೊ.ಅತುಲ್‌ಕುಮಾರ್ ತ್ರಿಪಾಠಿ ಅವರನ್ನೊಳಗೊಂಡ ಪ್ರಸಿದ್ಧ ಇತಿಹಾಸಕಾರರು ಹಾಗೂ ಪುರಾತತ್ವಶಾಸ್ತ್ರಜ್ಞೆ ಪ್ರೊ.ವಿದುಲಾ ಜೈಸ್ವಾಲ್ ಅವರು ಇರಲಿದ್ದಾರೆ. ವಡನಗರಕ್ಕೆ ಪ್ರಯಾಣ ಬೆಳೆಸಲಿರುವ ಈ ತಂಡವು ಅಲ್ಲಿ ನಡೆದಿದ್ದ ಉತ್ಖನನದ ವೇಳೆ ದೊರೆತಿರುವ ಪ್ರಾಚೀನ ವಸ್ತುಗಳು ಹಾಗೂ ಇತರೆ ಪುರಾವೆಗಳನ್ನು ಪರಿಶೀಲಿಸಲಿದೆ. ವಡನಗರವು ಐದನೇ ಶತಮಾನದಲ್ಲಿ ಬೌದ್ಧ ಧರ್ಮದ ಪ್ರಮುಖ ಕೇಂದ್ರವಾಗಿತ್ತು ಎಂಬುದು ಈ ಪುರಾವೆಗಳಿಂದ ದೃಢಪಡುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ದಿಸೆಯಲ್ಲೂ ತಂಡ ಅಧ್ಯಯನ ಕೈಗೊಳ್ಳಲಿದೆ.

'1,500 ವರ್ಷಗಳ ಹಿಂದೆ ವಡನಗರವು ಬೌದ್ಧ ಧರ್ಮದ ಪ್ರಮುಖ ಕೇಂದ್ರವಾಗಿತ್ತು ಎನ್ನುವುದಕ್ಕೆ ಪುರಾತತ್ವ ಸಾಕ್ಷ್ಯಗಳಿವೆ. ಉತ್ಖನನ ಸಂದರ್ಭದಲ್ಲಿ ಸ್ತೂಪಗಳು ಪತ್ತೆಯಾಗಿವೆ. ಹಲವು ವಿದೇಶಿ ಪ್ರವಾಸಿಗರೂ ತಮ್ಮ ಪುಸ್ತಕಗಳಲ್ಲಿ ವಡನಗರದ ಕುರಿತು ಪ್ರಸ್ತಾಪಿಸಿದ್ದಾರೆ' ಎಂದು ಪ್ರೊ.ಅತುಲ್‌ಕುಮಾರ್ ತ್ರಿಪಾಠಿ ಅವರು 'ಪ್ರಜಾವಾಣಿ'ಗೆ ಸೋಮವಾರ ತಿಳಿಸಿದ್ದಾರೆ.

'ಬೌದ್ಧ ಬಿಕ್ಕುಗಳು ಸಾರನಾಥದಿಂದ (ಬುದ್ಧ ಮೊದಲ ಬಾರಿಗೆ ಧರ್ಮೋಪದೇಶ ಮಾಡಿದ ಸ್ಥಳ) ವಡನಗರಕ್ಕೆ ಪ್ರಯಾಣ ಮಾಡುತ್ತಿದ್ದರು ಎಂದೂ ಹೇಳಲಾಗುತ್ತದೆ. ಅವರು ಮಧ್ಯಪ್ರದೇಶದಲ್ಲಿರುವ ಮಥುರಾ ಅಥವಾ ಸಾಂಚಿಯ ಮೂಲಕ ವಡನಗರ ತಲುಪುತ್ತಿದ್ದರು ಎಂದೂ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸಾರನಾಥ ಮತ್ತು ವಡನಗರದ ನಡುವೆ ಸಂಬಂಧ ಇರುವಂತಿದೆ' ಎಂದು ಅವರು ತಿಳಿಸಿದ್ದಾರೆ.

> **ವಡನಗರ ಹಾಗೂ ಕಾಶಿ ನಡುವಣ ಐತಿಹಾಸಿಕ ಸಂಬಂಧ ನಿರೂಪಿಸುವ ಹಲವು ಕುರುಹುಗಳು ಇವೆ. ಅಧ್ಯಯನದಿಂದ ಇದು ಬಹಿರಂಗವಾಗಲಿದೆ.**
> **ಪ್ರೊ.ಅತುಲ್‌ಕುಮಾರ್ ತ್ರಿಪಾಠಿ,** ಬಿಎಚ್‌ಯು ಅಧ್ಯಯನ ತಂಡದ ಸದಸ್ಯ

ಮಯೂರ ಓದಿರಿ

ಪಾಕ್‌ನಲ್ಲಿ ಔಷಧಗಳ ಕೊರತೆ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಉದ್ಭವಿಸಿರುವ ಆರ್ಥಿಕ ಬಿಕ್ಕಟ್ಟು ದೇಶದ ಆರೋಗ್ಯ ವ್ಯವಸ್ಥೆ ಮೇಲೆ ತೀವ್ರ ದುಷ್ಪರಿಣಾಮ ಬೀರಿದ್ದು, ಅಗತ್ಯ ಔಷಧಿಗಳನ್ನು ಪಡೆಯಲು ರೋಗಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ವಿದೇಶಿ ವಿನಿಮಯ ಸಂಗ್ರಹ ಕೊರತೆಯು ಅಗತ್ಯ ಔಷಧ ಮತ್ತು ದೇಶೀಯ ಉತ್ಪಾದನೆಗೆ ಅಗತ್ಯವಿರುವ ವಸ್ತುಗಳ ಆಮದು ಸಾಮರ್ಥ್ಯದ ಮೇಲೆ ಪರಿಣಾಮ ಬೀರಿದೆ. ಇದರಿಂದಾಗಿ ಸ್ಥಳೀಯ ಔಷಧ ಉತ್ಪಾದಕರು ಉತ್ಪಾದನಾ ಪ್ರಮಾಣವನ್ನು ತಗ್ಗಿಸಿದ್ದಾರೆ. ಅಗತ್ಯ ಸಲಕರಣೆಗಳು ಮತ್ತು ಔಷಧ ಕೊರತೆಯ ಕಾರಣದಿಂದ ವೈದ್ಯರು ಶಸ್ತ್ರಚಿಕಿತ್ಸೆ ಮಾಡುವುದನ್ನೂ ನಿಲ್ಲಿಸಿದ್ದಾರೆ.

ದಿನನಿತ್ಯ ಬಳಸುವ ಅಗತ್ಯ ಔಷಧಗಳಾದ ಪ್ಯಾರಾಸಿಟಮೋಲ್, ಇನ್ಸುಲಿನ್, ಬ್ರುಫೆನ್, ಡಿಸ್ಪೆರಿನ್ ಮತ್ತಿತರ ಔಷಧಿಗಳ ತೀವ್ರ ಕೊರತೆ ಉಂಟಾಗಿದೆ ಎಂದು ಪಾಕಿಸ್ತಾನದ ಪಂಜಾಬ್‌ನಲ್ಲಿರುವ ಔಷಧ ವ್ಯಾಪಾರಿಗಳು ತಿಳಿಸಿದ್ದಾರೆ.

'ಹೃದಯ, ಕ್ಯಾನ್ಸರ್ ಮತ್ತು ಮೂತ್ರಪಿಂಡ ಸೇರಿ ಸೂಕ್ಷ್ಮ ಅಂಗಾಗಗಳ ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ಅರಿವಳಿಕೆ ಔಷಧವೂ ಇನ್ನು ಎರಡು ವಾರಕ್ಕಾಗುವಷ್ಟು ಮಾತ್ರ ಉಳಿದಿದೆ. ಇದುಆಸ್ಪತ್ರೆಗಳಲ್ಲಿ ಉದ್ಯೋಗ ಕಡಿತಕ್ಕೂ ಕಾರಣವಾಗಿದೆ' ಎಂದು ವರದಿಯಾಗಿದೆ.


ಟರ್ಕಿಯ ಮಲಾತ್ಯ ಪ್ರಾಂತ್ಯದಲ್ಲಿ ಸೋಮವಾರ ಸಂಭವಿಸಿದ ಭೂಕಂಪದಿಂದ ಕುಸಿದ ಕಟ್ಟಡಗಳ ಅವಶೇಷಗಳ ನಡುವೆ ರಕ್ಷಣಾ ಕಾರ್ಯಕರ್ತರು ರಕ್ಷಣಾ ಕಾರ್ಯಾಚರಣೆ ನಡೆಸಿದರು —ಎಪಿಎಫ್ ಚಿತ್ರ

ಟರ್ಕಿಯಲ್ಲಿ ಮತ್ತೆ ಭೂಕಂಪ

ಅಂಕಾರ (ಎಪಿ): ಟರ್ಕಿಯಲ್ಲಿ ಸೋಮವಾರ ಮತ್ತೆ ಭೂಕಂಪ ಸಂಭವಿಸಿದ್ದು, ಭೂಕಂಪದ ತೀವ್ರತೆ ರಿಕ್ಟರ್ ಮಾಪನದಲ್ಲಿ 5.6 ರಷ್ಟಿದೆ. ದುರಂತದಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು, 69 ಜನರು ಗಾಯಗೊಂಡಿದ್ದಾರೆ ಎಂದು ಅಲ್ಲಿಯ ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ.

12ಕ್ಕೂ ಹೆಚ್ಚು ಕಟ್ಟಡಗಳು ಕುಸಿದಿವೆ. ಭೂಕಂಪನದ ಕೇಂದ್ರ ಬಿಂದು ಮಲಾತ್ಯ ಪ್ರಾಂತ್ಯದ ಯೆಸಿಲಯುರ್ತ್ ನಗರದಲ್ಲಿ ಪತ್ತೆಯಾಗಿದೆ.

ಕುಸಿದಿದ್ದ ನಾಲ್ಕು ಅಂತಸ್ತಿನ ಕಟ್ಟಡದಿಂದ ತಮಗೆ ಸೇರಿದ್ದ ವಸ್ತುಗಳನ್ನು ತೆಗೆದುಕೊಂಡು ಬರಲು ಹೋಗಿದ್ದ ತಂದೆ, ಮಗಳು ಅವಶೇಷಗಳ ಅಡಿ ಸಿಲುಕಿದ್ದಾರೆ ಎಂದು ಯೆಸಿಲಯುರ್ತ್ ಮೇಯರ್ ಸುದ್ದಿವಾಹಿನಿಯೊಂದಕ್ಕೆ ತಿಳಿಸಿದ್ದಾರೆ.

ದಕ್ಷಿಣ ಟರ್ಕಿ ಮತ್ತು ಉತ್ತರ ಸಿರಿಯಾದಲ್ಲಿ ಫೆಬ್ರುವರಿ 6ರಂದು ಪ್ರಬಲ 7.8 ಕಂಪನಾಂಕ ತೀವ್ರತೆಯ ಭೂಕಂಪ ಸಂಭವಿಸಿತ್ತು. ಈ ದುರ್ಘಟನೆಯಲ್ಲಿ 48,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಮತ್ತೆ ಆಗಿರುವ ಭೂಕಂಪ ಜನರನ್ನು ಆತಂಕಕ್ಕೀಡು ಮಾಡಿದೆ.

ನೇಪಾಳ: ಪ್ರಚಂಡ ಸರ್ಕಾರಕ್ಕೆ ಬೆಂಬಲ ವಾಪಸ್

ಕಠ್ಮಂಡು (ಪಿಟಿಐ): ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ (ಪ್ರಚಂಡ) ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಅವರ ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ್- ಯುನಿಫೈಡ್ ಮಾರ್ಕ್ಸಿಸ್ಟ್-ಲೆನಿನಿಸ್ಟ್ (ಸಿಪಿಎನ್-ಯುಎಂಎಲ್) ಪಕ್ಷವು ಸೋಮವಾರ ಹಿಂಪಡೆದಿದೆ.

ಸಿಪಿಎನ್-ಯುಎಂಎಲ್ ಪಕ್ಷ ಬೆಂಬಲ ವಾಪಸ್ ಪಡೆದಿರುವುದರಿಂದ ಪ್ರಚಂಡ ಅವರ ನೇತೃತ್ವದ ಸರ್ಕಾರದ ಮೇಲೆ ತಕ್ಷಣ ಯಾವುದೇ ಪರಿಣಾಮ ಬೀರುವುದಿಲ್ಲ. ಏಕೆಂದರೆ, ಪ್ರಚಂಡ ಅವರ ನೇತೃತ್ವದ ಸರ್ಕಾರಕ್ಕೆ ನೇಪಾಳಿ ಕಾಂಗ್ರೆಸ್ ಪಕ್ಷದ (ಎನ್‌ಸಿ) 89 ಶಾಸಕರ ಬೆಂಬಲ ಇದೆ.

ಮುಂಬರುವ ನೇಪಾಳ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ನೇಪಾಳಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ರಾಮಚಂದ್ರ ಪೌದೇಲ್ ಅವರಿಗೆ ಸಿಪಿಎನ್-ಯುಎಂಎಲ್ ಬೆಂಬಲ ಸೂಚಿಸಲು ನಿರ್ಧರಿಸಿರುವುದೇ ಈ ಮೈತ್ರಿ ಮುರಿಯಲು ಮುಖ್ಯ ಕಾರಣ ಎನ್ನಲಾಗಿದೆ.

ನೇಪಾಳದಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ಮಾರ್ಚ್ 9ರಂದು ಚುನಾವಣೆ ನಡೆಯಲಿದೆ.

'ಚೀನಾ ಲ್ಯಾಬ್‌ನಿಂದ ಕೋವಿಡ್ ಹರಡಿರುವ ಸಾಧ್ಯತೆ ಹೆಚ್ಚು'

ವಾಷಿಂಗ್ಟನ್ (ಪಿಟಿಐ): ಕೋವಿಡ್ 19 ಸಾಂಕ್ರಾಮಿಕಕ್ಕೆ ಕಾರಣವಾಗಿರುವ ವೈರಾಣುವು ಚೀನಾದ ಪ್ರಯೋಗಾಲಯದಿಂದ ಹೊರಬಿದ್ದಿರುವ ಸಾಧ್ಯತೆ ಹೆಚ್ಚಿದೆ ಎಂದು ಅಮೆರಿಕದ ಮಾಧ್ಯಮವೊಂದು ಇತ್ತೀಚೆಗೆ ಶ್ವೇತಭವನಕ್ಕೆ ಸಲ್ಲಿಸಲಾಗಿರುವ ವರ್ಗೀಕರಿಸಿದ ಗುಪ್ತಚರ ವರದಿ ಆಧರಿಸಿ ವರದಿ ಮಾಡಿದೆ. ಆದರೆ ಚೀನಾ ಈ ವರದಿಯನ್ನು ತಿರಸ್ಕರಿಸಿದೆ.

ವೈರಾಣು ಹರಡುವಿಕೆ ಕುರಿತು ಯುಎಸ್ ಡಿಪಾರ್ಟ್‌ಮೆಂಟ್ ಆಫ್ ಎನರ್ಜಿ ಅಧ್ಯಯನ ನಡೆಸಿದೆ. ವೈರಾಣು ಚೀನಾ ಪ್ರಯೋಗಾಲಯದಿಂದ ಆಕಸ್ಮಿಕವಾಗಿ ಹರಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಚೀನಾದ ವುಹಾನ್ ಸಿಟಿಯ ಹುನನ್ ಮಾರುಕಟ್ಟೆಯೇ ಕೋವಿಡ್–19 ಸಾಂಕ್ರಾಮಿಕ ಹರಡಲು ಕಾರಣವಾದ ಸಾರ್ಸ್–ಕೋವ್–2 ವೈರಾಣುವಿನ ಕೇಂದ್ರಬಿಂದು. 2019ರ ಕೊನೆಯಲ್ಲಿ ವುಹಾನ್‌ನಲ್ಲಿ ಪತ್ತೆಯಾದ ವೈರಾಣು ತ್ವರಿತಗತಿಯಲ್ಲಿ ವಿಶ್ವದಾದ್ಯಂತ ಹರಡಿತು ಎನ್ನಲಾಗಿದೆ.ಈ ವೈರಾಣು ಸಹಜವಾಗಿ ಪ್ರಸರಣ ಹೊಂದಿರಬಹುದು ಎಂದು ಈ ಕುರಿತು ಅಧ್ಯಯನ ನಡೆಸುತ್ತಿದ್ದ ಇತರ ನಾಲ್ಕು ಸಂಸ್ಥೆಗಳು ಹೇಳಿವೆ. ಇನ್ನೂ ಎರಡು ಸಂಸ್ಥೆಗಳು ಯಾವುದೇ ತೀರ್ಮಾನಕ್ಕೆ ಬಂದಿಲ್ಲ.

'ಉಕ್ರೇನ್‌ನಲ್ಲಿ ಮಾನವ ಹಕ್ಕುಗಳ ಭಾರಿ ಉಲ್ಲಂಘನೆ'

ಜಿನೀವಾ (ಎಪಿ): ಉಕ್ರೇನ್ ಮೇಲಿನ ಪೂರ್ಣ ಪ್ರಮಾಣದ ಆಕ್ರಮಣವು ಇಂದು ವಿಶ್ವದಲ್ಲೇ ಮಾನವ ಹಕ್ಕುಗಳ ಅತ್ಯಂತ ಭಾರಿ ಉಲ್ಲಂಘನೆಯಾಗಿ ಮಾರ್ಪಟ್ಟಿದೆ ಎಂದು ವಿಶ್ವಸಂಸ್ಥೆಯ ಮುಖ್ಯಸ್ಥರು ಸೋಮವಾರ ಹೇಳಿದ್ದಾರೆ.

ಜಿನೀವಾದಲ್ಲಿ ಮಾನವ ಹಕ್ಕುಗಳ ಮಂಡಳಿಯಲ್ಲಿ ಭಾಷಣ ಮಾಡಿದ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್, ರಷ್ಯಾದ ಆಕ್ರಮಣವು ವ್ಯಾಪಕ ಸಾವು–ನೋವು, ವಿನಾಶ ತೆರೆದಿಟ್ಟಿದೆ ಎಂದರು

ಪಾಕ್ ನಿವೃತ್ತ ಸೇನಾಧಿಕಾರಿಯ ಬಂಧನ

ಇಸ್ಲಾಮಾಬಾದ್ (ಪಿಟಿಐ): ರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಸಾರ್ವಜನಿಕರನ್ನು ಪ್ರಚೋದಿಸಿದ ಆರೋಪದ ಮೇಲೆ ಪಾಕಿಸ್ತಾನ ಸೇನೆಯ ನಿವೃತ್ತ ಉನ್ನತ ಅಧಿಕಾರಿ ಲೆಫ್ಟಿನೆಂಟ್ ಜನರಲ್ ಅಮ್ಜದ್ ಶೋಯೆಬ್ ಅವರನ್ನು ಸೋಮವಾರ ಬೆಳಗ್ಗೆ ಬಂಧಿಸಲಾಗಿದೆ.

ಅಮ್ಜದ್ ಅವರು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಬೆಂಬಲಿಗರಾಗಿದ್ದು, ವಾಹಿನಿಗೆ ನೀಡಿದ ಸಂದರ್ಶನದಲ್ಲಿ ರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಹೇಳಿಕೆ ನೀಡಿದ್ದರು.

ಫೈನಲ್‌ಗೆ ಮಿಥುನ್

ಪುಣೆ (ಪಿಟಿಐ): ಕರ್ನಾಟಕದ ಮಿಥುನ್ ಮಂಜುನಾಥ್ ಅವರು ಇಲ್ಲಿ ನಡೆಯುತ್ತಿರುವ 84ನೇ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಮಿಥುನ್ 21–19, 21–13 ರಲ್ಲಿ ಎರಡನೇ ಶ್ರೇಯಾಂಕದ ಆಟಗಾರ ಕೆ.ಶ್ರೀಕಾಂತ್‌ಗೆ ಆಘಾತ ನೀಡಿದರು.

ಮಂಗಳವಾರ ನಡೆಯಲಿರುವ ಫೈನಲ್‌ನಲ್ಲಿ ಮಿಥುನ್ ಅವರು ಮಧ್ಯಪ್ರದೇಶದ ಪ್ರಿಯಾನ್ಶು ರಾಜಾವತ್ ವಿರುದ್ಧ ಸೆಣಸುವರು.

ನೊವಾಕ್ ದಾಖಲೆ

ಪ್ಯಾರಿಸ್ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಎಟಿಪಿ ಟೆನಿಸ್ ರ‍್ಯಾಂಕಿಂಗ್‌ನಲ್ಲಿ 378 ವಾರಗಳ ಕಾಲ ಅಗ್ರಸ್ಥಾನದಲ್ಲಿ ಮುಂದುವರಿಯುವ ಮೂಲಕ ಮಾಜಿ ಆಟಗಾರ್ತಿ ಸ್ಟೆಫಿ ಗ್ರಾಫ್ ಅವರ ದಾಖಲೆಯನ್ನು ಅಳಿಸಿಹಾಕಿದ್ದಾರೆ.

ಜರ್ಮನಿಯ ಸ್ಟೆಫಿ ಗ್ರಾಫ್ ಅವರು ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ 377 ವಾರ ಅಗ್ರಸ್ಥಾನದಲ್ಲಿದ್ದರು. ಜೊಕೊವಿಚ್ ಅವರು 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ ಆಗಿದ್ದಾರೆ.

ಸಿದ್ಧಾಂತ್, ಶಶಾಂಕ್ ಮತ್ತು ಆಯುಷ್

ಟಿಟಿ: ಕರ್ನಾಟಕದ ಆಟಗಾರರಿಗೆ ಕಂಚು

ಬೆಂಗಳೂರು: ಕರ್ನಾಟಕದ ಆಯುಷ್ ಕುರುಮುಂಜಿ– ಸಿದ್ಧಾಂತ್ ವಾಸನ್ ಜೋಡಿ ಮತ್ತು ಶಶಾಂಕ್ ಕೇಶವ್ ರಾವ್ ಅವರು ರಾಷ್ಟ್ರೀಯ ಕೆಡೆಟ್ ಮತ್ತು ಸಬ್‌ಜೂನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕಗಳನ್ನು ಗೆದ್ದರು.

ಕೇರಳದ ಆಲಪ್ಪುಳದಲ್ಲಿ ನಡೆಯುತ್ತಿರುವ ಟೂರ್ನಿಯ 15 ವರ್ಷದೊಳಗಿನವರ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಆಯುಷ್–ಸಿದ್ಧಾಂತ್ 11-8, 11-13, 11-13, 9-11ರಿಂದ ಅಸ್ಸಾಂನ ಪ್ರಿಯಾನುಜ್– ದಿವ್ಯಜ್ ಎದುರು ಸೋಲನುಭವಿಸಿದರು. 13 ವರ್ಷದೊಳಗಿನವರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಶಶಾಂಕ್ 7-11, 7-11, 11-9, 11-13ರಿಂದ ಬಂಗಾಳದ ಆದಿತ್ಯ ದಾಸ್ ಎದುರು ಸೋತರು.

ಹಾಕಿ: ರಾಷ್ಟ್ರೀಯ ಅಂತರ ಇಲಾಖಾ ಟೂರ್ನಿ

ಆರ್‌ಎಸ್‌ಪಿಬಿ, ಪಿಎಸ್‌ಪಿಬಿಗೆ ಜಯ

ಪ್ರಜಾವಾಣಿ ವಾರ್ತೆ

ಪಿಎಸ್‌ಪಿಬಿ ಮತ್ತು ಕೆನರಾ ಬ್ಯಾಂಕ್ ತಂಡಗಳ ನಡುವಣ ಪೈಪೋಟಿ

ಬೆಂಗಳೂರು: ರೈಲ್ವೇಸ್ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ಮತ್ತು ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಪಿಎಸ್‌ಪಿಬಿ) ತಂಡಗಳು ಹಾಕಿ ಇಂಡಿಯಾ ಆಶ್ರಯದಲ್ಲಿ ನಡೆಯುತ್ತಿರುವ ಪುರುಷರ ರಾಷ್ಟ್ರೀಯ ಅಂತರ ಇಲಾಖಾ ಹಾಕಿ ಟೂರ್ನಿಯಲ್ಲಿ ಗೆದ್ದವು.

ಸೋಮವಾರ 'ಎ' ಗುಂಪಿನ ಪಂದ್ಯದಲ್ಲಿ ಆರ್‌ಎಸ್‌ಪಿಬಿ 2–1 ಗೋಲುಗಳಿಂದ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ತಂಡವನ್ನು ಮಣಿಸಿತು.

ಯುವರಾಜ್ ವಾಲ್ಮೀಕಿ (31ನೇ ನಿ.) ಮತ್ತು ಅಮಿತ್ ರೋಹಿದಾಸ್ (54ನೇ ನಿ.) ಅವರು ಗೋಲು ಗಳಿಸಿ ರೈಲ್ವೆ ತಂಡದ ಗೆಲುವಿಗೆ ಕಾರಣರಾದರು. ಫುಡ್ ಕಾರ್ಪೊರೇಷನ್ ತಂಡಕ್ಕೆ ಮನೀಷ್ ರಾಣಾ (42ನೇ ನಿ.) ಗೋಲು ತಂದಿತ್ತರು.

ಪಿಎಸ್‌ಪಿಬಿ 7–3 ಗೋಲುಗಳಿಂದ ಕೆನರಾ ಬ್ಯಾಂಕ್ ವಿರುದ್ಧ ಗೆದ್ದಿತು. ಗುರ್ಜಿಂದರ್ ಸಿಂಗ್ (6, 20), ಅಂಕಿತ್ ಪಾಲ್ (27, 37), ಸುನಿಲ್ ಯಾದವ್ (2), ತಲ್ವಿಂದರ್ ಸಿಂಗ್ (51) ಮತ್ತು ಮಣಿಂದರ್ ಸಿಂಗ್ (58) ಅವರು ಪಿಎಸ್‌ಪಿಬಿ ಪರ ಚೆಂಡನ್ನು ಗುರಿ ಸೇರಿಸಿದರು.

ಕೆನರಾ ಬ್ಯಾಂಕ್ ತಂಡಕ್ಕೆ ಪ್ರಧಾನ್ ಸೋಮಯ್ಯ (32), ರಾಜ್ ಜಿ. ಪೃಥ್ವಿ (48) ಹಾಗೂ ಎಂ.ಗಣೇಶ್ (52) ಗೋಲು ಗಳಿಸಿದರು.

ಗೋಲಿನ ಮಳೆಗರೆದ ಏರ್ ಇಂಡಿಯಾ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ 14–0 ಗೋಲುಗಳಿಂದ ಸ್ಪೋರ್ಟ್ಸ್ ಅಥಾರಿಟಿ ಆಫ್ ಗುಜರಾತ್ ಹಾಕಿ ಅಕಾಡೆಮಿ ತಂಡವನ್ನು ಪರಾಭವಗೊಳಿಸಿತು.

ಶ್ರೇಯಸ್ ಧುಪೆ (19, 20 ಮತ್ತು 41ನೇ ನಿ.) ಅವರು ಹ್ಯಾಟ್ರಿಕ್ ಗೋಲು ಗಳಿಸಿದರೆ, ಪ್ರಣಾಮ್ ಗೌಡ (8, 35), ಸಿ.ಜೆ.ರಾಹುಲ್ (18, 24) ಮತ್ತು ಪೌಲುಸ್ ಲಾಕ್ರ (32, 45) ತಲಾ ಎರಡು ಗೋಲುಗಳನ್ನು ಹೊಡೆದರು.

ದಿನದ ಕೊನೆಯ ಪಂದ್ಯದಲ್ಲಿ ಆಲ್ ಇಂಡಿಯಾ ಪೊಲೀಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ 9–1ರಲ್ಲಿ ತಮಿಳುನಾಡು ಪೊಲೀಸ್ ವಿರುದ್ಧ ಜಯಿಸಿತು.

ಇಂಗ್ಲೆಂಡ್ ಜಯಕ್ಕೆ 258 ರನ್ ಗುರಿ

ವೆಲಿಂಗ್ಟನ್ (ಎಪಿ): ಕೇನ್ ವಿಲಿಯಮ್ಸನ್ (132 ರನ್) ಅವರ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಗೆಲುವಿಗೆ 258 ರನ್‌ಗಳ ಗುರಿ ನೀಡಿದೆ.

ವೆಲಿಂಗ್ಟನ್‌ನ ಬೇಸಿನ್ ರಿಸರ್ವ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗುರಿ ಬೆನ್ನಟ್ಟಿರುವ ಇಂಗ್ಲೆಂಡ್, ನಾಲ್ಕನೇ ದಿನವಾದ ಸೋಮವಾರದ ಆಟದ ಅಂತ್ಯಕ್ಕೆ 1 ವಿಕೆಟ್‌ಗೆ 48 ರನ್ ಗಳಿಸಿದೆ. ಕೊನೆಯ ದಿನ 210 ರನ್ ಗಳಿಸುವ ಗುರಿ ಪ್ರವಾಸಿ ತಂಡದ ಮುಂದಿದೆ. ಬೆನ್ ಡಕೆಟ್ ಮತ್ತು ಒಲಿ ರಾಬಿನ್ಸನ್ ಕ್ರೀಸ್‌ನಲ್ಲಿದ್ದಾರೆ.

ಇದಕ್ಕೂ ಮುನ್ನ 3 ವಿಕೆಟ್‌ಗಳಿಗೆ 203 ರನ್‌ಗಳಿಂದ ಆಟ ಮುಂದುವರಿಸಿದ್ದ ಆತಿಥೇಯ ತಂಡ 2ನೇ ಇನಿಂಗ್ಸ್‌ನಲ್ಲಿ 483 ರನ್ ಪೇರಿಸಿತು. ವಿಲಿಯಮ್ಸನ್ ಗಳಿಸಿದ ಶತಕ, ಟಾಮ್ ಬ್ಲಂಡೆಲ್ (91) ಮತ್ತು ಡೇರಿಲ್ ಮಿಚೆಲ್ (54) ಅವರ ಅರ್ಧಶತಕಗಳು ತಂಡದ ಉತ್ತಮ ಮೊತ್ತಕ್ಕೆ ಕಾರಣವಾಯಿತು.

ವಿಲಿಯಮ್ಸನ್ ದಾಖಲೆ: ವಿಲಿಯಮ್ಸನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್ ಪರ ಅತಿಹೆಚ್ಚು ರನ್ ಗಳಿಸಿದ ದಾಖಲೆ ತಮ್ಮದಾಗಿಸಿಕೊಂಡರು. ಅವರು 92 ಟೆಸ್ಟ್ ಪಂದ್ಯಗಳ 161 ಇನಿಂಗ್ಸ್‌ಗಳಿಂದ 7,787 ರನ್ ಕಲೆಹಾಕಿದ್ದಾರೆ. ರಾಸ್ ಟೇಲರ್ (7,683 ರನ್) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. ಟೇಲರ್ ಅವರು 112 ಪಂದ್ಯಗಳಲ್ಲಿ ಆಡಿದ್ದರು.

ಕೇನ್ ವಿಲಿಯಮ್ಸನ್ –ಎಎಫ್‌ಪಿ ಚಿತ್ರ

ಟೆಸ್ಟ್‌ನಲ್ಲಿ 26ನೇ ಶತಕ ಗಳಿಸಿದ ವಿಲಿಯಮ್ಸನ್ ಒಟ್ಟು 282 ಎಸೆತಗಳನ್ನು ಎದುರಿಸಿ 12 ಬೌಂಡರಿ ಹೊಡೆದರು. ವಿಲಿಯಮ್ಸನ್ ಮತ್ತು ಬ್ಲಂಡೆಲ್ 6ನೇ ವಿಕೆಟ್‌ಗೆ 158 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ ಮೊದಲ ಇನಿಂಗ್ಸ್ 8 ವಿಕೆಟ್‌ಗಳಿಗೆ 435 ಡಿಕ್ಲೇರ್ಡ್. ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 209 ಮತ್ತು ಎರಡನೇ ಇನಿಂಗ್ಸ್ 162.3 ಓವರ್‌ಗಳಲ್ಲಿ 483 (ಕೇನ್ ವಿಲಿಯಮ್ಸನ್ 132, ಹೆನ್ರಿ ನಿಕೊಲ್ಸ್ 29, ಡೇರಿಲ್ ಮಿಚೆಲ್ 54, ಟಾಮ್ ಬ್ಲಂಡೆಲ್ 90, ಜಾಕ್ ಲೀಚ್ 157ಕ್ಕೆ 5) ಇಂಗ್ಲೆಂಡ್ ಎರಡನೇ ಇನಿಂಗ್ಸ್ 11 ಓವರ್‌ಗಳಲ್ಲಿ 1 ವಿಕೆಟ್‌ಗೆ 48 (ಜಾಕ್ ಕ್ರಾಲಿ 24, ಬೆನ್ ಡಕೆಟ್ ಬ್ಯಾಟಿಂಗ್ 23, ಟಿಮ್ ಸೌಥಿ 19ಕ್ಕೆ 1)

ಟಿ20 ವಿಶ್ವಕಪ್‌ನ 'ಅತ್ಯಂತ ಪ್ರಭಾವಿ ತಂಡ'ದಲ್ಲಿ ರಿಚಾ

ಕೇಪ್‌ಟೌನ್ (ಪಿಟಿಐ): ಭಾರತದ ವಿಕೆಟ್ ಕೀಪರ್ ಬ್ಯಾಟರ್ ರಿಚಾ ಘೋಷ್ ಅವರು ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ 'ಅತ್ಯಂತ ಪ್ರಭಾವಿ ತಂಡ'ದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಭಾನುವಾರ ಕೊನೆಗೊಂಡ ಟೂರ್ನಿಯ 11 ಶ್ರೇಷ್ಠ ಆಟಗಾರ್ತಿಯರನ್ನು ಒಳಗೊಂಡ ತಂಡವನ್ನು ಐಸಿಸಿ ಸೋಮವಾರ ಪ್ರಕಟಿಸಿದೆ.

ರಿಚಾ, ಟೂರ್ನಿಯಲ್ಲಿ 136 ರನ್ ಗಳಿಸಿದ್ದರು. ಪಾಕಿಸ್ತಾನ ವಿರುದ್ಧ ಅಜೇಯ 31, ವೆಸ್ಟ್ ಇಂಡೀಸ್ ವಿರುದ್ಧ ಅಜೇಯ 44 ಹಾಗೂ ಇಂಗ್ಲೆಂಡ್ ವಿರುದ್ಧ ಅಜೇಯ 47 ರನ್ ಕಲೆಹಾಕಿದ್ದರು. ವಿಶ್ವಕಪ್ ಜಯಿಸಿದ ಆಸ್ಟ್ರೇಲಿಯಾದ ನಾಲ್ವರು ತಂಡದಲ್ಲಿದ್ದಾರೆ.

ತಂಡ ಹೀಗಿದೆ: ಅಲಿಸಾ ಹೀಲಿ, ಆ್ಯಶ್ಲಿ ಗಾರ್ಡನರ್, ಡಾರ್ಸಿ ಬ್ರೌನ್, ಮೇಗನ್ ಶುಟ್ (ಆಸ್ಟ್ರೇಲಿಯಾ), ತಜ್ಮಿನ್ ಬ್ರಿಟ್, ಲಾರಾ ವೊಲ್ವಾರ್ಡ್ಟ್, ಶಬ್ನಿಮ್ ಇಸ್ಮಾಯಿಲ್ (ದಕ್ಷಿಣ ಆಫ್ರಿಕಾ), ನಥಾಲಿ ಸಿವರ್ ಬ್ರಂಟ್, ಸೋಫಿ ಎಕ್ಲೆಸ್ಟೋನ್ (ಇಂಗ್ಲೆಂಡ್), ರಿಚಾ ಘೋಷ್ (ಭಾರತ), ಕರಿಷ್ಮಾ ರಮರಾಕ್ (ವೆಸ್ಟ್ ಇಂಡೀಸ್). 12ನೇ ಆಟಗಾರ್ತಿ: ಓರ್ಲಾ ಪ್ರೆಂಡರ್‌ಗಾಸ್ಟ್ (ಐರ್ಲೆಂಡ್)

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ. ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.
e-mail :- knnl@knnlindia.com ಫೋನ್ :0836–2315225 ಫ್ಯಾಕ್ಸ್:2315226.
Website:- www.knnlindia.com e-mail :-eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಎ.ಇ–3/ಇ–ಟೆಂಡರ/2022–23/2960 ದಿ: 24–02–2023

ಅಲ್ಪಾವಧಿ ಟೆಂಡರ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ **4701 SCP TSP** ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ **6** ಕಾಮಗಾರಿಗಳಿಗೆ **(2ನೇ ಕರೆ)** ಶೇಕಡಾವಾರು ಟೆಂಡರನ್ನು ಏಕಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.
Work Indent No :- 35824, 35833, 35317, 35318, 35320 & 35620 (2ನೇ ಕರೆ)
ಕಾಮಗಾರಿಯ ಅಂದಾಜು ಮೊತ್ತ: ರೂ.5.00 ಲಕ್ಷಗಳಿಂದ ರೂ.25 ಲಕ್ಷಗಳು
ಇ.ಎಂ.ಡಿ ಮೊತ್ತ:– ರೂ.6,250/– ಗಳಿಂದ ರೂ. 25,000/– ಲಕ್ಷಗಳು
ಸೂಚನೆ:– 35317, 35320, 35620 (ಪರಿಶಿಷ್ಟ ಜಾತಿಗೆ ಸೇರಿದ ಗುತ್ತಿಗೆದಾರರಿಗೆ ಮಾತ್ರ)
35824 (ಪರಿಶಿಷ್ಟ ಪಂಗಳಕ್ಕೆ ಸೇರಿದ ಗುತ್ತಿಗೆದಾರರಿಗೆ ಮಾತ್ರ)
ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ: **10/03/2023** ರ **4.00 pm** ತನಕ ಸಲ್ಲಿಸಬಹುದಾಗಿದೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **13/03/2023** ರಂದು ಮುಂಜಾನೆ: **11.00 am** ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ http://eproc.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ/ಧಾ/1156/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–1/JJM/Ten.Nofi/2022–23/2321
ದಿನಾಂಕ:23.02.2023

ಟೆಂಡರು ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ – 2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬಳ್ಳಾರಿರವರು, ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು, ಕಂಪ್ಲಿ ಮತ್ತು ಸಿರುಗುಪ್ಪ ತಾಲ್ಲೂಕುಗಳಿಗೆ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡ ಕಾರ್ಯತ್ಮಕ ನಳ ಸಂಪರ್ಕದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ **ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ:27/02/2023 ರಿಂದ 07/03/2023 ರಂದು ಸಂಜೆ 4.00 ರವರೆಗೆ** ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ ದಿನಾಂಕ:08/03/2023 ರಂದು **ಸಂಜೆ 5.00** ಗಂಟೆಗೆ ತೆರೆಯಲಾಗುವುದು ಹಾಗೂ ದಿನಾಂಕ: 03/03/2023 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ:03/03/2023 ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/961/ಕೆಎಸ್‌ಎಂಸಿಎ/2022–23

ಕರ್ನಾಟಕ ಸರ್ಕಾರ
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಮೂಅಬಂ&ಒಜಸಾಇ)
ಕೊಠಡಿ ಸಂಖ್ಯೆ 8, ವಿಕಾಸಸೌಧ, ಬೆಂಗಳೂರು–560 001
ದೂರವಾಣಿ: 080–22034069/70 ಇ–ಮೇಲ್:director.idd@gmail.com
ಸಂ:ಐಡಿಡಿ/94/ಐಟಿಎಸ್/2022 ದಿನಾಂಕ: 27.02.2023

ಪಿಪಿಪಿ ಮಾದರಿಯಲ್ಲಿ ಮೂಲಸೌಲಭ್ಯ ಯೋಜನೆಗಳ ಅನುಷ್ಠಾನಕ್ಕಾಗಿ ಸಮಾಲೋಚಕ ಸಲಹೆಗಾರರನ್ನು (TA) ಎಂಪ್ಯಾನಲ್‌ಮೆಂಟ್ ಮಾಡಲು ಅರ್ಹತೆಗಾಗಿ ಆರ್.ಎಫ್.ಕ್ಯೂ ಆಹ್ವಾನ

ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ (ಮೂಅಬಂ&ಒಜಸಾಇ), ಕರ್ನಾಟಕ ಸರ್ಕಾರ ಇವರು ಪಿಪಿಪಿ ಮಾದರಿಯಲ್ಲಿ ಐದು ವಿಸ್ತೃತ ವಲಯಗಳಲ್ಲಿ ಮೂಲ ಸೌಕರ್ಯ ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು/ಏಜೆನ್ಸಿಗಳಿಂದ ಅಗತ್ಯವಿರುವ TA ಸೇವೆಗಳನ್ನು ಒದಗಿಸಲು ಸಮಾಲೋಚಕ ಸಲಹೆಗಾರರನ್ನು ಎಂಪ್ಯಾನೆಲ್‌ಮೆಂಟ್ ಮಾಡಿಕೊಳ್ಳಲು ಪ್ರಸ್ತಾಪಿಸಲಾಗಿದೆ. TA ಎಂಪ್ಯಾನೆಲ್‌ಮೆಂಟ್‌ಗಾಗಿ ಅನುಭವವುಳ್ಳ ಸಲಹಾ ಸಂಸ್ಥೆಗಳಿಂದ ಆರ್‌ಎಫ್‌ಕ್ಯೂ ಅನ್ನು ಆಹ್ವಾನಿಸಲಾಗಿದೆ. ಸಲಹಾ ಸಂಸ್ಥೆಗಳು ಎಂಪ್ಯಾನೆಲ್‌ಮೆಂಟ್‌ಗಾಗಿ ಆರ್‌ಎಫ್‌ಕ್ಯೂನಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅರ್ಹತಾ ಅಗತ್ಯತೆಗಳನ್ನು ಪೂರೈಸಬೇಕಾಗುತದೆ.
ಅರ್ಜಿದಾರರಿಗೆ ಸೂಚನೆಗಳು, ಅರ್ಹತಾ ಅಗತ್ಯತೆಗಳು, ಮೌಲ್ಯಮಾಪನದ ಮಾನದಂಡಗಳು ಮತ್ತುಇತರೆ ನಿಯಮ ಹಾಗೂ ನಿಬಂಧನೆಗಳು ಇತ್ಯಾದಿಗಳನ್ನು ಒಳಗೊಂಡಿರುವ ಆರ್‌ಎಫ್‌ಕ್ಯೂ ದಸ್ತಾವೇಜುಗಳನ್ನು ಮೇಲೆ ತಿಳಿಸಿದ ವಿಳಾಸದ ಮೂಅಬಂ&ಒಜಸಾಇ ಕಛೇರಿಯಿಂದ ಅಥವಾ ಮೂಅಬಂ&ಒಜಸಾಇ ವೆಬ್‌ಸೈಟ್: **(https://idd.karnataka.gov.in)**ನಿಂದ ಡೌನ್‌ಲೋಡ್ ಮಾಡುವ ಮೂಲಕ ಪಡೆಯಬಹುದು. ಪೂರ್ಣಗೊಂಡ ಆರ್‌ಎಫ್‌ಕ್ಯೂಅನ್ನು ಸಲ್ಲಿಸಲು ಕೊನೆಯ **ದಿನಾಂಕ:14.03.2023, ಸಂಜೆ 4.30ಗಂಟೆವರೆಗೆ.** ಹೆಚ್ಚಿನ ಮಾಹಿತಿ/ಸ್ಪಷ್ಟೀಕರಣಕ್ಕಾಗಿ ಶ್ರೀ ಸತ್ಯನಾರಾಯಣ ಭಟ್, ಟೆಕ್ಸಾಕ್ 9945802607 ರವರನ್ನು ಸಂಪರ್ಕಿಸಬಹುದು.
ಮೂಅಬಂ&ಒಜಸಾಇಯು ಯಾವುದೇ ಕಾರಣವನ್ನು ನೀಡದೆ, ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಮೂಅಬಂ&ಒಜಸಾಇಯ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಅರ್ಜಿದಾರರ ಮೇಲೆ ಬದ್ಧವಾಗಿರುತ್ತದೆ.
ಸಹಿ/– ನಿರ್ದೇಶಕರು (ಪಿಪಿಪಿ ಕೋಶ)

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
ಸಂಖ್ಯೆ: ಕಗೃಮಂ/ಕಾ.ಅ/ಹಂಚಿಕೆ–5/ಲಾಟರಿ/2022–23 ದಿನಾಂಕ: 24.02.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ದಕ್ಷಿಣ ತಾಲ್ಲೂಕು, ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ದಿನಾಂಕ: 06.03.2023 ರಂದು ಇ–ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದೆಂದು ತಿಳಿಸಿ ದಿನಾಂಕ: 09.02.2023 ರಂದು ಪ್ರಜಾವಾಣಿ ಹಾಗೂ ವಿಜಯಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿತ್ತು. ಆದರೆ ಕಾರಣಾಂತರಗಳಿಂದ ಸದರಿ ದಿನಾಂಕದಂದು ನಡೆಯಬೇಕಿದ್ದ ಇ–ಲಾಟರಿ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ಇ–ಲಾಟರಿ ದಿನಾಂಕವನ್ನು ನಂತರ ತಿಳಿಸಲಾಗುವುದು.
ಸಹಿ/– ಗೃಹ ಆಯುಕ್ತರು, ಕಗೃಮಂ, ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/4971/2022–23

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಕೃಷ್ಣರಾಜ ಸಾಗರ ಆಧುನೀಕರಣ ಮತ್ತು ಮಧ್ಯಮ ನೀರಾವರಿ ಯೋಜನಾ ವಿಭಾಗ, ಮಳವಳ್ಳಿ. ಜಿಲ್ಲೆ: ಮಂಡ್ಯ ಪಿನ್‌ಕೋಡ್–571430

ಟೆಂಡರ್ ಪ್ರಕಟಣೆ ಸಂಖ್ಯೆ 06/2022–23 ದಿನಾಂಕ:22.02.2023

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ **06/2022–23** ದಿನಾಂಕ **22.02.2023** ರಲ್ಲಿ ಒಟ್ಟು **2** ಕಾಮಗಾರಿ **(ಅಂದಾಜಿನ ಕನಿಷ್ಟ ಮೊತ್ತ 18.63 ಗರಿಷ್ಠ ಮೊತ್ತ 88.70 ಲಕ್ಷ)** ಗಳಿಗೆ **ಕೆ.ಡಬ್ಲ್ಯೂ–1 & ಕೆ.ಡಬ್ಲ್ಯೂ–3** ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ **www.eproc.karnataka.gov.in** ನಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಇಂಜನಿಯರ್,
ಕಾವೇರಿ ನೀರಾವರಿ ನಿಗಮ ನಿಯಮಿತ, ಕೆಆರ್‌ಎಸ್‌ಎಂ ಅಂಡ್ ಎಂಐಪಿ ವಿಭಾಗ, ಮಳವಳ್ಳಿ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/724/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ, 12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಮಹಾಲಕ್ಷ್ಮೀಪುರಂ ಬೆಂಗಳೂರು–560 096.
ಸಂಖ್ಯೆ:ಕಾಪಾಅ/ಮಲಪು/ಟೆಂಡರ್/ಇ–ಪ್ರೋ/23/2022–23 ದಿನಾಂಕ: 27–02–2023

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ) (ಕೆಡಬ್ಲ್ಯೂ–4)
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ರವರು ಈ ಕೆಳಕಂಡ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಕಾಮಗಾರಿಯ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1.	ವಾರ್ಡ್ ನಂ.56 ಶಂಕರಮಠದಲ್ಲಿ ರಸ್ತೆ ಮತ್ತು ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.	200.00	ರೂ.3.00 (ಇ–ಪೋರ್ಟಲ್ ಮೂಲಕ ರೂ.1.00 ಲಕ್ಷ ಮತ್ತು ಉಳಿದ ಮೊತ್ತ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್)

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **ದಿನಾಂಕ: 01–03–2023** ರಿಂದ ಡೌನ್‌ಲೋಡ್ ಮಾಡಬಹುದು. 2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ: 08–03–2023 ಸಂಜೆ 4:00 ಗಂಟೆಗೆ** ಅಥವಾ ಅದಕ್ಕೂ ಮುಂಚಿತವಾಗಿ. 3) ಪೂರ್ವ-ಬಿಡ್ ಸಭೆಯು ಮುಖ್ಯ ಅಭಿಯಂತರರು (ಪಶ್ಚಿಮ), ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ ಬೆಂಗಳೂರು ಇಲ್ಲಿ **ದಿನಾಂಕ: 04–03–2023 ಬೆಳಗ್ಗೆ 11:00 ಗಂಟೆಗೆ** ನಡೆಸಲಾಗುವುದು. 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 09–03–2023ರ ಸಂಜೆ 4:30 ಗಂಟೆಗೆ**. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ಭೇಟಿನೀಡಿ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ.

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್‌ಜೆಪಿ ಆವರಣ, ಬೆಂಗಳೂರು
ಸಂ:ಕಾಅ/ಕವಿ1/ಸಕಾಅ–5/58/2022–23 ದಿನಾಂಕ: 24.02.2023

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)

ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ದಾರರು ಗುತ್ತಿಗೆ ಪಡೆಯಲು ಅರ್ಹತೆಗಾಗಿ ಟೆಂಡರ್‌ದಾರರಿಗೆ ಸೂಚನೆಯ ಕಲಂ 3 ರಲ್ಲಿ ವಿವರಿಸಿರುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಕೋರಲಾಗಿದೆ. (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ4).
ಕಾಮಗಾರಿ ಹೆಸರು: **ಬೆಂಗಳೂರಿನ ರಾಜಾಜಿನಗರದ ಯಶವಂತಪುರ ಅವರಣದಲ್ಲಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್&ಡಿಎಲ್) ಆವರಣದಲ್ಲಿ ಸಾಬೂನು ಉತ್ಪಾದನಾ ಘಟಕಕ್ಕೆ ಹೊಸ ಕಟ್ಟಡ ನಿರ್ಮಾಣ KPWD/2022-23/BD/WORK_INDENT 164961.**
ಅಂದಾಜು ಮೊತ್ತ: **ರೂ. 2175.42 ಲಕ್ಷಗಳು**. ಇಎಂಡಿ: **ರೂ.21.76 ಲಕ್ಷಗಳು** (ರೂ.1.00 ಲಕ್ಷಗಳು ಇ–ಪ್ರೊಕ್ಯೂರ್‌ಮೆಂಟ್ ಮೂಲಕ. ಉಳಿದ ರೂ. 20.76 ಲಕ್ಷಗಳು ಬಿಜಿ, ಎನ್‌ಎಸ್‌ಸಿ, ಎಫ್‌ಡಿಆರ್, ಬ್ಯಾಂಕರ್ಸ್ ಸರ್ಟಿಫಿಕೆಟ್ ಮುಂತಾದವುಗಳ ಮೂಲಕ) ಪೂರ್ಣಗೊಳಿಸುವ ಅವಧಿ: **18 ತಿಂಗಳು (ಮಳೆಗಾಲ ಸೇರಿದಂತೆ). ಕರೆ–1.**
ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: **10.03.2023 ರವರೆಗೆ**. ಬಿಡ್ ಪೂರ್ವ ಸಭೆ: **06.03.2023 ಬೆಳಗ್ಗೆ 11.00 ಗಂಟೆಗೆ**. ಮೇಲ್ಕಂಡ ಕಛೇರಿಯಲ್ಲಿ. ಇ–ಪ್ರೊಕ್ಯೂರ್‌ಮೆಂಟ್ ಮಾರ್ಗಸೂಚಿಗಳ ಅನ್ವಯ ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **10.03.2023, 16.30 ಗಂಟೆಯೊಳಗೆ**. ಇತರೆ ವಿವರಗಳಿಗೆ ಟೆಂಡರ್ ದಸ್ತಾವೇಜುಗಳನ್ನು ನೋಡುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ-ಸಿ.ಪಿ/4956/ಎಂಸಿಎ/2022-23

ಕ್ರಿಕೆಟ್: ಭಾರತ– ಆಸ್ಟ್ರೇಲಿಯಾ ಮೂರನೇ ಟೆಸ್ಟ್ ನಾಳೆಯಿಂದ

ರಾಹುಲ್, ಶುಭಮನ್ ಅಭ್ಯಾಸ

ಇಂದೋರ್ (ಪಿಟಿಐ): ಆಸ್ಟ್ರೇಲಿಯಾ ತಂಡದ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಸಜ್ಜಾಗುತ್ತಿರುವ ಭಾರತ ತಂಡದ ಆಟಗಾರರು ಸೋಮವಾರ ಹೋಳ್ಕರ್ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು.

ಸತತ ವೈಫಲ್ಯ ಅನುಭವಿಸಿರುವ ಕೆ.ಎಲ್.ರಾಹುಲ್ ಮತ್ತು ಅಂತಿಮ ಇಲೆವೆನ್‌ನಲ್ಲಿ ಸ್ಥಾನ ಪಡೆಯಲು ಸ್ಪರ್ಧೆಯಲ್ಲಿರುವ ಯುವ ಆಟಗಾರ ಶುಭಮನ್ ಗಿಲ್ ಅವರು ಏಕಕಾಲದಲ್ಲಿ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದ್ದು ಗಮನ ಸೆಳೆಯಿತು.

ಕೋಚ್ ರಾಹುಲ್ ದ್ರಾವಿಡ್ ಅವರ ಸಮ್ಮುಖದಲ್ಲಿ ಇಬ್ಬರೂ ಅಕ್ಕಪಕ್ಕದ ನೆಟ್ಸ್‌ನಲ್ಲಿ ಸುಮಾರು 30 ನಿಮಿಷ ಬ್ಯಾಟ್ ಮಾಡಿದರು. ಸ್ಪಿನ್ ಹಾಗೂ ವೇಗದ ಬೌಲರ್‌ಗಳ ಮುಂದೆ ಆಡಿದರು. ಆ ಬಳಿಕ ಕೆಲಹೊತ್ತು ಥ್ರೋಡೌನ್‌ಗಳನ್ನೂ ಎದುರಿಸಿದರು.

47 ಟೆಸ್ಟ್‌ಗಳಿಂದ 33.44ರ ಸರಾಸರಿ ಹೊಂದಿರುವ ರಾಹುಲ್, ಈಚೆಗಿನ 5 ಟೆಸ್ಟ್‌ಗಳಲ್ಲಿ ಅಲ್ಪಮೊತ್ತಕ್ಕೆ ವಿಕೆಟ್ ಒಪ್ಪಿಸಿದ್ದರು. ಇದರಿಂದ ಟೀಕೆಗೆ ಗುರಿಯಾಗಿದ್ದರು. ಗಿಲ್ ಬದಲು ರಾಹುಲ್‌ಗೆ ಮತ್ತೆ ಮತ್ತೆ ಅವಕಾಶ ನೀಡಿದ್ದನ್ನು ಮಾಜಿ ಆಟಗಾರರು ಪ್ರಶ್ನಿಸಿದ್ದರು.

ಆದ್ದರಿಂದ ಬುಧವಾರ ಆರಂಭವಾಗುವ ಮೂರನೇ ಟೆಸ್ಟ್‌ಗೆ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ಪಡೆಯಲು ರಾಹುಲ್– ಗಿಲ್ ನಡುವೆ ಸ್ಪರ್ಧೆ ಏರ್ಪಟ್ಟಿದೆ. ತಂಡದ ವ್ಯವಸ್ಥಾಪನ ಮಂಡಳಿಯು ಯಾರಿಗೆ ಅವಕಾಶ ನೀಡಲಿದೆ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಬಾರ್ಡರ್– ಗಾವಸ್ಕರ್ ಟೆಸ್ಟ್ ಸರಣಿಯಲ್ಲಿ ಭಾರತ ಈಗಾಗಲೇ 2–0 ಯಿಂದ ಮುನ್ನಡೆ ಸಾಧಿಸಿರುವುದರಿಂದ ಮೂರನೇ ಟೆಸ್ಟ್‌ಗೆ ತಂಡದಲ್ಲಿ ಯಾವುದೇ ಬದಲಾವಣೆ ಮಾಡಬಾರದು ಎಂಬ ಮಾತುಗಳೂ ಕೇಳಿಬಂದಿವೆ. ಹಾಗಾದಲ್ಲಿ ಫಾರ್ಮ್ ಕಂಡುಕೊಳ್ಳಲು ರಾಹುಲ್‌ಗೆ ಕೊನೆಯ ಅವಕಾಶ ಸಿಗುವ ಸಾಧ್ಯತೆಯಿದೆ.

ರೋಹಿತ್ ಶರ್ಮ ಮತ್ತು ವಿರಾಟ್ ಕೊಹ್ಲಿ ನೆಟ್ಸ್‌ನಲ್ಲಿ ‘ಆಕ್ರಮಣಕಾರಿ’ ಮೂಡ್‌ನಲ್ಲಿದ್ದರು. ರೋಹಿತ್, ಪುಲ್, ಸ್ವೀಪ್ ಮತ್ತು ರಿವರ್ಸ್ ಸ್ವೀಪ್ ಹೊಡೆತಗಳತ್ತ ಗಮನ ಹರಿಸಿದ್ದು ಕಂಡುಬಂತು.

ಕಳೆದ ಎರಡು ಪಂದ್ಯಗಳಲ್ಲಿ ಬ್ಯಾಟಿಂಗ್‌ನಲ್ಲೂ ಮಿಂಚಿದ್ದ ಆರ್. ಅಶ್ವಿನ್ ಮತ್ತು ಅಕ್ಷರ್ ಪಟೇಲ್ ಅವರು ಬೌಲಿಂಗ್ ಜತೆ ಬ್ಯಾಟಿಂಗ್ ಅಭ್ಯಾಸ ನಡೆಸುವತ್ತಲೂ ಗಮನ ಹರಿಸಿದರು. ಆಸ್ಟ್ರೇಲಿಯಾ ತಂಡದ ಆಟಗಾರರೂ ಪೂರ್ಣಪ್ರಮಾಣದ ತಾಲೀಮು ಕೈಗೊಂಡರು.


ಶುಭಮನ್ ಗಿಲ್ ಮತ್ತು ರಾಹುಲ್ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಮೂರನೇ ಟೆಸ್ಟ್‌ನಲ್ಲಿ ಆಡುವೆ: ಸ್ಟಾರ್ಕ್

‘ಗಾಯದಿಂದ ಚೇತರಿಸಿಕೊಂಡಿದ್ದರೂ ಶೇ 100 ರಷ್ಟು ಫಿಟ್‌ನೆಸ್ ಪಡೆದುಕೊಂಡಿಲ್ಲ. ಆದರೂ ಮೂರನೇ ಟೆಸ್ಟ್‌ನಲ್ಲಿ ಕಣಕ್ಕಿಳಿಯಲಿದ್ದೇನೆ’ ಎಂದು ಆಸ್ಟ್ರೇಲಿಯಾ ತಂಡದ ವೇಗದ ಬೌಲರ್ ಮಿಷೆಲ್ ಸ್ಟಾರ್ಕ್ ಹೇಳಿದ್ದಾರೆ.

ನಾಯಕ ಪ್ಯಾಟ್ ಕಮಿನ್ಸ್ ಈ ಪಂದ್ಯಕ್ಕೆ ಅಲಭ್ಯರಾಗಿರುವ ಕಾರಣ, ಸ್ಟಾರ್ಕ್ ಅವರು ವೇಗದ ಬೌಲಿಂಗ್ ವಿಭಾಗಕ್ಕೆ ಬಲ ತುಂಬಲಿದ್ದಾರೆ.

'ಉತ್ತಮ ಲಯದಲ್ಲಿ ಬೌಲ್ ಮಾಡಲು ಆಗುತ್ತಿದೆ. ಆದರೂ ಒಮ್ಮೊಮ್ಮೆ ಅಲ್ಪ ಸಮಸ್ಯೆ ಎದುರಿಸುತ್ತೇನೆ. ಶೇ 100 ರಷ್ಟು ಫಿಟ್‌ನೆಸ್ ಹೊಂದಿಲ್ಲದೆ ಇದ್ದಾಗ ಈ ಹಿಂದೆ ಕೂಡಾ ಪಂದ್ಯಗಳನ್ನು ಆಡಿದ್ದೇನೆ’ ಎಂದು ತಿಳಿಸಿದರು.

ಟಿ20: 10 ರನ್‌ಗೆ ಐಲ್ ಆಫ್ ಮ್ಯಾನ್ ಆಲೌಟ್!

ಕಾರ್ಟಜೀನಾ, ಸ್ಪೇನ್ (ರಾಯಿಟರ್ಸ್): ಐಲ್ ಆಫ್ ಮ್ಯಾನ್ ದ್ವೀಪದ ತಂಡ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಕೇವಲ 10 ರನ್‌ಗಳಿಗೆ ಆಲೌಟಾಯಿತು. ಚುಟುಕು ಕ್ರಿಕೆಟ್‌ನಲ್ಲಿ ತಂಡವೊಂದು ಗಳಿಸಿದ ಕನಿಷ್ಠ ಮೊತ್ತ ಇದು.

ಸ್ಪೇನ್ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಐಲ್ ಆಫ್ ಮ್ಯಾನ್ 8.4 ಓವರ್‌ಗಳಲ್ಲಿ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಆರು ಬ್ಯಾಟರ್‌ಗಳು ಶೂನ್ಯಕ್ಕೆ ಔಟಾದರು. ಮೊಹಮ್ಮದ್ ಕಮ್ರನ್ ಮತ್ತು ಆತಿಫ್ ಮೆಹಮೂದ್ ಅವರು ತಲಾ ನಾಲ್ಕು ವಿಕೆಟ್‌ಗಳನ್ನು ಹಾಗೂ ಲಾರ್ನ್ ಬರ್ನ್ಸ್ ಎರಡು ವಿಕೆಟ್ ಪಡೆದರು. ಸ್ಪೇನ್ ತಂಡ ಕೇವಲ ಎರಡು ಎಸೆತಗಳಲ್ಲಿ ಗೆಲುವಿನ ಗುರಿ ತಲುಪಿತು.

ಆಸ್ಟ್ರೇಲಿಯಾದಲ್ಲಿ ನಡೆಯುವ ಬಿಗ್ ಬ್ಯಾಷ್ ಲೀಗ್‌ನಲ್ಲಿ ಸಿಡ್ನಿ ಥಂಡರ್ ತಂಡ ಅಡಿಲೇಡ್ ಸ್ಟ್ರೈಕರ್ಸ್ ಎದುರು 15 ರನ್‌ಗಳಿಗೆ ಆಲೌಟಾಗಿದ್ದು, ಟಿ20ಯಲ್ಲಿ ತಂಡವೊಂದರ ಅತ್ಯಂತ ಕನಿಷ್ಠ ಮೊತ್ತ ಆಗಿತ್ತು.

ಬ್ರಿಟನ್– ಐರ್ಲೆಂಡ್ ಮಧ್ಯೆ ಇರುವ ಐಲ್ ಆಫ್ ಮ್ಯಾನ್ ದ್ವೀಪದ ತಂಡ ಸ್ಪೇನ್ ವಿರುದ್ಧದ ಆರು ಪಂದ್ಯಗಳ ಸರಣಿಯನ್ನು 0–5 ರಲ್ಲಿ ಸೋತಿತು. ಒಂದು ಪಂದ್ಯ ಮಳೆಯಿಂದ ರದ್ದುಗೊಂಡಿತ್ತು.

ಸೌದಿಗೆ ಸೋತ ಭಾರತ

ಫಿಬಾ ವಿಶ್ವಕಪ್ ಏಷ್ಯನ್ ಅರ್ಹತಾ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ತಂಡದವರು ಫಿಬಾ ವಿಶ್ವಕಪ್ ಏಷ್ಯನ್ ಅರ್ಹತಾ ಟೂರ್ನಿಯ ಕೊನೆಯ ಪಂದ್ಯದಲ್ಲೂ ಸೋಲು ಅನುಭವಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ‘ಇ’ ಗುಂಪಿನ ಪಂದ್ಯದಲ್ಲಿ ಭಾರತ 60–71ರಿಂದ ಸೌದಿ ಅರೇಬಿಯಾ ಎದುರು ಮಣಿಯಿತು. ಕ್ವಾಲಿಫೈಯರ್ಸ್‌ನಲ್ಲಿ ಆಡಿದ ಎಲ್ಲ 10 ಪಂದ್ಯಗಳಲ್ಲೂ ಭಾರತ ನಿರಾಸೆ ಅನುಭವಿಸಿ ಕೊನೆಯ ಸ್ಥಾನ ಗಳಿಸಿತು.

ಪಂದ್ಯದಲ್ಲಿ ಸೌದಿ ಅರೇಬಿಯಾ ಪರ ಮೊಹಮ್ಮದ್ ಅಲ್ಸುವಾಲೆಮ್ 27 ಪಾಯಿಂಟ್ಸ್ ಗಳಿಸಿ ಮಿಂಚಿದರು. ಮಾತ್ನಾ ಅಲ್ಮರ್ವಾಣಿ (17 ಪಾಯಿಂಟ್ಸ್) ಗೆಲುವಿಗೆ ಕೊಡುಗೆ ನೀಡಿದರು.

ಭಾರತ ತಂಡಕ್ಕಾಗಿ ಅರವಿಂದ್ ಎಂ. ಕೃಷ್ಣನ್ (24 ಪಾ.) ಮತ್ತು ಪ್ರಶಾಂತ್ ರಾವತ್ (10 ಪಾ.) ಆಟ ವ್ಯರ್ಥವಾಯಿತು.

ಭಾರತದ ಅರವಿಂದ್ ಎಂ. ಕೃಷ್ಣನ್ ಚೆಂಡನ್ನು ಬ್ಯಾಸ್ಕೆಟ್‌ಗೆ ಸೇರಿಸಲು ಪ್ರಯತ್ನಿಸಿದರು

ಈ ವರ್ಷ ವಿಶ್ವಕಪ್ ಟೂರ್ನಿಯು ಆಗಸ್ಟ್ 25ರಿಂದ ಸೆಪ್ಟೆಂಬರ್ 10ರವರೆಗೆ ಫಿಲಿಪ್ಪೀನ್ಸ್, ಜಪಾನ್ ಮತ್ತು ಇಂಡೊನೇಷ್ಯಾಗಳಲ್ಲಿ ನಡೆಯಲಿದೆ.

ಅರ್ಜೆಂಟೀನಾಗೆ ಅರ್ಹತೆ ಇಲ್ಲ (ಎಎಫ್‌ಪಿ ವರದಿ): ಬ್ಯಾಸ್ಕೆಟ್‌ಬಾಲ್ ಕ್ರೀಡೆಯ ಶಕ್ತಿ ಕೇಂದ್ರ ಎನಿಸಿರುವ ಅರ್ಜೆಂಟೀನಾ ತಂಡವು 1982ರ ಬಳಿಕ ಇದೇ ಮೊದಲ ಬಾರಿ ಅರ್ಹತೆ ಗಳಿಸಲು ವಿಫಲವಾಯಿತು. ಭಾನುವಾರ ಸಾವೊ ಪಾಲೊದಲ್ಲಿ ನಡೆದ ಅಮೆರಿಕನ್ ಕ್ವಾಲಿಫೈಯರ್ಸ್ ಪಂದ್ಯದಲ್ಲಿ ಅರ್ಜೆಂಟೀನಾ 75–79ರಿಂದ ಡೊಮಿನಿಕನ್ ರಿಪಬ್ಲಿಕ್ ತಂಡದ ಎದುರು ಸೋತಿತು.

ಕಳೆದ ಬಾರಿಯ ವಿಶ್ವಕಪ್ ಫೈನಲ್‌ನಲ್ಲಿ ಅರ್ಜೆಂಟೀನಾ ತಂಡವು ಸ್ಪೇನ್ ಎದುರು ಸೋತು ರನ್ನರ್ಸ್ ಅಪ್ ಆಗಿತ್ತು.

ಹಾಕಿ: ಹರ್ಮನ್‌ಪ್ರೀತ್ ಸಿಂಗ್‌ಗೆ ಸಾರಥ್ಯ

ನವದೆಹಲಿ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ಅವರು ಆಸ್ಟ್ರೇಲಿಯಾ ಹಾಗೂ ಜರ್ಮನಿ ತಂಡಗಳ ವಿರುದ್ಧ ನಡೆಯಲಿರುವ ಪ್ರೊ ಲೀಗ್ ಹಾಕಿ ಪಂದ್ಯಗಳಿಗೆ ಭಾರತ ತಂಡದ ನಾಯಕತ್ವ ವಹಿಸಲಿದ್ದಾರೆ.

ಈ ಪಂದ್ಯಗಳು ಒಡಿಶಾದ ರೂರ್ಕೆಲಾದಲ್ಲಿ ನಡೆಯಲಿವೆ. ಹಾರ್ದಿಕ್ ಸಿಂಗ್ ತಂಡದ ಉಪನಾಯಕರಾಗಿದ್ದಾರೆ.

ಆಸ್ಟ್ರೇಲಿಯಾದ ಡೇವಿಡ್ ಜಾನ್, ಬಿ.ಜೆ. ಕಾರ್ಯಪ್ಪ ಮತ್ತು ಶಿವೇಂದ್ರ ಸಿಂಗ್ ತಂಡದ ಹಂಗಾಮಿ ಕೋಚ್‌ಗಳಾಗಿದ್ದಾರೆ.

ಮಾರ್ಚ್ 10ರಂದು ಭಾರತ ಮೊದಲ ಪಂದ್ಯದಲ್ಲಿ ಜರ್ಮನಿ ಎದುರು ಆಡಲಿದೆ.

ಭಾರತ ತಂಡ: ಗೋಲ್‌ಕೀಪರ್ಸ್: ಶ್ರೀಜೇಶ್ ಪಿ.ಆರ್, ಪವನ್. **ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್ (ನಾಯಕ), ಜುಗರಾಜ್ ಸಿಂಗ್, ನಿಲಂ ಸಂಜೀಪ್ ಕ್ಸೆಸ್, ಜರ್ಮನ್‌ಪ್ರೀತ್ ಸಿಂಗ್, ಸುಮಿತ್, ಮಂಜೀತ್ ಮತ್ತು ಮನ್‌ಪ್ರೀತ್ ಸಿಂಗ್. **ಮಿಡ್‌ಫೀಲ್ಡರ್ಸ್:** ಹಾರ್ದಿಕ್ ಸಿಂಗ್ (ಉಪನಾಯಕ), ವಿವೇಕ್ ಸಾಗರ್ ಪ್ರಸಾದ್, ಮೊಯಿರಂಗ್‌ದೆಮ್ ರವಿಚಂದ್ರ ಸಿಂಗ್, ವಿಷ್ಣುಕಾಂತ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಶಂಷೇರ್ ಸಿಂಗ್ ಮತ್ತು ರಾಜ್‌ಕುಮಾರ್ ಪಾಲ್ **ಫಾರ್ವರ್ಡ್ಸ್:** ಎಸ್. ಕಾರ್ತಿ, ಸುಖಜೀತ್ ಸಿಂಗ್, ಅಭಿಷೇಕ್ ಮತ್ತು ಗುರ್ಜಂತ್ ಸಿಂಗ್

ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿ

ಎಫ್‌ಸಿಬಿಯು, ಡೆಂಪೊಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡದವರು ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಎಫ್‌ಸಿಬಿಯು 4–1ರಿಂದ ಎಂಇಜಿ ತಂಡವನ್ನು ಮಣಿಸಿತು. ವಿಜೇತ ತಂಡಕ್ಕೆ ಇರ್ಫಾನ್ ಯಾದವಾಡ 2ನೇ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಸೆಲ್ವಿನ್ ಫ್ರೆಜಿಯರ್ ಮಿರಾಂಡ (27ನೇ ನಿ.), ಸುಭಾ ಘೋಷ್ (58ನೇ ನಿ.) ಮತ್ತು ನಿಖಿಲ್ ಮಾಳಿ (68ನೇ ನಿ.) ಗೋಲು ದಾಖಲಿಸಿದರು. ಎಂಇಜಿ ತಂಡದ ಏಕೈಕ ಗೋಲನ್ನು ಇಮ್ನಾಕುಂ (84ನೇ ನಿ.) ಗಳಿಸಿದರು.

‘ಎ’ ಗುಂಪಿನ ಇನ್ನೊಂದು ಪಂದ್ಯದಲ್ಲಿ ಡೆಂಪೊ ಎಸ್‌ಸಿ 2–0ರಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಸೋಲಿಸಿತು. ಡೆಂಪೊ ತಂಡಕ್ಕಾಗಿ ವಿನಯ್ ವಿಜಯ್ ಹರ್ಜಿ (74ನೇ ನಿ.), ಅಸ್ಮೋನ್ ಮೆವನ್ ವೆಗಾಸ್ (77ನೇ ನಿ.) ಗೋಲು ಹೊಡೆದರು.

ಸೆಮಿಗೆ ಎಎಸ್‌ಸಿ: ‘ಬಿ’ ಗುಂಪಿನಲ್ಲಿ ಎಎಸ್‌ಸಿ 2–0ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿ ಸೆಮಿಫೈನಲ್ ತಲುಪಿತು. ವಿಜೇತ ತಂಡದ ಪರ ಖುಂದೊಂಗಬಮ್ ಸೋಮಾನಂದ (55ನೇ ನಿ.), ಫ್ರಾನ್ಸಿಸ್ ಜೊನುತ್ಲುಂಗಾ (90 + 5ನೇ ನಿ.) ಗೋಲು ಗಳಿಸಿದರು.

ಎಎಸ್‌ಸಿ ಸೆಂಟರ್ ಎಫ್‌ಸಿಯ ಥಿಂಗಮ್ ಬಿ. ಸಿಂಗ್ (ಎಡ) ಮತ್ತು ರೂಟ್ಸ್ ಎಫ್‌ಸಿಯ ಸಚಿನ್ ಕರ್ಣನ್ ಚೆಂಡಿನ ಮೇಲೆ ಹತೋಟಿಗೆ ಪ್ರಯತ್ನಿಸಿದರು – ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಸಂಕ್ಷಿಪ್ತ ಸುದ್ದಿ

ದೇಹದಾರ್ಢ್ಯ ಸ್ಪರ್ಧೆ: ಮಲ್ಲಿಕಾರ್ಜುನ್‌ಗೆ ಚಿನ್ನದ ಪದಕ

ಬೆಂಗಳೂರು: ಕರ್ನಾಟಕದ ಮಲ್ಲಿಕಾರ್ಜುನ್ ಶಂಕರ್ ಅವರು ಮಿಸ್ಟರ್ ವರ್ಲ್ಡ್ ದೇಹದಾರ್ಢ್ಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಮಲ್ಲಿಕಾರ್ಜುನ್

ಸಿಂಗಪುರದಲ್ಲಿ ಅಲ್ಲಿಯ ಫಿಟ್‌ನೆಸ್ ಫೆಡರೇಷನ್ ಸಂಸ್ಥೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಅವರಿಗೆ ಪದಕ ಒಲಿದಿದೆ. ಮಲ್ಲಿಕಾರ್ಜುನ್ ಅವರು ನಗರದ ಮಹಾಲಕ್ಷ್ಮಿ ಬಡಾವಣೆ ರೆಸಿಡೆಂಟ್ಸ್ ಫೋರಮ್‌ನಲ್ಲಿ ದೇಹದಾರ್ಢ್ಯ ತಾಲೀಮು ಮಾಡುತ್ತಾರೆ.

ಗುಜರಾತ್ ಜೈಂಟ್ಸ್‌ಗೆ ಮೂನಿ ನೇತೃತ್ವ

ಮುಂಬೈ (ಪಿಟಿಐ) ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಬೆಥ್ ಮೂನಿ ಅವರು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತದ ಆಲ್‌ರೌಂಡರ್ ಸ್ನೇಹಾ ರಾಣಾ ಅವರು ಉಪನಾಯಕಿಯ ಜವಾಬ್ದಾರಿ ನಿಭಾಯಿಸಲಿದ್ದಾರೆ.

‘ಚೊಚ್ಚಲ ಡಬ್ಲ್ಯುಪಿಎಲ್ ಟೂರ್ನಿಯಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮುನ್ನಡೆಸುವ ಅವಕಾಶ ಲಭಿಸಿರುವುದು ಸಂತಸ ಉಂಟುಮಾಡಿದೆ’ ಎಂದಿದ್ದಾರೆ ಮೂನಿ.

ಡಬ್ಲ್ಯುಪಿಎಲ್ ಟೂರ್ನಿ ಮಾರ್ಚ್ 4ರಿಂದ ನಡೆಯಲಿದೆ.

ವಾಲಿಬಾಲ್: ಕೋಲ್ಕತ್ತಗೆ ಜಯ

ಕೊಚ್ಚಿ: ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಸೆಮಿಫೈನಲ್ ಸ್ಥಾನ ಖಚಿತಪಡಿಸಿದೆ. ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ತಂಡವು 15-12, 15-9, 15-14, 15-13, 10-15ರಿಂದ ಚೆನ್ನೈ ಬ್ಲಿಟ್ಜ್ ಎದುರು ಗೆದ್ದಿತು.

ಮಂಗಳವಾರ ಬೆಂಗಳೂರು ಟಾರ್ಪಿಡೋಸ್ ತಂಡವು ಕ್ಯಾಲಿಕಟ್ ಹೀರೋಸ್ ತಂಡವನ್ನು ಎದುರಿಸಲಿದೆ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; Website: www.honda2wheelersindia.com; Customer Care: customercare@honda2wheelersindia.com

*Finance Scheme offers are available through select preferred finance partners on select models for select profiles of customers at their sole discretion and are subject to Finance Company Policy. Finance Schemes available at select Dealerships till 28th Feb'23 only & can be withdrawn at any time without prior notice. No two offers can be clubbed together. Product shown in the picture may vary from the actual product available in the market. Accessories shown in the product are not part of the standard equipment.

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 08025139199, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397; Haiku Honda - DOMLUR: 49656565, 9342432156; INDIRANAGAR: 9343796289, 080 - 41133737; Dhruvdesh Honda - MEKHRI CIRCLE: 40500700, 9972237311; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 26574467/68, 9844502222; BANSHANKARI: 9844502444, 8722279009; R.R. NAGAR: 9964388333, 9071174800; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BG ROAD: 8553004004; KKP ROAD: 8553004002; PUTTENHALLI: 7353251007; GOTTIGERE: 8553004009; BTM: 7353252007; VFM Honda - KR PURAM: 49499299, 9071858885, 9071858881; HENNUR ROAD: 9108989817, 9108989818; Tansi Honda - HOODI: 080-45510000, 7259030091; MARTHAHALLI: 080-67166600, 7259030093; VARTHUR RD: 8105597877, 9686573013; GUNJUR: 9606450642, 9606450641; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 08153-266606, 9900092115; MULBAGAL: 9008941044; SRINIVASAPUR: 8495956515; Namma Honda - CHIKKABALLAPUR: 9606060610, 9900071211; CHINTAMANI: 9606060620, 9606060690; BAGEPALLI: 9611596112, 9611596110; Shankar Honda - GOWRIBIDANUR: 9900007422/33; SLN Honda - SHIDLAGATTA: 9986160961; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030; KANAKAPURA: 9606036053; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 9731414444.
For Bulk/Institutional enquiries, please write us at: institutionalsales@honda2wheelersindia.com